| ಕ್ರಮ ಸಂಖೆ | ವಿಷಯ | ಪುಟ ಸಂಖ್ಯೆ |
|---|---|---|
| 1. | ಇಲಾಖೆಯ ದೂರದೃಷ್ಟಿ, ಗುರಿ, ಉದ್ದೇಶ | 1–9 |
| 2. | 2.1 ಪಂಚಾಯತ್ ರಾಜ್ ಶಾಖೆ<br>2.2 ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ | 10–31 |
| 3. | ಗ್ರಾಮ ಸ್ವರಾಜ್ ಯೋಜನೆ | 32–35 |
| 4. | ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ<br>4.1 ಗ್ರಾಮೀಣ ಕೂಲಿ ಉದ್ಯೋಗ ಕಾರ್ಯಕ್ರಮಗಳು | 36–45 |
| 5. | ***ಗ್ರಾಮೀಣ ಮೂಲಭೂತ ಸೌಲಭ್ಯಗಳು – 1***<br>5.1 ಗ್ರಾಮೀಣ ಸಂಪರ್ಕ<br>ರಸ್ತೆ ಮತ್ತು ಸೇತುವೆಗಳು<br>ನಬಾರ್ಡ್ ನೆರವಿನ ಯೋಜನೆ<br>ಮುಖ್ಯ ಮಂತ್ರಿ ರಸ್ತೆ ಅಭಿವೃದ್ಧಿ ಯೋಜನೆ [ಸಿಎಂಜಿಎಸ್‌ವೈ]<br>5.2 ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ<br>ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆ [ಪಿಎಂಜಿಎಸ್‌ವೈ]<br>ನಮ್ಮ ಗ್ರಾಮ–ನಮ್ಮ ರಸ್ತೆ [ಸಿಎಂಆರ್‌ಆರ್‌ಎಫ್] | 46–51 |
| 6. | ***ಗ್ರಾಮೀಣ ಮೂಲಭೂತ ಸೌಲಭ್ಯಗಳು – 2***<br>6.1 ಸ್ವ ಉದ್ಯೋಗ ಕಾರ್ಯಕ್ರಮಗಳು<br>6.2 ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮ<br>6.3 ಗ್ರಾಮೀಣ ಇಂಧನ ಕಾರ್ಯಕ್ರಮಗಳು<br>ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ<br>ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ<br>ಸೌರ ಬೆಳಕು ಕಾರ್ಯಕ್ರಮ<br>6.4 ಮಹಾತ್ಮಾಗಾಂಧಿ ಪ್ರಾದೇಶಿಕ ಗ್ರಾಮೀಣ ಇಂಧನ & ಅಭಿವೃದ್ಧಿ ಸಂಸ್ಥೆ, ಜಕ್ಕೂರು<br>6.5 ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ<br>6.6 ಸುವರ್ಣ ಗ್ರಾಮೋದಯ ಯೋಜನೆ<br>6.7 ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ<br>6.8 ಬಿ.ಆರ್.ಜಿ.ಎಫ್. | 52–96 |
| 7. | ***ಕರ್ನಾಟಕ ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಸಂಸ್ಥೆ***<br>7.1 ಗ್ರಾಮೀಣ ನೀರು ಸರಬರಾಜು & ನೈರ್ಮಲೀಕರಣ<br>7.2 ವಿಶ್ವಬ್ಯಾಂಕ್ ನೆರವಿನ ಎರಡನೇ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ– "ಜಲನಿರ್ಮಲ" ಯೋಜನೆ<br>7.3 ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮ | 97–131 |
| 8. | ಅನುಬಂಧಗಳು | 132–153 |

# 1. ಅಧ್ಯಾಯ

**ಇಲಾಖೆಯ ದೃಷ್ಟಿಕೋನ:**

ಪಂಚಾಯತ್ ರಾಜ್ ಸಂಸ್ಥೆಗಳ ಬಲವರ್ಧನೆಯೊಂದಿಗೆ ಸದೃಢ ಹಾಗೂ ಸಮಗ್ರ ಗ್ರಾಮೀಣ ಕರ್ನಾಟಕದ ಅಭಿವೃದ್ಧಿ.

**ಧ್ಯೇಯ:**

1. ಜೀವನಮಟ್ಟವನ್ನು ಉತ್ತಮಪಡಿಸಲು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಗ್ರಾಮೀಣ ಜನರನ್ನು ಸಮರ್ಥರನ್ನಾಗಿಸುವುದು.
2. ಗ್ರಾಮೀಣ ಪ್ರದೇಶದ ಬಡಜನರಿಗೆ ಮೂಲಭೂತ ಸೌಕರ್ಯ ಹಾಗೂ ಸಾಮಾಜಿಕ / ಆರ್ಥಿಕ ಪ್ರಗತಿಗೆ ಅವಕಾಶಗಳನ್ನು ಕಲ್ಪಿಸುವುದು.
3. ಪಂಚಾಯತ್ ರಾಜ್ ಸಂಸ್ಥೆಗಳು ಜವಾಬ್ದಾರಿಯುತವಾಗಿ ಹಾಗೂ ಸಮರ್ಥವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು.
4. ಗ್ರಾಮೀಣ ಜನರ ಜೀವನೋಪಾಯಕ್ಕೆ ಅವಕಾಶಗಳನ್ನು ಕಲ್ಪಿಸುವುದು.

**ಉದ್ದೇಶಗಳು:**

1. ಸ್ವ ಉದ್ಯೋಗ ಕಾರ್ಯಕ್ರಮಗಳ ಮೂಲಕ ಬಡತನ ನಿರ್ಮೂಲನೆ.
2. ಗ್ರಾಮೀಣ ಕುಟುಂಬವೊಂದಕ್ಕೆ ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸುವುದರ ಮೂಲಕ ಅವರ ಜೀವನೋಪಾಯದ ಆಧಾರಗಳನ್ನು ಬಲಪಡಿಸುವುದು.
3. ಗುಣಾತ್ಮಕ ಹಾಗೂ ಧೀರ್ಘ ಬಾಳಿಕೆ ಬರುವಂತಹ ಗ್ರಾಮೀಣ ಮೂಲಭೂತ ಸೌಕರ್ಯಗಳನ್ನು ನಿಗದಿತ ಸಮಯದಲ್ಲಿ ಸೃಜಿಸುವುದರ ಮೂಲಕ ಫಲಾನುಭವಿಯ ಅವಶ್ಯಕತೆಯನ್ನು ಪೂರೈಸುವುದು.
4. ಎಲ್ಲಾ ಗ್ರಾಮೀಣ ಜನವಸತಿಗಳಿಗೆ ಸಾಕಷ್ಟು ಶುದ್ಧ ಕುಡಿಯುವ ನೀರಿನ ಪೂರೈಕೆ.
5. ಸ್ಥಳೀಯ ಸಂಸ್ಥೆಗಳ ಅಂದರೆ ಪಂಚಾಯತ್ ರಾಜ್ ಸಂಸ್ಥೆಗಳ ಸಬಲೀಕರಣ.
6. ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ಹಾಗೂ ಅಧಿಕಾರಿ/ ಸಿಬ್ಬಂದಿಯ ಸಾಮರ್ಥ್ಯಾಭಿವೃದ್ಧಿ.
7. ಸ್ಥಳೀಯ ಆದ್ಯತೆ, ನಿರ್ಧಾರಕ್ಕನುಗುಣವಾಗಿ ಸೇವೆ ನೀಡುವಲ್ಲಿ ಮತ್ತು ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಗ್ರಾಮ ಪಂಚಾಯತಿಗಳು ನೀಡುವ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವುದು.
8. ಗ್ರಾಮೀಣಾಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಟಿತ್ವವನ್ನು ಹೊಂದುವ ಮೂಲಕ ಬಲಿಷ್ಠ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿಪಡಿಸುವುದು.
9. ಗ್ರಾಮೀಣ ಇಂಧನ ಕ್ಷೇತ್ರದಲ್ಲಿ ಅರಿವು ಮೂಡಿಸುವುದು ಹಾಗೂ ಈ ಕ್ಷೇತ್ರದಲ್ಲಿ ಆಗುವ ಹೊಸ ಅಭಿವೃದ್ಧಿಯನ್ನು ಪ್ರಸರಣ ಮಾಡುವುದು.
10. ಪಶ್ಚಿಮ ಘಟ್ಟಗಳ ಪ್ರದೇಶ ಅಭಿವೃದ್ಧಿಗೊಳಿಸುವುದು.
11. ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯಲ್ಲಿರುವ ತೊಡಕುಗಳನ್ನು ನಿವಾರಿಸುವುದು.
12. ಗ್ರಾಮಗಳ ನೈರ್ಮಲ್ಯ ಸುಧಾರಣೆ.
13. ಪಾರದರ್ಶಕ ಆಡಳಿತಕ್ಕೆ ಒತ್ತು ನೀಡುವುದು.

**ಇಲಾಖೆಯ ಕಾರ್ಯ ಚಟುವಟಿಕೆಗಳ ಸ್ಥೂಲ ವಿವರಣೆ:**

ರಾಜ್ಯದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯು ಕೃಷಿ ಉತ್ಪಾದಕತೆ ಮತ್ತು ಇತರೆ ಆರ್ಥಿಕ ಚಟುವಟಿಕೆಗಳ ಸುಧಾರಣೆ, ಮೂಲಭೂತ ಸೌಕರ್ಯಗಳ ಲಭ್ಯತೆ ಮತ್ತು ಅವುಗಳ ಗುಣಮಟ್ಟದ ಸುಧಾರಣೆ ಹಾಗೂ ಸೇವೆಗಳ ಗುಣಮಟ್ಟದ ಸುಧಾರಣೆಯನ್ನು ಅವಲಂಭಿಸಿದ್ದು, ಮಾನವ

ಸಂಪನ್ಮೂಲಗಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನೇರ ಕೊಡುಗೆಯಾಗಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಜನರ ಜೀವನ ಮಟ್ಟ ಸುಧಾರಣೆಗಾಗಿ ಹಾಗೂ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಬೆಳೆಸುವ ದಿಕ್ಕಿನಲ್ಲಿ ಪ್ರಜಾಪ್ರಭುತ್ವದಲ್ಲಿನ ಆಡಳಿತ ವಿಕೇಂದ್ರೀಕರಣಗೊಳಿಸಿ ಗ್ರಾಮದ ಏಳಿಗೆಗೆ ಗ್ರಾಮದ ಜನರೇ ನಿರ್ಧರಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

**

## ಇಲಾಖೆಯ ಆಡಳಿತ ಸ್ವರೂಪ

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು**

↓

**ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು**

↓

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು** **ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್)**

↓

| | | |
|---|---|---|
| ನಿರ್ದೇಶಕರು– ಮ.ಗಾಂ.ರಾ.ಉ.ಖಾ.ಯೋ. | ನಿರ್ದೇಶಕರು–ಕೆ.ಅರ್.ಡಬ್ಲ್ಯೂ.ಎಸ್.ಎಸ್.ಎ | ಮು.ಕಾ.ನಿ.ಅ – ಜಿ.ಪಂ (30) |
| ನಿರ್ದೇಶಕರು– ಗ್ರಾ.ಮೂ.ಸೌ. | ಮು.ಇಂ. – ಪಂ.ರಾಜ್.ಇಂ.ಇಲಾಖೆ | ಕಾ.ನಿ.ಅ – ತಾ.ಪಂ. (176) |
| ನಿರ್ದೇಶಕರು– ಸ್ವ.ಉ.ಕಾ | ನಿರ್ದೇಶಕರು– ಎ.ಎನ್.ಎಸ್.ಎಸ್.ಐ.ಆರ್.ಡಿ. | ಪಂ.ಅ.ಅ– ಗ್ರಾ.ಪಂ (5628) |
| ನಿರ್ದೇಶಕರು– ಪಂ.ರಾಜ್ | ವ್ಯ.ನಿ– ಕೆ.ಆರ್.ಐ.ಡಿ.ಎಲ್ | |
| ನಿರ್ದೇಶಕರು– ಯೋ.ಉ.ಮಾ | ಕಾ.ನಿ.– ಎಂ.ಜಿ.ಐ.ಆರ್.ಇ.ಡಿ | |
| ಉ.ಕಾ – ಆಡಳಿತ (1) | ಮುಖ್ಯಸ್ಥರು – ಗ್ರಾಮ ಸ್ವರಾಜ್ | |
| ಉ.ಕಾ – ಆಡಳಿತ (2) | | |

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಕಾರ್ಯದರ್ಶಿಗಳು ಇಲಾಖೆಯ ಮುಖ್ಯಸ್ಥರಾಗಿದ್ದು, ಇವರುಗಳು ಮೇಲ್ವಿಚಾರಣೆ ಮಾಡುವ ವಿಷಯಗಳ ಹಂಚಿಕೆಯನ್ನು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಗ್ರಾಅಪ/69/ಇತರೆ/2011 ದಿನಾಂಕ:16/08/2011 ರಲ್ಲಿ ಈ ಕೆಳಗಿನಂತೆ ಮಾಡಲಾಗಿದೆ.

# I ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

1. ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (SGSY),
2. ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳು (District Rural Development Agencies)
3. ಸರ್ವ ಕುಟುಂಬ ಸಮೀಕ್ಷೆ (BPL Census)
4. ಜೀತ ಕಾರ್ಮಿಕರ ವಿಮುಕ್ತಿ (RBL)
5. ನ್ಯಾಷನಲ್ ರೂರಲ್ ಲೈವ್ಲಿಹುಡ್ ಮಿಷನ್ (NRLM)
6. ಮಹಿಳಾ ಸಬಲೀಕರಣ (Women Empowerment issue)
7. ಗ್ರಾಮೀಣ ಬಿಸಿನೆಸ್ ಹಬ್ಸ್ (Rural Business Hubs)
8. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGA)
9. ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (SGRY)
10. ಪಂಚತಂತ್ರ (Panchatantra)
11. ಗಣಕೀಕರಣ, ಗಣಕ ಕೋಶ (Computer, Computerization & its related issues)
12. ರಸ್ತೆಗಳು ಮತ್ತು ಸೇತುವೆ ಹಾಗೂ ಸಣ್ಣ ನೀರಾವರಿ ಯೋಜನೆಗಳು ಕೆರೆಗಳು (PMGSY, CMGSY, CMRRF, NABARD, 13th Finance Commission, Plan and NON Plan schemes)
13. ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ವಿಷಯಗಳು (KRRDA)
14. ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಗ್ರಾಮೀಣ ನೀರು ಸರಬರಾಜು ಯೋಜನೆಗಳು
15. ಗ್ರಾಮೀಣ ನೀರು ಸರಬರಾಜು (RWS)
16. ಜಾಗತಿಕ ಬ್ಯಾಂಕ್‌ನೆರವಿನ ಜಲ ನಿರ್ಮಲ ಯೋಜನೆ ಅನುಷ್ಠಾನದ ವಿಷಯಗಳು (Jal Nirmal)
17. ಗ್ರಾಮೀಣ ನೈರ್ಮಲ್ಯ, ನಿರ್ಮಲ ಗ್ರಾಮ ಯೋಜನೆ/ ಸಂಪೂರ್ಣ ಸ್ವಚ್ಛತಾ ಆಂದೋಲನ ಯೋಜನೆ ಅನುಷ್ಠಾನದ ವಿಷಯಗಳು
18. ರಾಜ್ಯ ನೀರು ಮತ್ತು ನೈರ್ಮಲ್ಯ ಸಂಸ್ಥೆ (SWSM)
19. 13ನೇ ಹಣಕಾಸು ಆಯೋಗದ ಅನುದಾನದ ಕುಡಿಯುವ ನೀರಿನ ಯೋಜನೆಗಳು.
20. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು-ಈ ಸಂಸ್ಥೆಗೆ ಸಂಬಂಧಿಸಿದ ವಿಷಯಗಳು (ANSSIRD)
21. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ ತರಬಹುದಾದ ಮುಖ್ಯ ತಿದ್ದುಪಡಿಗಳು ಹಾಗೂ ಇತರೆ ವಿಷಯಗಳು
22. ಕರ್ನಾಟಕ ವಿಕಾಸ
23. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳ ಪ್ರಗತಿ ವರದಿ ತಯಾರಿಕೆ
24. ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ ವರದಿ ತಯಾರಿಕೆ
25. ಎಂಪಿಕ್ ವಿಷಯಗಳು
26. ಯೋಜನೆ ಅನುಷ್ಠಾನ, ಮೌಲ್ಯಮಾಪನ ಹಾಗೂ ಸಮನ್ವಯ
27. ಎಸ್‌ಸಿಪಿ, ಟಿಎಸ್‌ಪಿ ಪ್ರಗತಿ ವರದಿ ಸಮನ್ವಯ

28. ಕೇಂದ್ರ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಡಿ ಸಾಧಿಸಿರುವ ಪ್ರಗತಿ ಪರಿಶೀಲನೆ ಕೈಗೊಳ್ಳಲು ರಚಿಸಲಾಗಿರುವ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಜಾಗ್ರತ ಸಮಿತಿ ಸಭೆಯ ಸಮನ್ವಯ ಕಾರ್ಯ
29. ವಿಧಾನ ಸಭೆ ಸಮಿತಿಗಳು :
    (ಅ) ಸಾರ್ವಜನಿಕ ಲೆಕ್ಕ ಸಮಿತಿ
    (ಆ) ಭರವಸೆ ಸಮಿತಿ
    (ಇ) ಅರ್ಜಿ ಸಮಿತಿ
30. ವಿಧಾನ ಪರಿಷತ್ತು ಸಮಿತಿಗಳು :
    (ಅ) ಭರವಸೆ ಸಮಿತಿ
    (ಆ) ಹಕ್ಕುಬಾಧ್ಯತೆ ಸಮಿತಿ

## II ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

1. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಅನುಷ್ಠಾನ
2. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ನಿರ್ವಹಣೆ
3. ಗ್ರಾಮ ಪಂಚಾಯತ್ ನೌಕರರ ಸೇವಾ ವಿಷಯಗಳು
4. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–1 & ಗ್ರೇಡ್–2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಇವರುಗಳ ಸೇವಾ ವಿಷಯಗಳು
5. ಸಫಾಯಿ ಕರ್ಮಚಾರಿಗಳ ವಿಷಯಗಳು
6. ಹಿಂದುಳಿದ ಪ್ರದೇಶಗಳ ಅನುದಾನ ನಿಧಿ
7. ಗ್ರಾಮೀಣ ಇಂಧನ ಕಾರ್ಯಕ್ರಮ
8. ಮಹಾತ್ಮಗಾಂಧಿ ಪ್ರಾದೇಶಿಕ ಗ್ರಾಮೀಣ ಇಂಧನ & ಅಭಿವೃದ್ಧಿ ಸಂಸ್ಥೆ, ಜಕ್ಕೂರು, ಬೆಂಗಳೂರು ಈ ಸಂಸ್ಥೆಗೆ ಸಂಬಂಧಿಸಿದ ವಿಷಯಗಳು
9. ಸೌರ ಬೆಳಕು ಕಾರ್ಯಕ್ರಮ
10. ಜೈವಿಕ ಇಂಧನ ಮಂಡಳಿ ವಿಷಯಗಳು
11. ಕರ್ನಾಟಕ ಭೂಸೇನಾ ನಿಗಮ ನಿಯಮಿತ, ಬೆಂಗಳೂರು, ಈ ಸಂಸ್ಥೆಯ ವಿಷಯಗಳು
12. ಸುವರ್ಣ ಗ್ರಾಮೋದಯ
13. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ (WGDP)
14. ಗ್ರೂಪ್–ಎ(ಕಿರಿಯ ಶ್ರೇಣಿ) ವೃಂದದ ಅಧಿಕಾರಿಗಳ ಸೇವಾ ವಿಷಯಗಳು.
15. ಗ್ರೂಪ್–ಬಿ ಮತ್ತು ಸಿ ವೃಂದದ ಅಧಿಕಾರಿ/ ನೌಕರರ ಸೇವಾ ವಿಷಯಗಳು
16. ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಹಾಗೂ ಸೇವಾ ವಿಷಯಗಳು
17. ಶಾಸಕಾಂಗ ಸಭೆಗಳು:
    (ಅ) ಕಾಗದ ಪತ್ರಗಳ ಸಮಿತಿ
    (ಆ) ಅಧೀನ ಶಾಸಕಾಂಗ ಸಮಿತಿ

(ಇ) ಅಂದಾಜು ಸಮಿತಿ

(ಈ) ಹಕ್ಕುಭಾದ್ಯತೆ ಸಮಿತಿ

(ಉ) ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆ ಸಮಿತಿ

(ಊ) ಸಾರ್ವಜನಿಕ ಉದ್ದಿಮೆಗಳ ಸಮಿತಿ

19. ವಿಧಾನ ಪರಿಷತ್ತು

(ಅ) ಅರ್ಜಿ ಸಮಿತಿ

## 1.1 ಪ್ರಜಾಪ್ರಭುತ್ವದ ವಿಕೇಂದ್ರೀಕರಣ

ರಾಜ್ಯದ ಗ್ರಾಮೀಣ ಪ್ರದೇಶದ ಆಡಳಿತದಲ್ಲಿ ಪ್ರಜಾಪ್ರಭುತ್ವದ ವಿಕೇಂದ್ರೀಕರಣವನ್ನು ಸಾಧಿಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಉಪಬಂಧಗಳನ್ನು ಅನುಷ್ಠಾನಗೊಳಿಸುವುದು ಪ್ರಮುಖ ಜವಾಬ್ದಾರಿಗಳಲ್ಲಿ ಒಂದಾಗಿದೆ. ಸ್ಥಳೀಯ ಸ್ವಾಯತ್ತತೆಯ ಸ್ಪಂದನಶೀಲ ಸಂಸ್ಥೆಗಳಾಗಿ ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಕಾರ್ಯ ನಿರ್ವಹಿಸುವುದನ್ನು ಖಾತ್ರಿ ಪಡಿಸುವುದಕ್ಕಾಗಿ ಇಲಾಖೆಯು ಮೇಲಿನ ಶಾಸನದಡಿ ಪಂಚಾಯತ್ ರಾಜ್ ಸಂಸ್ಥೆಗಳ ಸ್ಥಾಪನೆಯ ಕಾರ್ಯವಿಧಾನ ಹಾಗೂ ಕರ್ತವ್ಯ ನಿರ್ವಹಣೆ ಮೇಲ್ವಿಚಾರಣೆಯನ್ನು ಮಾಡುತ್ತಿದೆ. ವಿಕೇಂದ್ರೀಕೃತ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ, ಅನುದಾನ ಮತ್ತು ಅಧಿಕಾರಿಗಳನ್ನು ವರ್ಗಾಯಿಸುವುದರ ಮೂಲಕ ಯೋಜನೆಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಜವಾಬ್ದಾರಿಗಳನ್ನು ಜನರೇ ನಿರ್ವಹಿಸುವ ಕ್ರಮಕೈಗೊಳ್ಳಲಾಗಿದೆ. ಇದರಿಂದ ಗ್ರಾಮಸ್ಥರು ತಮ್ಮ ಅಭಿವೃದ್ಧಿಯನ್ನು ತಾವೇ ಮಾಡಿಕೊಳ್ಳಲು ಮತ್ತು ತಮ್ಮ ಗ್ರಾಮದ ಪ್ರಗತಿಯ ಬಗ್ಗೆ ತಾವೇ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಪ್ರಜಾಪ್ರತಿನಿಧಿಗಳಿಗೆ ಮತ್ತು ಕೆಲವು ಸಾರ್ವಜನಿಕರಿಗೆ ತರಬೇತಿ ನೀಡಿ ಅವರ ಸಾಮರ್ಥ್ಯ ಹೆಚ್ಚಿಸಲಾಗುತ್ತಿದೆ. ಇತ್ತೀಚೆಗೆ ಪ್ರತಿ ಗ್ರಾಮ ಪಂಚಾಯತಿಗೆ ಒಂದರಂತೆ ಒಟ್ಟು 5,628 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹಾಗೂ ದೊಡ್ಡ ಗ್ರಾಮ ಪಂಚಾಯತಿಗಳಲ್ಲಿ 2,500 ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೃಜಿಸುವುದರ ಮೂಲಕ ಹಾಗೂ 2,500 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇರ ನೇಮಕಾತಿ ಮೂಲಕ ಗ್ರಾಮ ಪಂಚಾಯತಿಗಳ ಆಡಳಿತಾತ್ಮಕ ಸಾಮರ್ಥ್ಯವನ್ನು ಬಲಗೊಳಿಸಲಾಗಿದೆ.

## 1.2 ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಕೂಲಿ ಉದ್ಯೋಗದ ಕಾಮಗಾರಿಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ನಿರ್ಮೂಲನೆಗಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶದ ವಯಸ್ಕರಿಗೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಉದ್ಯೋಗಾವಕಾಶಗಳನ್ನು ಸ್ಥಳೀಯವಾಗಿ ನೀಡಿ, ಬಡಜನರ ಬದುಕನ್ನು ಹಸನಾಗಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಬಡಜನರನ್ನು ತೊಡಗಿಸಿಕೊಂಡು ಕೃಷಿ ಕಾರ್ಮಿಕರಿಗೆ ಕೂಲಿ ನೀಡುವ ಉದ್ಯೋಗ, ಆಹಾರಭದ್ರತೆ, ದೀರ್ಘಕಾಲ ಬಾಳಿಕೆ ಬರುವಂತಹ ಸ್ವತ್ತುಗಳ ನಿರ್ಮಾಣ ಮುಂತಾದ ಕಾರ್ಯಕ್ರಮಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ [MGNREGA]-ಕರ್ನಾಟಕದಡಿ ಕೈಗೊಳ್ಳಲಾಗುತ್ತಿದೆ.

## 1.3 ಬಡತನ ನಿರ್ಮೂಲನೆಯಂತಹ ಸ್ವ ಉದ್ಯೋಗ ಕಾರ್ಯಕ್ರಮಗಳು

**ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆಯಡಿಯಲ್ಲಿ [SGSY]** ಗ್ರಾಮೀಣ ಬಡಜನರು ಆದಾಯ ಸೃಜಿಸುವ ಸ್ವಯಂ ಉದ್ಯೋಗ ಚಟುವಟಿಕೆಗಳನ್ನು ತೆಗೆದುಕೊಳ್ಳುವ ಸಲುವಾಗಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸಹಾಯವನ್ನು ಸಾಲ, ಸಹಾಯಧನ, ತರಬೇತಿ ಸೌಲಭ್ಯಗಳ ರೂಪದಲ್ಲಿ ನೀಡಲಾಗುತ್ತಿದೆ.

## 1.4 ಗ್ರಾಮೀಣ ಮೂಲಭೂತ ಸೌಕರ್ಯಗಳ ಸುಧಾರಣೆ

ಗ್ರಾಮೀಣ ಜನರ ಜೀವನಮಟ್ಟವನ್ನು ಸುಧಾರಿಸಲು ಗ್ರಾಮೀಣ ಸಂಪರ್ಕ, ಕುಡಿಯುವ ನೀರು ಪೂರೈಕೆ, ನೈರ್ಮಲ್ಯ ಹಾಗೂ ಜಲಾನಯನ ಅಭಿವೃದ್ಧಿ, ಸಣ್ಣ ನೀರಾವರಿಗಳನ್ನೊಳಗೊಂಡಂತೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಅತ್ಯಾವಶ್ಯಕವಾಗಿದೆ. ಇದಲ್ಲದೆ ಪಶ್ಚಿಮಘಟ್ಟ ಅಭಿವೃದ್ಧಿ ಕಾರ್ಯಕ್ರಮ [WGDP] ವನ್ನು ಸಹ ಅನುಷ್ಠಾನಗೊಳಿಸಲಾಗುತ್ತಿದೆ.

### ಅ) ಗ್ರಾಮೀಣ ರಸ್ತೆಗಳ ಅಭಿವೃದ್ಧಿ

ರಾಜ್ಯದಲ್ಲಿ ಗ್ರಾಮೀಣ ರಸ್ತೆಯ ಒಟ್ಟು ಉದ್ದವು 1,47,212 ಕಿ.ಮೀ.ಗಳಾಗಿವೆ. ಇದರಲ್ಲಿ 31.03.2012 ರಲ್ಲಿದ್ದಂತೆ 47,744 ಕಿ.ಮೀ.ಗಳಷ್ಟು ಡಾಂಬರೀಕರಣವಾಗಿದೆ. 25,771 ಕಿ.ಮೀ.ಗಳಷ್ಟು ಜೆಲ್ಲಿ ರಸ್ತೆಯಾಗಿದ್ದು, ಹಾಗೂ 73,697 ಕಿ.ಮೀ. ಮಣ್ಣಿನ ರಸ್ತೆಯಾಗಿರುತ್ತದೆ.

1987 ರಿಂದ ರಾಜ್ಯದಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯು ಜಿಲ್ಲಾ ಪಂಚಾಯಿತಿಗಳ ಜವಾಬ್ದಾರಿಯಾಗಿದೆ. ರಸ್ತೆಗಳು ರಾಜ್ಯಮಟ್ಟದಲ್ಲಿ 1999ರ ಅಂತ್ಯದವರೆಗೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಮೇಲ್ವಿಚಾರಣೆಯಲ್ಲಿದ್ದು, ದಿನಾಂಕ 1.1.2000 ದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾಯಿಸಲಾಗಿದೆ. ರಸ್ತೆ ಮತ್ತು ಸೇತುವೆ ಕಾರ್ಯಕ್ರಮಗಳಲ್ಲದೆ, ಉದ್ಯೋಗ ಒದಗಿಸುವ ಕಾರ್ಯಕ್ರಮಗಳು, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ಆರ್.ಐ.ಡಿ.ಎಫ್. ನಬಾರ್ಡ್ ಯೋಜನೆ, ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ, ಸುವರ್ಣ ಗ್ರಾಮೋದಯ ಯೋಜನೆ, 12ನೇ ಹಣಕಾಸು ಆಯೋಗ ಇತ್ಯಾದಿ ಕಾರ್ಯಕ್ರಮಗಳಡಿ ರಸ್ತೆಗಳ ಅಭಿವೃದ್ಧಿ ಯೋಜನೆ ಹಾಗೂ ನಿರ್ವಹಣೆಯನ್ನು ಮಾಡಲಾಗುತ್ತಿದೆ.

### ಆ) ಗ್ರಾಮೀಣ ನೀರು ಸರಬರಾಜು

ರಾಷ್ಟ್ರೀಯ ಮಾನದಂಡಗಳನ್ವಯ ರಾಜ್ಯದ 59575 ಗ್ರಾಮೀಣ ಜನವಸತಿಗಳಿಗೆ ಸಾಕಷ್ಟು ಸುರಕ್ಷಿತ ಕುಡಿಯುವ ನೀರನ್ನು ಸರಬರಾಜು ಮಾಡುವ ಜವಾಬ್ದಾರಿಯನ್ನು ಈ ಇಲಾಖೆಯು ಹೊಂದಿದೆ. ಈ ಉದ್ದೇಶಕ್ಕಾಗಿ ಇಲಾಖೆಯು ರಾಜ್ಯ ಪುರಸ್ಕೃತ ನೀರು ಸರಬರಾಜು ಕಾರ್ಯಕ್ರಮಗಳು, ಕೇಂದ್ರ ಪುರಸ್ಕೃತ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮಗಳು, ಮರು ಭೂಮಿ ಅಭಿವೃದ್ಧಿ (DDP) ಕಾರ್ಯಕ್ರಮ, ನೀರಿನ ಗುಣಮಟ್ಟ ನಿರ್ವಹಣೆ ಹಾಗೂ ಪರಿವೀಕ್ಷಣೆ ಕಾರ್ಯಕ್ರಮ ಹಾಗೂ ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

### ಇ) ಗ್ರಾಮೀಣ ನೈರ್ಮಲ್ಯ

**ಸಂಪೂರ್ಣ ಸ್ವಚ್ಛತಾ ಆಂದೋಲನಾ** ಯೋಜನೆ ಮುಖಾಂತರ ಗ್ರಾಮಗಳ ನೈರ್ಮಲ್ಯ ಸುಧಾರಣೆಯ ಕ್ರಮವನ್ನು ಇಲಾಖೆಯು ನಿರ್ವಹಿಸುತ್ತಿದೆ. ಪ್ರಾಥಮಿಕ ಶಾಲೆಗಳಿಗೆ ಹಾಗೂ ಅಂಗನವಾಡಿ ಕೇಂದ್ರಗಳಿಗೆ ನೀರಿನ ಸೌಲಭ್ಯದೊಂದಿಗೆ ಶೌಚಾಲಯಗಳನ್ನು ನಿರ್ಮಿಸುವುದೂ ಈ ಕಾರ್ಯಕ್ರಮದ ಅಂಗವಾಗಿದೆ.

### ಈ) ಸುವರ್ಣ ಗ್ರಾಮೋದಯ ಯೋಜನೆ

ಸದರಿ ಯೋಜನೆಯು ಕರ್ನಾಟಕ ಸರ್ಕಾರದ ಒಂದು ವಿನೂತನ ಯೋಜನೆಯಾಗಿದ್ದು, ಗ್ರಾಮೀಣ ಅಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಟಿತ್ವವನ್ನು ಹೊಂದುವ ಮೂಲಕ ಬಲಿಷ್ಠ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿಪಡಿಸುವುದಾಗಿದೆ.

### ಉ) ಗ್ರಾಮೀಣ ಇಂಧನ ಕಾರ್ಯಕ್ರಮ

ಗ್ರಾಮೀಣ ಕುಟುಂಬಗಳ ಇಂಧನ ಬೇಡಿಕೆಗಳನ್ನು ಪೂರೈಸುವುದಕ್ಕಾಗಿ ನವೀಕರಿಸಲ್ಪಡುವ ಇಂಧನ ಮೂಲಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ರಾಜ್ಯದಲ್ಲಿ ಗ್ರಾಮೀಣ ಅಭಿವೃದ್ಧಿಯ ಕಾರ್ಯನೀತಿಯ ಇನ್ನೊಂದು ಭಾಗವಾಗಿ ಜಾರಿಗೊಳಿಸಲಾಗುತ್ತಿದೆ. ಈ ಉದ್ದೇಶಕ್ಕಾಗಿ ಕೇಂದ್ರ ಪುರಸ್ಕೃತ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮನೆ ಬಳಕೆಯ ಇಂಧನ ಬೇಡಿಕೆಯನ್ನು ಪೂರೈಸುವ ಸಲುವಾಗಿ ಜೈವಾನಿಲ ಅಭಿವೃದ್ಧಿಯನ್ನು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಮೂಲಕ ಸಾಧಿಸಲಾಗುತ್ತಿದೆ.

### 1.5 ಗ್ರಾಮ ಸ್ವರಾಜ್ ಯೋಜನೆ

ವಿಶ್ವಬ್ಯಾಂಕ್ ನೆರವಿನೊಂದಿಗೆ ಗ್ರಾಮ ಸ್ವರಾಜ್- ಕರ್ನಾಟಕ ಪಂಚಾಯತ್ ಸಬಲೀಕರಣ ಯೋಜನೆಯು 2006-07ನೇ ಸಾಲಿನಿಂದ ಜಾರಿಗೆ ಬಂದಿದೆ. ಈ ಯೋಜನೆಯ ಮುಖ್ಯ ಉದ್ದೇಶವು ಅತ್ಯಂತ ಹಿಂದುಳಿದ ತಾಲ್ಲೂಕುಗಳ ಈಗಿರುವ ಸ್ಥಿತಿಯನ್ನು ಸುಧಾರಿಸಲು ಅವಕಾಶವನ್ನು ಕಲ್ಪಿಸುವುದು, ವಿಶೇಷವಾಗಿ ಗ್ರಾಮೀಣ ಜನರು ನಿರ್ಧರಿಸುವ ಆದ್ಯತೆಗಳಿಗೆ ಅನುಗುಣವಾಗಿ ಅಗತ್ಯ ಸೇವೆಗಳನ್ನು ಒದಗಿಸುವುದು. ಇದಲ್ಲದೆ ಪಂಚಾಯತ್ ರಾಜ್ ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಸಾಮರ್ಥ್ಯ ಸೃಜಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

### ಇಲಾಖೆಯ ವ್ಯಾಪ್ತಿಗೆ ಬರುವ ಕಛೇರಿಗಳು ಮತ್ತು ಸಂಸ್ಥೆಗಳು:

### 1) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ವಿಭಾಗ

ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಜಿಸುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ [ಎಂ.ಜಿ.ಎನ್.ಆರ್.ಇ.ಜಿ.ಎ] ಮತ್ತು ಕೇಂದ್ರ ಪುರಸ್ಕೃತ ಜೀತ ವಿಮುಕ್ತರ ಪುನರ್ವಸತಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು ಮತ್ತು ಉಸ್ತುವಾರಿ ಈ ವಿಭಾಗದ ಜವಾಬ್ದಾರಿಯಾಗಿದೆ.

**2) ಗ್ರಾಮೀಣ ಮೂಲಭೂತ ಸೌಲಭ್ಯಗಳ ವಿಭಾಗ**

ಪಂಚಾಯತ್ ರಾಜ್ ಸಂಸ್ಥೆಗಳಿಂದ ಅನುಷ್ಠಾನಗೊಳ್ಳುತ್ತಿರುವ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ, ರಸ್ತೆ ಮತ್ತು ಸೇತುವೆ, ಸಣ್ಣ ನೀರಾವರಿ, ಕಟ್ಟಡ ಕಾಮಗಾರಿಗಳ ಉಸ್ತುವಾರಿಯ ಜವಾಬ್ದಾರಿಯನ್ನು ಗ್ರಾಮೀಣ ಮೂಲಭೂತ ಸೌಲಭ್ಯಗಳ ವಿಭಾಗವು ಹೊಂದಿರುತ್ತದೆ. ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆ [ಪಿ.ಎಂ.ಜಿ.ಎಸ್.ವೈ], ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ, ಗ್ರಾಮೀಣ ಇಂಧನ ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ [ಎಸ್.ಜಿ.ಎಸ್.ವೈ], ಸುವರ್ಣ ಗ್ರಾಮೋದಯ ಯೋಜನೆ, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ [ಡಬ್ಲ್ಯೂ.ಜಿ.ಡಿ.ಪಿ], ಗಳನ್ನೂ ಸಹ ಈ ವಿಭಾಗವು ನಿರ್ವಹಿಸುತ್ತಿದೆ. ಅಲ್ಲದೆ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆಡಳಿತಾತ್ಮಕ ವಿಷಯಗಳ ನಿರ್ವಹಣೆಯನ್ನು ಈ ವಿಭಾಗವು ಕೈಗೊಳ್ಳುತ್ತಿದೆ.

**3) ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ**

ಈ ಸಂಸ್ಥೆಯು 2001–02ರಲ್ಲಿ ನೊಂದಾಯಿತ ಸಂಸ್ಥೆಯಾಗಿ ರೂಪುಗೊಂಡಿದೆ. ಸದರಿ ಶಾಖೆಯಲ್ಲಿ ಗ್ರಾಮೀಣ ನೀರು ಪೂರೈಕೆ ಹಾಗೂ ನೈರ್ಮಲೀಕರಣ ಸಂಬಂಧಿತ ವಿದೇಶಿ ನೆರವಿನ ಯೋಜನೆಗಳ ನಿರೂಪಣಾ ಕಾರ್ಯ ಮತ್ತು ಉಸ್ತುವಾರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ ಮತ್ತು ಸಂಪೂರ್ಣ ಸ್ವಚ್ಛತಾ ಆಂದೋಲನಾ ಕಾರ್ಯಕ್ರಮವನ್ನು ನಿರ್ವಹಿಸಲಾಗುತ್ತಿದೆ.

**4) ಪಂಚಾಯತ್ ರಾಜ್ ವಿಭಾಗ**

1993ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯ ವ್ಯಾಪ್ತಿಗೆ ಒಳಪಡುವ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಸಂಸ್ಥೆಗಳಿಗೆ ಅನ್ವಯಿಸುವ ಎಲ್ಲಾ ವಿಷಯಗಳನ್ನು ಈ ವಿಭಾಗವು ನಿರ್ವಹಿಸುತ್ತಿದೆ. ಜೊತೆಗೆ ಹಿಂದುಳಿದ ಪ್ರದೇಶಗಳ ಸ್ಥಳೀಯ ಅಭಿವೃದ್ಧಿ ನಿಧಿ [BRGF] ಮತ್ತು ಗ್ರಾಮ ಸ್ವರಾಜ್ ಯೋಜನೆಯ ಉಸ್ತುವಾರಿ ಜವಾಬ್ದಾರಿಯನ್ನೂ ಹೊಂದಿರುತ್ತದೆ.

**5) ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ**

ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯ ಉಸ್ತುವಾರಿ, ವಾರ್ಷಿಕ ಯೋಜನೆ, ವಾರ್ಷಿಕ ವರದಿ ತಯಾರಿಕೆ, ಸಮನ್ವಯ, ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿ (MPIC) ಸಭೆ, ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಾಗೂ ಉಪ ಕಾರ್ಯದರ್ಶಿಗಳ ಸಭೆಗಳು, ಕೇಂದ್ರ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರಚಿಸಿರುವ ರಾಜ್ಯ ಮತ್ತು ಜಿಲ್ಲಾ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಗಳ ಉಸ್ತುವಾರಿ ನೆರವೇರಿಸುವುದರ ಜೊತೆಗೆ, ಸರ್ಕಾರಕ್ಕೆ ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಕ್ರೋಢೀಕರಿಸಿ ವರದಿ ಹಾಗೂ ತ:ಖ್ತೆಗಳನ್ನು ತಯಾರಿಸುವ ಕಾರ್ಯವೂ ಈ ವಿಭಾಗದ್ದಾಗಿರುತ್ತದೆ.

**6) ಹಣಕಾಸು ವಿಭಾಗ**

ವಾರ್ಷಿಕ ಯೋಜನೆಗಳು, ಆಯವ್ಯಯ ಅಂದಾಜು, ಅನುದಾನ ಬಿಡುಗಡೆ, ರಾಜ್ಯ, ಕೇಂದ್ರ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನ, ವೆಚ್ಚ, ಬಾಕಿ ಉಸ್ತುವಾರಿಯೂ ಸೇರಿದಂತೆ ಅನುದಾನ ಬಿಡುಗಡೆ, ಆಂತರಿಕ ಲೆಕ್ಕ ತಪಾಸಣೆಯೂ ಈ ವಿಭಾಗದಡಿ ನಿರ್ವಹಿಸಲ್ಪಡುತ್ತವೆ. ಆಯವ್ಯಯ ಭಾಷಣ ಹಾಗೂ ಸದರಿ ಭಾಷಣದ ಚರ್ಚೆಯಲ್ಲಿನ ಅಂಶಗಳ ಮೇಲಿನ ಉಸ್ತುವಾರಿ, ಅನುಪಾಲನಾ ವರದಿ, performance budget ತಯಾರಿಕೆ ಹಾಗೂ ಭಾರತ ಸರ್ಕಾರಕ್ಕೆ ಪ್ರತಿ ಯೋಜನೆಯಡಿ ಸಲ್ಲಿಸಬೇಕಾದ ಅನುದಾನ, ಉಪಯುಕ್ತತಾ ಪತ್ರ ಸಲ್ಲಿಸುವುದು ಮತ್ತು ಬಾಕಿ ವಿವರದ ಬಗ್ಗೆ ಪ್ರತಿ ಮಾಹೆ ತ:ಖ್ತೆ ತಯಾರಿಸುವ ಕಾರ್ಯ ಚಟುವಟಿಕೆಗಳೂ ಸಹ ಈ ವಿಭಾಗದ್ದಾಗಿರುತ್ತದೆ. ಜೊತೆಗೆ ಯೋಜನೇತರ ಯೋಜನೆಗಳ ಪ್ರಗತಿ ವರದಿ ತಯಾರಿಕೆ (13ನೇ ಹಣಕಾಸು ಆಯೋಗದ ಅನುದಾನ ಸೇರಿದಂತೆ).

**7) ಆಡಳಿತ ವಿಭಾಗ**

ಇಲಾಖೆಯ ಪತ್ರಗಳ ಸ್ವೀಕೃತಿ ಹಾಗೂ ಸಂಬಂಧಪಟ್ಟ ನಿರ್ದೇಶಕರುಗಳಿಗೆ ಅವುಗಳ ವಿತರಣೆ, ಹಾಜರಾತಿ ಉಸ್ತುವಾರಿ, ವರ್ಗಾವಣೆ, ಬಡ್ತಿಗೆ ಸಂಬಂಧಪಟ್ಟ ವಿಷಯಗಳು, ಶಾಖೆವಾರು ಕಾರ್ಯ ಚಟುವಟಿಕೆಗಳ ಕಾರ್ಯ ಒತ್ತಡದ ಆಧಾರದ ಮೇಲೆ ಅಧಿಕಾರಿಗಳ/ ಸಿಬ್ಬಂದಿಗಳ ಮರು ನಿಯೋಜನೆ ಬಗ್ಗೆ ಉಸ್ತುವಾರಿ ನಡೆಸಿ ಕಾರ್ಯದರ್ಶಿಯವರಿಗೆ ವರದಿ ನೀಡುವುದು, ಇವೇ ಮುಂತಾದ ಇಲಾಖೆಯ ಆಡಳಿತಾತ್ಮಕ, ಸಾಮಾನ್ಯ ಸಮನ್ವಯ ಮತ್ತು ತರಬೇತಿ ವಿಷಯಗಳನ್ನೂ ಈ ವಿಭಾಗದಲ್ಲಿ ನಿರ್ವಹಿಸಲಾಗುತ್ತಿದೆ.

**8) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ**

ಸದರಿ ಶಾಖೆಯಲ್ಲಿ ಗ್ರಾಮೀಣ ನೀರು ಪೂರೈಕೆ, ಗ್ರಾಮೀಣ ನೈರ್ಮಲ್ಯ, ಸಣ್ಣ ನೀರಾವರಿ, ರಸ್ತೆ ಮತ್ತು ಸೇತುವೆ ಹಾಗೂ ಕಟ್ಟಡಗಳ ಯೋಜನೆಗಳ ಅನುಷ್ಠಾನವನ್ನು ನಿರ್ವಹಿಸಲಾಗುತ್ತಿದೆ.

**9) ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ**

ಈ ವಿಭಾಗದಲ್ಲಿ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಕಡಿಮೆ ವೆಚ್ಚದ ಮನೆಗಳ ನಿರ್ಮಾಣ, ರಸ್ತೆ, ಚರಂಡಿಗಳ ನಿರ್ಮಾಣ, ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಡಿ ಕೈಗೊಳ್ಳುವ ಸಮುದಾಯ ಭವನ, ಅಂಗನವಾಡಿ ಕೇಂದ್ರ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಕಾಮಗಾರಿಗಳನ್ನು ಸ್ಥಳೀಯ ನಿರುದ್ಯೋಗಿ ಜನತೆಯನ್ನು ಬಳಸಿಕೊಂಡು ನಿರ್ವಹಣೆ ಮಾಡಲಾಗುತ್ತಿದೆ.

**ಇಲಾಖೆಯು ಅನುಷ್ಠಾನಗೊಳಿಸುವ ಕಾಯ್ದೆ:**

**ಇಲಾಖೆಯಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳ ಅಧಿನಿಯಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.**

# 2. ಪಂಚಾಯತ್ ರಾಜ್ ಶಾಖೆ

## ಶಾಖೆಯ ರಚನೆ:

**ನಿರ್ದೇಶಕರು**

↓

| | | |
|---|---|---|
| ↓ | ↓ | ↓ |
| ಶೀಘ್ರಲಿಪಿಗಾರ | ಅಧೀನ ಕಾರ್ಯದರ್ಶಿ | ಎಲ್ಲಾ ಗ್ರಾಮೀಣ ಸ್ಥಳೀಯ ಸಂಸ್ಥೆಗಳು |
| ↓ | ↓ | |
| ಕಿರಿಯ ಸಹಾಯಕ | ---------------------------------- | |
| ↓ | ↓ | ↓ |
| ವಾಹನ ಚಾಲಕ | ಶಾಖಾಧಿಕಾರಿ | ಶಾಖಾಧಿಕಾರಿ |
| ↓ | ↓ | ↓ |
| ದಲಾಯತ್ | ಹಿರಿಯ ಸಹಾಯಕ/ಸಹಾಯಕ | ಹಿರಿಯ ಸಹಾಯಕ/ಸಹಾಯಕ |
| | ↓ | ↓ |
| | ಕಿರಿಯ ಸಹಾಯಕ | ಕಿರಿಯ ಸಹಾಯಕ |
| | ↓ | ↓ |
| | ಬೆರಳಚ್ಚುಗಾರರು | ಬೆರಳಚ್ಚುಗಾರರು |
| | ↓ | ↓ |
| | ದಲಾಯತ್ | ದಲಾಯತ್ |

**ಪಂಚಾಯತ್ ರಾಜ್ ಸಂಸ್ಥೆಯ ಚುನಾವಣೆ ಹಾಗೂ ಸದಸ್ಯರುಗಳು:-**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ದಿನಾಂಕ: 10-05-1993 ರಿಂದ ಜಾರಿಗೆ ಬಂದಿದ್ದು, ಅದರಂತೆ ರಾಜ್ಯದಲ್ಲಿ 3 ಹಂತದ ಪಂಚಾಯತ್ ರಾಜ್ ಸಂಸ್ಥೆಗಳಾದ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ಒಟ್ಟು 5,627 ಗ್ರಾಮ ಪಂಚಾಯತಿಗಳು, 176 ತಾಲ್ಲೂಕು ಪಂಚಾಯತಿಗಳು ಮತ್ತು 30 ಜಿಲ್ಲಾ ಪಂಚಾಯತಿಗಳು ಅಸ್ತಿತ್ವದಲ್ಲಿವೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರತಿ 5 ವರ್ಷಗಳಿಗೆ ಸಾರ್ವತ್ರಿಕ ಚುನಾವಣೆ ನಡೆಸುವ ಮೂಲಕ ಪಂಚಾಯತಿಗಳ ಸದಸ್ಯರುಗಳನ್ನು ನೇರವಾಗಿ ಚುನಾಯಿಸಲಾಗುತ್ತದೆ. ಪ್ರಸ್ತುತ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಡಿಸೆಂಬರ್ 2010 ರಲ್ಲಿ ಹಾಗೂ ಗ್ರಾಮ ಪಂಚಾಯತಿಗಳಿಗೆ ಮೇ 2010 ರಲ್ಲಿ ಸಾರ್ವತ್ರಿಕ ಚುನಾವಣೆ ನಡೆದಿದ್ದು ಪಂಚಾಯತಿಗಳು ಕಾರ್ಯನಿರ್ವಹಿಸುತ್ತಿವೆ.

ಗ್ರಾಮ ಪಂಚಾಯತಿಗಳಲ್ಲಿ ಒಟ್ಟು 90,635 ಸದಸ್ಯರುಗಳಿದ್ದು, 39,020 ಮಹಿಳಾ ಸದಸ್ಯರು, 16,863 ಪರಿಶಿಷ್ಟ ಜಾತಿ ಸದಸ್ಯರು, 9,842 ಪರಿಶಿಷ್ಟ ಪಂಗಡ ಸದಸ್ಯರು, 30,091 ಹಿಂದುಳಿದ ವರ್ಗದ ಸದಸ್ಯರುಗಳು ಹಾಗೂ 33,869 ಸಾಮಾನ್ಯ ವರ್ಗದ ಸದಸ್ಯರುಗಳು ಇರುತ್ತಾರೆ.

ತಾಲ್ಲೂಕು ಪಂಚಾಯತಿಯ ಒಟ್ಟು 3,659 ಸದಸ್ಯರುಗಳಲ್ಲಿ 2,018 ಮಹಿಳಾ ಸದಸ್ಯರಿದ್ದು, ಜಿಲ್ಲಾ ಪಂಚಾಯತಿಯಲ್ಲಿ ಒಟ್ಟು 1,013 ಸದಸ್ಯರುಗಳಲ್ಲಿ 539 ಸದಸ್ಯರುಗಳು ಮಹಿಳೆಯರಿರುತ್ತಾರೆ.

**ಶಾಖೆಯಿಂದ ಅನುಷ್ಠಾನಗೊಳಿಸಿದ ಯೋಜನೆಗಳ ವಿವರ:**

1) 13ನೇ ಹಣಕಾಸು ಆಯೋಗ
2) ಶಾಸನಬದ್ಧ ಅನುದಾನ
3) ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ರೂ. 1.00 ಕೋಟಿ ಅನಿರ್ಬಂಧಿತ ಅನುದಾನ
4) ತಾಲ್ಲೂಕು ಪಂಚಾಯತಿಗಳಿಗೆ ರೂ. 1.00 ಕೋಟಿ ಅನಿರ್ಬಂಧಿತ ಅನುದಾನ
5) ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರಿಗೆ ಗೌರವ ಧನ
6) ಚುನಾಯಿತ ಮಹಿಳಾ ಪ್ರತಿನಿಧಿಗಳನ್ನು ಸಬಲೀಕರಿಸುವ ಬಗ್ಗೆ ಯೋಜನೆ.

**ಹದಿಮೂರನೇ ಹಣಕಾಸು ಆಯೋಗದ ಅನುದಾನ:**

ಹದಿಮೂರನೇ ಹಣಕಾಸು ಆಯೋಗದ (2010–2011 ನೇ ಸಾಲಿನಿಂದ 2014–15) ಅನುದಾನವನ್ನು ಪ್ರತಿ ವರ್ಷ 2 ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಇದನ್ನು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಜನಸಂಖ್ಯೆಯ ಆಧಾರದ ಮೇಲೆ 10:20:70 (ಜಿ.ಪಂ.:ತಾ.ಪಂ.:ಗ್ರಾ.ಪಂ.) ಅನುಪಾತದಲ್ಲಿ ಬಿಡುಗಡೆ ಮಾಡಲಾಗುತ್ತದೆ. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ 2011–12 ನೇ ಸಾಲಿನ ಸಾಮಾನ್ಯ ಮೂಲ ಅನುದಾನ ರೂ.52571.00 ಲಕ್ಷಗಳನ್ನು ನಿಗಪಡಿಸಿ ಬಿಡುಗಡೆ ಮಾಡಿರುತ್ತಾರೆ. ಸದರಿ ಅನುದಾನವನ್ನು **ಲೆಕ್ಕ ಶೀರ್ಷಿಕೆ 2515–00–196–6–09** (ಜಿ.ಪಂ.), **2515–00–197–6–09** (ತಾ.ಪಂ.) ಮತ್ತು **2515–00–198–6–09** (ಗ್ರಾ.ಪಂ.) ಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಜಿ. ಸೇವಾ ಬ್ರಾಂಚ್ ಹಾಗೂ ಆಕ್ಸಿಸ್ ಬ್ಯಾಂಕ್, ಎಂ.ಜಿ. ರಸ್ತೆ ಶಾಖೆ ಆನ್‌ಲೈನ್ ಮುಖಾಂತರ ಬಿಡುಗಡೆ ಮಾಡಲಾಗಿರುತ್ತದೆ.

13ನೇ ಹಣಕಾಸು ಆಯೋಗದ ಅನುದಾನದಡಿ ಸಾಮಾನ್ಯ ನಿರ್ವಹಣಾ ಅನುದಾನವಾಗಿ ರೂ. 16627.00 ಲಕ್ಷಗಳನ್ನು ನಿಗದಿಪಡಿಸಿ ಕೇಂದ್ರ ಸರ್ಕಾರದವರು ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತಾರೆ. ಸದರಿ ಅನುದಾನವನ್ನು **ಲೆಕ್ಕ ಶೀರ್ಷಿಕೆ 2515–00–800–0–16** ಯಡಿಯಲ್ಲಿ 3 ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

13ನೇ ಹಣಕಾಸು ಆಯೋಗದಡಿ ಅನುದಾನಕ್ಕೆ ಕೇಂದ್ರ ಸರ್ಕಾರವು ಮಾರ್ಗಸೂಚಿಯನ್ನು ನಿಗದಿಗೊಳಿಸದೇ ಇರುವ ಕಾರಣ 12ನೇ ಹಣಕಾಸು ಆಯೋಗದ ಮಾರ್ಗಸೂಚಿಯಂತೆ ಕ್ರಿಯಾ ಯೋಜನೆಯನ್ನು ತಯಾರಿಸಲು ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಸೂಚನೆ ನೀಡಲಾಗಿದೆ.

12ನೇ ಹಣಕಾಸು ಆಯೋಗದ ಅನುದಾನ ಪ್ರಮುಖವಾಗಿ ಈ ಕೆಳಕಂಡ ಕಾರ್ಯಗಳಿಗೆ ಬಳಸಬಹುದಾಗಿರುತ್ತದೆ.

1) ಡಾಟಾ ಬೇಸ್ ಸೃಜನೆಗಾಗಿ,
2) ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ,
3) ಲೆಕ್ಕಪತ್ರಗಳ ನಿರ್ವಹಣೆ,
4) ನಾಗರೀಕ ಸೇವೆಗಳ ನಿರ್ವಹಣೆ.

**2011-12ನೇ ಸಾಲಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.**

(ರೂ. ಲಕ್ಷಗಳಲ್ಲಿ)

| 13ನೇ ಹಣಕಾಸು ಆಯೋಗದ ಅನುದಾನ | ಜಿಲ್ಲಾ ಪಂಚಾಯತ್ | ತಾಲ್ಲೂಕು ಪಂಚಾಯಿತಿ | ಗ್ರಾಮ ಪಂಚಾಯತಿ |
|---|---|---|---|
| ಸಾಮಾನ್ಯ ಮೂಲ ಅನುದಾನ | 5257.10 | 10514.20 | 36799.70 |
| ಸಾಮಾನ್ಯ ನಿರ್ವಹಣಾ ಅನುದಾನ | 1662.70 | 3325.40 | 11638.90 |

ಸದರಿ ಅನುದಾನವನ್ನು ರಾಜ್ಯದ ಬೊಕ್ಕಸಕ್ಕೆ ಜಮೆ ಆದ 5 ದಿನಗಳೊಳಗಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಬೇಕಾಗಿರುತ್ತದೆ. ಬ್ಯಾಂಕಿಂಗ್ ಸೌಲಭ್ಯವಿಲ್ಲದ ಕಡೆಗಳಲ್ಲಿ 10 ದಿನಗಳೊಳಗಾಗಿ ಅನುದಾನವನ್ನು ವರ್ಗಾಯಿಸಬೇಕಾಗಿರುತ್ತದೆ.

2011-12ನೇ ಸಾಲಿನ (ಮೊದಲನೇ ಮತ್ತು ಎರಡನೇ ಕಂತು) ಉಪಯುಕ್ತತಾ ಪ್ರಮಾಣ ಪತ್ರವನ್ನು ಭಾರತ ಸರ್ಕಾರಕ್ಕೆ ಕಳುಹಿಸಲು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ.

**ಶಾಸನಬದ್ಧ ಅನುದಾನ:**

2011-12ನೇ ಸಾಲಿನ ಆಯವ್ಯಯದಲ್ಲಿ ಗ್ರಾಮ ಪಂಚಾಯತಿಗಳಿಗೆ ನೀಡುತ್ತಿರುವ ವಾರ್ಷಿಕ ಶಾಸನಬದ್ಧ ಅನುದಾನವನ್ನು ರೂ. 6.00 ಲಕ್ಷಗಳಿಂದ ರೂ. 8.00 ಲಕ್ಷಗಳಿಗೆ ಹೆಚ್ಚಿಸಲಾಗಿತ್ತು. ಅದರಂತೆ 2011-12ನೇ ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ ರೂ. 8.00 ಲಕ್ಷದಂತೆ ಪ್ರಸ್ತುತ ಇರುವ 5627 ಗ್ರಾಮ ಪಂಚಾಯತಿಗಳಿಗೆ ಒಟ್ಟು ರೂ. 45436.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2515-00-198-1-07 (ಯೋಜನೆ) ಯಡಿಯಲ್ಲಿ ಒದಗಿಸಿದ್ದು, ಈ ಪೈಕಿ ರೂ. 40436.00 ಲಕ್ಷಗಳ ಅನುದಾನವನ್ನು ಆರ್ಥಿಕ ಇಲಾಖೆಯು 4 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಿರುತ್ತದೆ. ಈ ಅನುದಾನದಲ್ಲಿ ಶೇಕಡ 60 ರಷ್ಟನ್ನು ಗ್ರಾಮ ಪಂಚಾಯತಿಗಳ ಚಾಲ್ತಿ ತಿಂಗಳುಗಳ ವಿದ್ಯುಚ್ಛಕ್ತಿ ಬಿಲ್ ಪಾವತಿಗಾಗಿ ಮತ್ತು ಶೇಕಡ 40 ರಷ್ಟನ್ನು ಗ್ರಾಮ ಪಂಚಾಯತಿ ನೌಕರರ ವೇತನಕ್ಕಾಗಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ರೂ.1.00 ಕೋಟಿ ಅನಿರ್ಬಂಧಿತ ಅನುದಾನ:**

ಪ್ರತಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಲೆಕ್ಕ ಶೀರ್ಷಿಕೆ 2515-00-101-0-31 (ಯೋಜನೆ) ರಡಿ ಒದಗಿಸಲಾದ ರೂ. 30.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಅನುದಾನವನ್ನು ಜಿಲ್ಲಾ ಪಂಚಾಯಿತಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**ತಾಲ್ಲೂಕು ಪಂಚಾಯಿತಿಗಳಿಗೆ ರೂ.1.00 ಕೋಟಿ ಅನಿರ್ಬಂಧಿತ ಅನುದಾನ:**

ಪ್ರತಿ ತಾಲ್ಲೂಕು ಪಂಚಾಯಿತಿಗೆ ಲೆಕ್ಕ ಶೀರ್ಷಿಕೆ 2515-00-102-0-62 (ಯೋಜನೆ) ರಡಿ ರೂ.17600.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ರೂ. 17600.00 ಲಕ್ಷಗಳನ್ನು ಬಿಡುಗಡೆ

ಮಾಡಲಾಗಿರುತ್ತದೆ. ಈ ಅನುದಾನವನ್ನು ತಾಲ್ಲೂಕು ಪಂಚಾಯಿತಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರಿಗೆ ಗೌರವ ಧನ:**

2011-12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ರೂ.3000.00, ಉಪಾಧ್ಯಕ್ಷರಿಗೆ ರೂ. 2250 ಮತ್ತು ಸದಸ್ಯರಿಗೆ ರೂ. 1500.00 ಗಳು ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ರೂ. 2250.00, ಉಪಾಧ್ಯಕ್ಷರಿಗೆ ರೂ. 1500 ಮತ್ತು ಸದಸ್ಯರಿಗೆ ರೂ. 750.00 ಗಳನ್ನು ಗೌರವಧನವಾಗಿ ನೀಡಲು ಆದೇಶ ಹೊರಡಿಸಲಾಗಿರುತ್ತದೆ. ಗೌರವಧನವನ್ನು 13ನೇ ಹಣಕಾಸು ಆಯೋಗದ ಅನುದಾನದಡಿ ಭರಿಸಲು ತಿಳಿಸಲಾಗಿರುತ್ತದೆ.

**ಚುನಾಯಿತ ಮಹಿಳಾ ಪ್ರತಿನಿಧಿಗಳನ್ನು ಸಬಲೀಕರಿಸುವ ಬಗ್ಗೆ ಯೋಜನೆ:**

ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯ, ಯು.ಎನ್.ವುಮೆನ್, ನವದೆಹಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ, ಕರ್ನಾಟಕ ಸರ್ಕಾರ ಇವರುಗಳ ಜಂಟಿ ಒಡಂಬಡಿಕೆಯನ್ವಯ ದಿನಾಂಕ: 14-09-2011 ರಂದು ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಈ ಯೋಜನೆಯಡಿ ಮಹಿಳಾ ಪ್ರತಿನಿಧಿಗಳಿಗೆ ರಾಜಕೀಯ, ಸಾಮಾಜಿಕ, ಆರ್ಥಿಕ ಮುಂತಾದ ವಿಷಯಗಳಲ್ಲಿ ನಾಯಕತ್ವ ಗುಣಗಳನ್ನು ಉತ್ತೇಜಿಸಲು ಸದರಿ ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ. ಗ್ರಾಮಸಭೆ ಮತ್ತು ಇತರೆ ಸಭೆಗಳಲ್ಲಿ ಮಹಿಳಾ ಸಮಸ್ಯೆಗಳನ್ನು ಪ್ರಸ್ತಾಪಿಸಿ ಇವುಗಳಿಗೆ ಪರಿಹಾರ ಕಂಡುಕೊಳ್ಳಲು ಹಾಗೂ ಮಹಿಳಾ ಪ್ರತಿನಿಧಿಗಳನ್ನು ಸಬಲೀಕರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಹಲವಾರು ಚಟುವಟಿಕೆ ಗಳನ್ನು ಹಮ್ಮಿಕೊಂಡಿದೆ. ಯು.ಎನ್.ವುಮೆನ್ ಯೋಜನೆಯ "ವಾರ್ಷಿಕ ವರ್ಕ್‌ಪ್ಲಾನ್" ಪ್ರಕಾರ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ನೋಡಲ್ ಏಜೆನ್ಸಿಯಾಗಿದ್ದು, ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಈ ಯೋಜನೆಯಡಿ ಆಯ್ಕೆ ಮಾಡಿದ ಜಿಲ್ಲಾ ಪಂಚಾಯತ್‌ಗಳಾದ ಧಾರವಾಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ಣಯಿಸಲಾಗಿರುತ್ತದೆ. ಉತ್ತರಕನ್ನಡ ಜಿಲ್ಲೆ, ಕಾರವಾರ ಮೂರನೇ ಜಿಲ್ಲೆಯಾಗಿ ಆಯ್ಕೆ ಮಾಡಲಾಗಿದೆ. ಸದರಿ ವರ್ಕ್‌ಪ್ಲಾನ್‌ನ್ನು ಅನುಷ್ಠಾನಗೊಳಿಸಲು ರೂ.83,51,800/- ಯು.ಎನ್.ವುಮೆನ್, ನವದೆಹಲಿಯವರು ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತಾರೆ. ಸದರಿ ಅನುದಾನವನ್ನು 20:20:20 ಅನುಪಾತದಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು, ಧಾರವಾಡ ಮತ್ತು ಮೈಸೂರು ಜಿಲ್ಲೆಗಳಿಗೆ ಈ ಯೋಜನೆಯಡಿ ಉಳಿತಾಯ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡಲಾಗಿದೆ.

**ಭಾಗ-1**

**2011-12ನೇ ಸಾಲಿನಲ್ಲಿ ಪ್ರಸ್ತುತ ಇರುವ ಶಾಸನಗಳಿಗೆ ತಿದ್ದುಪಡಿ ಅಥವಾ ಹೊಸ ಶಾಸನಗಳ ರಚನೆ (ಉಪ ಶಾಸಕಾಂಗ ಸಮಿತಿಗಳನ್ನು ಒಳಗೊಂಡಂತೆ)**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 311 (ಒತ್ತುವರಿಗಳನ್ನು ತೆರವುಗೊಳಿಸುವ) ನಿಯಮಗಳು 2011 ದಿನಾಂಕ: 04-06-2011.

ಭಾಗ-2

## 2011-12ನೇ ಸಾಲಿನಲ್ಲಿ ಇಲಾಖೆಯು ರಚಿಸಿರುವ ಸಮಿತಿ/ಆಯೋಗಗಳು

| ಕ್ರ. ಸಂ. | 2011ನೇ ಸಾಲಿನಲ್ಲಿ ರಚನೆಯಾಗಿರುವ ಸಮಿತಿಗಳು/ಆಯೋಗಗಳು | ಸಮಿತಿ/ಆಯೋಗಗಳಾಧಾರಿತ ಉದ್ದೇಶಗಳು | ಕಾಲಾವಧಿ | ಸಮಿತಿ/ಆಯೋಗಗಳ ಪ್ರಸ್ತುತ ಹಂತಗಳು |
|---|---|---|---|---|
| 1 | 1 | ಕ.ಪಂ.ರಾಜ್ ಅಧಿನಿಯಮ 1993 ರಂತೆ ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣೆ | ಇಲ್ಲ | - |
| 2 | 1 | ಗ್ರಾಮ ಪಂಚಾಯತಿ ಅಧ್ಯಕ್ಷರ ಅವಧಿಯನ್ನು ಹೆಚ್ಚಿಸುವ ಬಗ್ಗೆ | 3 ತಿಂಗಳು | - |

## ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ.
## 2011-12ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರ

| ಕ್ರ. ಸಂ. | ವರ್ಗ | ಒಟ್ಟು ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾ. | ಪ.ಪಂ. |
|---|---|---|---|---|---|---|
| 1 | ಎ | 2 | 2 | - | - | - |
| 2 | ಬಿ | 2 | 2 | - | - | - |
| 3 | ಸಿ | 9 | 7 | 2 | 3 | - |
| 4 | ಡಿ | 3 | 1 | 2 | 1 | 1 |

## 2011-12ನೇ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರ

| ಕ್ರ.ಸಂ. | ಹುದ್ದೆ | ಸಂಖ್ಯೆ |
|---|---|---|
| 1 | ಆಪ್ತ ಸಹಾಯಕರು | 1 |
| 2 | ಗ್ರೂಪ್ 'ಡಿ' | ಇಲ್ಲ |
| 3 | ವಾಹನ ಚಾಲಕರು | ಇಲ್ಲ |
| 4 | ಸಲಹೆಗಾರರು | ಇಲ್ಲ |
| 5 | ಇತರೆ | 2 |

## 2011-12ನೇ ಸಾಲಿನ ವಿಧಾನ ಮಂಡಲದ / ಸಂಸತ್ತಿನ ಪ್ರಶ್ನೆಗಳು

| | | |
|---|---|---|
| ಸ್ವೀಕೃತವಾದ ಪ್ರಶ್ನೆಗಳ ಸಂಖ್ಯೆ | ಜಿ.ಪಂ.-20 | ಗ್ರಾ.ಪಂ.-61 |
| ಉತ್ತರಿಸಿದ ಪ್ರಶ್ನೆಗಳ ಸಂಖ್ಯೆ | ಜಿ.ಪಂ.-20 | ಗ್ರಾ.ಪಂ.-61 |
| ಕೇಂದ್ರ ಮಂತ್ರಾಲಯದ ಸಂಸತ್ತಿನ ಪ್ರಶ್ನೆಗಳಿಗೆ ಮಾಹಿತಿ ನೀಡಿರುವುದು. | ಜಿ.ಪಂ.-12 | ಗ್ರಾ.ಪಂ.- ಇಲ್ಲ |

## 2011-12ನೇ ಸಾಲಿನ ನ್ಯಾಯಾಲಯದ ಪ್ರಕರಣಗಳ ವಿವರಗಳು:

**ಯೋಜನೆ/ಶಾಖೆ: ಪಂಚಾಯತ್ ರಾಜ್ ಶಾಖೆ**

| ಇಲಾಖೆಯಿಂದ ಸಲ್ಲಿಸಿರುವ ನ್ಯಾಯ ಪ್ರಕರಣಗಳು | ಇಲಾಖೆ ವಿರುದ್ಧ ಇರುವ ಪ್ರಕರಣಗಳು |
|---|---|
| | ಜಿ.ಪಂ.-19, ಗ್ರಾಪಂ.-63 (ನ್ಯಾಯಾಲಯ)<br>ಜಿ.ಪಂ.-ಇಲ್ಲ, ಗ್ರಾ.ಪಂ.-50 (ನ್ಯಾ.ಮಂಡಳಿ) |

**ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪ್ರಕರಣಗಳು**
**ಯೋಜನೆ/ಶಾಖೆಯ ಹೆಸರು: ಪಂಚಾಯತ್ ರಾಜ್ ಶಾಖೆ**

| ಮಾಹಿತಿ ಹಕ್ಕು ಕಾಯ್ದೆಯಡಿಯ ಪ್ರಕರಣಗಳು | | | |
|---|---|---|---|
| ಸ್ವೀಕೃತವಾದ ಅರ್ಜಿಗಳು | ಉತ್ತರಿಸಿದ ಅರ್ಜಿಗಳು | ತಿರಸ್ಕೃತ ಅರ್ಜಿಗಳು | ಅಪೀಲು ಪ್ರಕರಣಗಳಲ್ಲಿ ಬಾಕಿ ಇರುವ ಸಂಖ್ಯೆ |
| ಜಿ.ಪಂ.-26<br>ಗ್ರಾಪಂ.-140 | ಜಿ.ಪಂ.-26<br>ಗ್ರಾಪಂ.-140 | ಇಲ್ಲ | ಇಲ್ಲ |

**

## 2.2 ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ:

### ಸಂಸ್ಥೆಯ ಉದ್ದೇಶಗಳು, ದೂರದೃಷ್ಟಿ ಮತ್ತು ನಿರ್ದಿಷ್ಟಪಡಿಸಿದ ಗುರಿ

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಮೈಸೂರಿನಲ್ಲಿ 1989ರಲ್ಲಿ ಸ್ಥಾಪನೆಗೊಂಡು, ಪ್ರಜಾಪ್ರಭುತ್ವ ವ್ಯವಸ್ಥೆಗೆ ಮೂಲಾಧಾರವಾದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಆಡಳಿತಾತ್ಮಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಆಡಳಿತ ಮತ್ತು ಯೋಜನೆಯ ಅನುಷ್ಠಾನದಲ್ಲಿನ ವಿವಿಧ ವಿಷಯಗಳಲ್ಲಿ ಸಾಮಾರ್ಥ್ಯಾಭಿವೃದ್ಧಿಯನ್ನು ಹೆಚ್ಚಿಸಲು ಹಾಗೂ ಈ ಸಂಸ್ಥೆಗಳ ಆಡಳಿತ ನಿರ್ವಹಿಸುವವರಿಗೆ ಯೋಜನೆಗಳ ಅನುಷ್ಠಾನದ ವಿಷಯಗಳಲ್ಲಿ ತಾಂತ್ರಿಕ ಮತ್ತು ಆಡಳಿತಾತ್ಮಕವಾದ ಹೊಸ ಆವಿಷ್ಕಾರಗಳ ಬಗ್ಗೆ ತರಬೇತಿಯನ್ನು ನೀಡುವ ಮೂಲ ಗುರಿ ಮತ್ತು ಉದ್ದೇಶಗಳನ್ನೊಳಗೊಂಡಿರುತ್ತದೆ.

- ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ವಿವಿಧ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮವನ್ನು ನಡೆಸುವುದು.
- ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ವಿಷಯಾಧಾರಿತ ಕಾರ್ಯಾಗಾರಗಳು, ವಿಚಾರ ಸಂಕಿರಣಗಳು, ವಿದ್ವತ್ ಸಭೆಗಳನ್ನು ನಡೆಸುವುದು.
- ಸಂಶೋಧನೆಗಳನ್ನು ನಡೆಸುವುದು ಹಾಗೂ ಇತರೆ ಸಂಸ್ಥೆಗಳು ತನ್ನ ಮೂಲಭೂತ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಸಂಶೋಧನೆ ನಡೆಸಲು ಅವಕಾಶ ಕಲ್ಪಿಸುವುದು.

- 'ವಿಶ್ವ ಬ್ಯಾಂಕ್' ಮುಂತಾದ ಪ್ರತಿಷ್ಟಿತ ಸಂಸ್ಥೆಗಳ ಸಹಯೋಗದಲ್ಲಿ ಕ್ಷೇತ್ರಮಟ್ಟದ ಅಧ್ಯಯನ ನಡೆಸುವುದು.
- ಸರ್ಕಾರದ ಹಲವು ಜನಪರ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಸಮಾಲೋಚನಾ ಸಭೆಗಳನ್ನು ನಡೆಸಿ, ಸಲಹೆಗಳನ್ನು ನೀಡುವುದು.
- ಸರ್ಕಾರದ ಇಲಾಖೆಗಳು/ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳಿಗೆ ಅವುಗಳ ಕಾರ್ಯಕ್ರಮಗಳನ್ನು ನಡೆಸಲು ಸಂಸ್ಥೆಯಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಒದಗಿಸಿ, ಮೂಲಭೂತ ಸೌಲಭ್ಯಗಳ ಸದ್ಬಳಕೆಯಾಗುವಂತೆ ಕ್ರಮವಹಿಸುವುದು.

**ಸಂಸ್ಥೆಯ ಆಡಳಿತಾತ್ಮಕ ಸ್ವರೂಪ**

ಆಡಳಿತ ತರಬೇತಿ ಸಂಸ್ಥೆಯ ಕಾರ್ಯನಿರ್ವಹಣೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ವ್ಯವಸ್ಥಾಪಕ ಸಮಿತಿಯು ಈ ಸಂಸ್ಥೆಗೂ ಸಹ ಅನ್ವಯವಾಗುತ್ತದೆ. ಈ ಸಮಿತಿಯು ಸಂಸ್ಥೆಯ ಆಡಳಿತ ಮತ್ತು ತರಬೇತಿ ವಿಷಯಗಳಿಗೆ ಸಂಬಂಧಪಟ್ಟಂತೆ ನಿರ್ಣಯಿಸಿ ಮಾರ್ಗದರ್ಶನ ನೀಡುವ ಅಧಿಕಾರವನ್ನು ಹೊಂದಿರುತ್ತದೆ. ಸಮಿತಿಯ ಸ್ವರೂಪ ಕೆಳಕಂಡಂತಿದೆ.

- ಅಪರ ಮುಖ್ಯ ಕಾರ್ಯದರ್ಶಿಗಳು – ಅಧ್ಯಕ್ಷರು

**ಸದಸ್ಯರುಗಳು**

- ಪ್ರಧಾನ ಕಾರ್ಯದರ್ಶಿಗಳು – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಂದಾಯ, ಹಣಕಾಸು, ನಗರಾಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
- ಜಂಟಿ ಕಾರ್ಯದರ್ಶಿಗಳು (ತರಬೇತಿ) ಭಾರತ ಸರ್ಕಾರ
- ಮಹಾನಿರ್ದೇಶಕರು, ಎನ್.ಐ.ಆರ್.ಡಿ., ಹೈದರಾಬಾದ್.
- ನಿರ್ದೇಶಕರು, ಸಾಮಾಜಿಕ ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು
- ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
- ಸಂಸ್ಥೆಯ ಮಹಾ ನಿರ್ದೇಶಕರು – ಸದಸ್ಯ ಕಾರ್ಯದರ್ಶಿಗಳು
- ಸಂಸ್ಥೆಯ ನಿರ್ದೇಶಕರು – ಆಹ್ವಾನಿತ ಸದಸ್ಯರು

ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಇವರು ಈ ಸಂಸ್ಥೆಗೂ ಮಹಾನಿರ್ದೇಶಕರಾಗಿದ್ದು, ಇವರ ಮಾರ್ಗದರ್ಶನದಲ್ಲಿ ಈ ಸಂಸ್ಥೆಯ ನಿರ್ದೇಶಕರು, ಉಪ ನಿರ್ದೇಶಕರು, ಬೋಧಕರು, ಸಲಹೆಗಾರರು ಮತ್ತು ಸಿಬ್ಬಂದಿಯವರುಗಳ ಸಹಕಾರದೊಡನೆ ಸಂಸ್ಥೆಯ ಆಡಳಿತ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತಿದೆ. ಸಂಸ್ಥೆಯ ಆಡಳಿತ ವ್ಯವಸ್ಥೆಯನ್ನು ಈ ಕೆಳಗೆ ವಿವರಿಸಲಾಗಿದೆ.

**ಮಹಾ ನಿರ್ದೇಶಕರು**

↓

**ನಿರ್ದೇಶಕರು**

↓

**ಬೋಧಕ ಸಿಬ್ಬಂದಿ:**

- ಬೋಧಕರು(ಕೃಷಿ) –1
- ಬೋಧಕರು(ಆರ್ಥಿಕ –1
- ಬೋಧಕರು (ಪಂ.ರಾಜ್.ವಿಕೇಂದ್ರೀಕರಣ, ಯೋಜನೆ) –1
- ಬೋಧಕರು (ಡ್ವಾಕ್ರಾ) –1
- ಬೋಧಕರು (ಉಪಗ್ರಹ) –1
- ಬೋಧಕರು(ಗ್ರಾಮೀಣ ಸಾಮಾಜಿಕ ಸೇವೆ –1
- ಬೋಧಕರು(ಸ್ವ.ಸ.ಗುಂಪು & ಎಸ್‌ಜಿಎಸ್‌ವೈ) –1
- ಬೋಧಕರು(ಇಂಜಿನಿಯರಿಂಗ್) –1
- ಬೋಧಕರು & ಸಹಾಯಕಇಂಜನೀಯರ್ –1
- ಬೋಧಕರು(ಪಂ.ರಾಜ್, ವಿಕೇಂದ್ರೀಕರಣ) –1

**ಉಪ ನಿರ್ದೇಶಕರು**

↓

**ಅಧಿಕಾರಿ ಸಿಬ್ಬಂದಿ:**

| | |
|---|---|
| ಲೆಕ್ಕಪರಿಸೋಧನಾಧಿಕಾರಿ | –1 |
| ಅಧೀಕ್ಷಕರು | – 3 |
| ಸಿನಿ ಆಪರೇಟರ್ | – 1 |
| ಗ್ರಂಥಪಾಲಕರು | – 1 |
| ಪ್ರ.ದ.ಸಹಾಯಕರು | – 3 |
| ದ್ವಿ.ದ.ಸಹಾಯಕರು | – 4 |
| ಸಹಾಯಕ ಗ್ರಂಥಪಾಲಕರು | – 1 |
| ಶೀಘ್ರಲಿಪಿಗಾರರು | – 4 |
| ಬೆರಳಚ್ಚುಗಾರರು | – 3 |
| ವಾಹನ ಚಾಲಕರು | – 3 |
| ದಲಾಯತರು | – 20 |
| ಅಡಿಗೆ ಮಾಡುವವರು | – 2 |
| ಅಡಿಗೆ ಸಹಾಯಕರು | – 2 |

**ತಾಂತ್ರಿಕ ಸಿಬ್ಬಂದಿ:**

| | |
|---|---|
| ಸೀನಿಯರ್ ಪ್ರೋಗ್ರಾಮರ್ | – 1 |
| ನಿರ್ಮಾಪಕರು–ಎ | – 2 |
| ಸಹಾಯಕ ನಿರ್ಮಾಪಕರು | – 2 |
| ಸಾಮಾಜಿಕ ಸಂಶೋಧಕರು – ಎ | – 1 |
| ಸಾಮಾಜಿಕ ಸಂಶೋಧಕರು – ಬಿ | – 1 |
| ಸಂಶೋಧನಾ ಸಹಾಯಕ | – 1 |
| ವೈಜ್ಞಾನಿಕ ಸಹಾಯಕ –ಎ | |
| ಗ್ರಂಥಪಾಲಕರು | – 1 |
| ಜೂನಿಯರ್ ಇಂಜಿನೀಯರ್ | – 4 |
| ಕಾರ್ಯಕ್ರಮ ಸಹಾಯಕ | – 1 |
| ಸಹಾಯಕ ನಿರ್ಮಾಪಕ–ಎ | – 1 |
| ಕ್ಯಾಮರಾ ಮೆನ್ –ಎ | – 2 |
| ಟ್ರೇಡ್‌ಮೆನ್ – ಡಿ (Elcl) | – 1 |
| ಟೇಪ್ ಲೈಬ್ರರಿಯನ್ | – 1 |
| ಸಹಾಯಕ– ಎ | – 1 |
| ಲೈಟ್‌ಮನ್ | – 2 |
| ದೂರವಾಣಿ ನಿರ್ವಾಹಕರು | – 1 |

**ಸಂಸ್ಥೆಯು ಹೊಂದಿರುವ ಮೂಲಭೂತ ಸೌಲಭ್ಯಗಳು:**

ಸಂಸ್ಥೆಯು ಆಡಳಿತ ಕಛೇರಿ ಕಟ್ಟಡ, ಒಂದು ವಸತಿ ನಿಲಯ ಕಟ್ಟಡ ಹೊಂದಿದೆ. ಆಡಳಿತ ಕಛೇರಿ ಕಟ್ಟಡದಲ್ಲಿ ಸುಸಜ್ಜಿತ ಸೆಮಿನಾರ್ ಹಾಲ್, ಗಣಕ ಕೇಂದ್ರ, ವಿಡಿಯೋ ಕಾನ್ಪರೆನ್ಸಿಂಗ್ ಮತ್ತು ಉಪಗ್ರಹ ಆಧಾರಿತ ತರಬೇತಿ ನೀಡಲು ಸ್ಟುಡಿಯೋ ಸೌಲಭ್ಯವನ್ನು ಹೊಂದಿದೆ.

ಮೂಲಭೂತ ಸೌಲಭ್ಯಗಳ ವಿವರ ಈ ಕೆಳಕಂಡಂತಿದೆ.

| | | | | |
|---|---|---|---|---|
| 1 | ಕ್ಯಾಂಪಸ್ ವಿಸ್ತೀರ್ಣ | 34,456.52 ಚ. ಮೀಟರ್ (8.20 ಎಕರೆ ಅಥವಾ 3.445 ಹೆಕ್ಟೇರ್ಸ್) ಹಾಗೂ ಸಂಸ್ಥೆಗೆ ಹೊಂದಿಕೊಂಡಂತಿರುವ 14.36 ಎಕರೆ ಜಮೀನು ಸರ್ಕಾರದಿಂದ ಮಂಜೂರಾಗಿದ್ದು ಸಂಸ್ಥೆಯ ಸ್ವಾಧೀನದಲ್ಲಿರುತ್ತದೆ. | | |
| 2 | ಕಟ್ಟಡಗಳ ಸಂಖ್ಯೆ | ಒಂದು (ಆಡಳಿತ ಕಛೇರಿ ಕಟ್ಟಡ) | | |
| 3 | ವಸತಿ ನಿಲಯಗಳ ಸಂಖ್ಯೆ ಹಾಗೂ ಲಭ್ಯ ವಸತಿ ಸೌಲಭ್ಯ | ಒಂದು ವಸತಿ ನಿಲಯ ಕಟ್ಟಡ<br>i) ಎರಡು ಹಾಸಿಗೆ ಸೌಲಭ್ಯವುಳ್ಳ 24 ಕೊಠಡಿಗಳ ಒಂದು ವಸತಿ ನಿಲಯ<br>ii) ಎರಡು ಹಾಸಿಗೆ ಸೌಲಭ್ಯವುಳ್ಳ 04 ಹವಾ ನಿಯಂತ್ರಿತ ಕೊಠಡಿಗಳು<br>iii) ಸೋಲಾರ್ ವಾಟರ್ ಹೀಟರ್ 500 ಎಲ್.ಪಿ.ಡಿ. ಸಾಮರ್ಥ್ಯವುಳ್ಳದ್ದು 4 ಸಂಖ್ಯೆ | | |
| 4 | ತರಬೇತಿ ಕೊಠಡಿಗಳು/ ಸಾಮರ್ಥ್ಯ(ಹವಾ ನಿಯಂತ್ರಿತ ಕೊಠಡಿ) ವಸತಿ ನಿಲಯದಲ್ಲಿ | ಎರಡು : 1) 60 ಆಸನ ವ್ಯವಸ್ಥೆ ಮಾಡಬಹುದಾದ ಒಂದು ದೊಡ್ಡ ತರಬೇತಿ ಕೊಠಡಿ<br>2) 25 ಆಸನ ವ್ಯವಸ್ಥೆಯುಳ್ಳ ಒಂದು ಚಿಕ್ಕ ತರಬೇತಿ ಕೊಠಡಿ | | |
| | ಆಡಳಿತ ಕಟ್ಟಡದಲ್ಲಿ | 65 ಆಸನ ವ್ಯವಸ್ಥೆಯುಳ್ಳ ಒಂದು ಸೆಮಿನಾರ್ ಹಾಲ್(ಹವನಿಯಂತ್ರಿತ) | | |
| 5 | ಗಣಕಯಂತ್ರಗಳು / ತರಬೇತಿ ಸಾಮರ್ಥ್ಯ (ಹವಾ ನಿಯಂತ್ರಿತ ಕೊಠಡಿ) | 147 ಸಂಖ್ಯೆ (HP 15, HCL-31, Lenovo-87,P3-14)<br>25 ಗಣಕಯಂತ್ರಗಳುಳ್ಳ ತರಬೇತಿ ಕೊಠಡಿ | | |
| 6 | ಲ್ಯಾಪ್‌ಟ್ಯಾಪ್ | 15 ಸಂಖ್ಯೆ | | |
| 7 | ಸರ್ವರ್ | 02 ಸಂಖ್ಯೆ ಹೆಚ್.ಪಿ. | | |
| 8 | ಸ್ಕ್ಯಾನರ್ | 02 ಸಂಖ್ಯೆ ಮಾಡಲ್ 4890-01, 2400 - 01, | | |
| 9 | ಲೇಸರ್ ಪ್ರಿಂಟರ್ | 15 ಸಂಖ್ಯೆ | | |
| 10 | ಡಿ.ವಿ.ಡಿ ಕಾಪಿಯರ್ | 01 (07 ಡಿವಿಡಿ ರೈಟರ್‌ಗಳುಳ್ಳ ಒಂದು ಕ್ಯಾಬಿನ್) | | |
| 11 | ವಾಹನಗಳ ಸಂಖ್ಯೆ-5 | ಸಂಖ್ಯೆ | ಮಾಡಲ್ | ಖರೀದಿ ದಿನಾಂಕ |
| | | 01 | ಸ್ವರಾಜ್ ಮಜ್ದ (ಮಿನಿ ಬಸ್) | 05-10-1991 |
| | | 01 | ಮಾರುತಿ ಓಮ್ನಿ | 11-08-1994 |
| | | 01 | ಟಾಟಾ ಸುಮೋ | 25-03-1996 |
| | | 01 | ಟಾಟಾ ಇಂಡಿಗೋ | 19-09-2008 |
| | | 01 | ಅಂಬಾಸಿಡರ್ ಕಾರು | 16-10-2008 |
| 12 | **ಧೃಕ್ ಶ್ರವಣ ಉಪಕರಣಗಳು** | | | |
| | ಅ) ಟೆಲಿವಿಷನ್ | 36 (ವಸತಿ ನಿಲಯದ ಪ್ರತಿ ಕೊಠಡಿಗೆ ಒಂದರಂತೆ ಅಳವಡಿಸಲಾಗಿದೆ) | | |
| | ಇ) ಮಲ್ಟಿಮೀಡಿಯಾ ಪ್ರೊಜೆಕ್ಟರ್ | 08 | | |
| | ಉ) ಪಬ್ಲಿಕ್ ಅಡ್ರೆಸ್ ಸಿಸ್ಟಂ | 04 ಸೆಟ್‌ಗಳು | | |
| | ಊ) ಕಾರ್ಡ್‌ಲೆಸ್ ಮೈಕ್ | 21 | | |
| | ಋ) ವಿತ್‌ಕಾರ್ಡ್ ಮೈಕ್ | 04 | | |
| | ಎ) ಸ್ಟಿಲ್ ಕ್ಯಾಮೆರಾ | 01 | | |
| | ಏ) ಡಿಜಿಟಲ್ ಕ್ಯಾಮರಾ | 03 | | |
| | ಐ) ಸಿ.ಸಿ.ಡಿ. ಕ್ಯಾಮೆರಾ | 01(ಹಳೆಯದು) | | |
| | ಒ) ಮೋಟಾರೈಸ್ಡ್ ಸ್ಕ್ರೀನ್ | 02 | | |
| | ಓ) ಬಿಳಿ ಮ್ಯಾಗ್ನೆಟಿಕ್‌ಬೋರ್ಡ್ | 02 | | |

| | | |
|---|---|---|
| | ಔ)ಎಲ್.ಸಿ.ಡಿ ಟಿವಿ–52"<br>(ಶಾರ್ಪ್ ಕಂಪನಿ) | 02 |
| | ಎಲೆಕ್ಟ್ರಾನಿಕ್ ಬೋರ್ಡ್ | 01 |
| 13 | ಉಪಗ್ರಹ ತರಬೇತಿ ಕೇಂದ್ರ | ಅ) ಸ್ಯಾಟ್‌ಕಾಂ ಸ್ಟುಡಿಯೋ ಆ) ಭೂ ಕೇಂದ್ರ |
| 14 | ಕಛೇರಿ ಬಹುಪ್ರತಿ ಉಪಕರಣಗಳು | ಅ) ಮೋದಿ ಜೆರಾಕ್ಸ್ ಮಾಡೆಲ್ ೪೨೦ : ೦೧ ಸಂಖ್ಯೆ<br>ಆ) ತೋಶಿಬಾ – ಇ – ಸ್ಟುಡಿಯೋ ೧೬ : ೦೧ ಸಂಖ್ಯೆ<br>ಇ) ತೋಶಿಬಾ – ಇ – ಸ್ಟುಡಿಯೋ ೨೮೨ : ೦೧ ಸಂಖ್ಯೆ<br>ಈ) ರಿಸೋಗ್ರಾಫ್ ಕಾಪಿಯರ್ – ೦೧ : ೦೧ ಸಂಖ್ಯೆ<br>(ಗೆಸ್ಟೆಟ್‌ನರ್ ಕಾಪಿ ಪ್ರಿಂಟರ್ ೫೩೯ ಎಲ್) |
| 15 | ಗ್ರಂಥಾಲಯ ಸೌಲಭ್ಯ | ಅ) ಪುಸ್ತಕಗಳ ಸಂಖ್ಯೆ : 1019 ಸಂ.<br>ಆ) ಪತ್ರಿಕೆಗಳು : 12<br>ಇ) ಪಾಕ್ಷಿಕಗಳು : 12 |
| 16 | ದೂರವಾಣಿ ಸೌಲಭ್ಯ | ಈ ಸಂಸ್ಥೆಯಲ್ಲಿ ಎಂಟು (8) ಬಿ.ಎಸ್.ಎನ್.ಎಲ್. ಸಂಪರ್ಕದಿಂದ 64 ಅಂತರವಾಣಿ ಸೌಲಭ್ಯಗಳನ್ನು ಕಲ್ಪಿಸುವ ಇ.ಪಿ.ಎ.ಬಿ.ಎಕ್ಸ್ ಯಂತ್ರವಿರುತ್ತದೆ. ಇಡೀ ಸಂಸ್ಥೆಯು ಆಂತರಿಕ ದೂರವಾಣಿ ಸಂಪರ್ಕಜಾಲ ಹೊಂದಿರುತ್ತದೆ. |
| 17 | **ವಿದ್ಯುತ್ ವ್ಯವಸ್ಥೆ:** | 62.5 ಕೆವಿಎಮತ್ತು 125 ಕೆವಿಎ ಸಾಮರ್ಥ್ಯದ ಜನರೇಟರ್ ವ್ಯವಸ್ಥೆ ಇದೆ. ಹಾಗೂ ತರಬೇತಿ ಕೊಠಡಿಗಳಿಗೆ, ಗಣಕಯಂತ್ರ ಕೇಂದ್ರಕ್ಕೆ ಮತ್ತು ಸ್ಟುಡಿಯೋಗೆ ಯುಪಿಎಸ್ ವ್ಯವಸ್ಥೆ ಇದೆ. |

**ಸ್ಯಾಟ್‌ಕಾಂ ಸ್ಟುಡಿಯೋ**

ಭಾರತ ಸರ್ಕಾರದ ಬಾಹ್ಯಾಕಾಶ ಇಲಾಖೆ ಹಾಗೂ ಇಸ್ರೋ ಸಂಸ್ಥೆಯ ತಾಂತ್ರಿಕ ಬೆಂಬಲದಿಂದ ಸುಮಾರು 427.00 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಸ್ಯಾಟ್‌ಕಾಮ್ ಕೇಂದ್ರವು ಭೂಕೇಂದ್ರ (Earth Station) ಹಾಗೂ ವಿಸ್ತರಿಸಲ್ಪಟ್ಟ ಇನ್‌ಸ್ಯಾಟ್ 3 ಬಿ ಸಿ–ಬ್ಯಾಂಡ್ ಪರಿವರ್ತಕವನ್ನು ಹೊಂದಿದ್ದು ಏಕಮುಖ ದೃಶ್ಯ ಮಾಧ್ಯಮ ಮತ್ತು ದ್ವಿಮುಖ ಶ್ರವಣ ಮಾಧ್ಯಮ ಸಂಪರ್ಕವಿರುವ ಸ್ಟುಡಿಯೋವನ್ನು ಒಳಗೊಂಡಿರುತ್ತದೆ. ರಾಜ್ಯದ 176 ತಾಲ್ಲೂಕುಗಳ ಪೈಕಿ ಬೆಂಗಳೂರು ಪೂರ್ವ ತಾಲ್ಲೂಕು ಹೊರತುಪಡಿಸಿ ಉಳಿದ ಎಲ್ಲಾ ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿಗಳಲ್ಲಿ ಅಳವಡಿಸಲಾಗಿರುವ ಸ್ವೀಕೃತಿ ಕೇಂದ್ರಗಳು ಸೇರಿದಂತೆ ಜಿಲ್ಲಾ ತರಬೇತಿ ಸಂಸ್ಥೆಗಳು ಹಾಗೂ ಶಿಕ್ಷಣ ಇಲಾಖೆಯ ಸ್ವೀಕೃತಿ ಕೇಂದ್ರಗಳು ಸೇರಿ ಒಟ್ಟು 285 ಸ್ವೀಕೃತಿ ಕೇಂದ್ರಗಳ ಮೂಲಕ ತರಬೇತಿಯನ್ನು ಏಕ ಕಾಲದಲ್ಲಿ ತರಬೇತಿ ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಉಪಯೋಗಿಸಿಕೊಂಡು ಸಂಸ್ಥೆಯು ತನ್ನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಿರುವುದಲ್ಲದೆ, ಸರ್ಕಾರದ ಹಲವು ಇಲಾಖೆಗಳು, ಸಂಸ್ಥೆಗಳೂ ಸಹ ಅವರವರ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಈ ಸೌಲಭ್ಯವನ್ನು ನಿಗದಿತ ಶುಲ್ಕ ಪಾವತಿಸಿ ಪಡೆಯುತ್ತಿವೆ.

**ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಪಡೆದ ಅನುದಾನ, ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳು**

## ತಃಖ್ತೆ (I)

| | | | |
|---|---|---|---|
| 1. | ಯೋಜನೆಯ ಹೆಸರು | : | ಯೂರೋಪಿಯನ್ ಎಕನಾಮಿಕ್ ಕಮ್ಯೂನಿಟಿ ಅನುದಾನ |
| 2. | ಲೆಕ್ಕ ಶೀರ್ಷಿಕೆ | : | 2515-00-102-0-08 (ಯೋಜನೆ) |
| 3. | ಯೋಜನೆ ಅಡಿಯಲ್ಲಿ ಇದ್ದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು | : | 50 : 50 |
| 4. | ಉದ್ದೇಶ | : | ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಆಡಳಿತ ನಿರ್ವಹಣೆ ಮತ್ತು ತರಬೇತಿ |
| 5. | ಹಣಕಾಸು (ರೂ. ಲಕ್ಷಗಳಲ್ಲಿ) | : | 2009-10 – 172.98 (ಬಂಡವಾಳ)<br>2010-11 – 199.28 (ಬಂಡವಾಳ)<br>2011-12 – 209.30 (ಬಂಡವಾಳ) |
| 6. | ವೆಚ್ಚ (ರೂ. ಲಕ್ಷಗಳಲ್ಲಿ) | : | 2009-10 – – (ಬಂಡವಾಳ)<br>2010-11 – – (ಬಂಡವಾಳ)<br>2011-12 – 209.30 (ಬಂಡವಾಳ) ಮಾರ್ಚ್ 2012ರ ಅಂತ್ಯಕ್ಕೆ |

## ತಃಖ್ತೆ (II)

| | | | |
|---|---|---|---|
| 1. | ಯೋಜನೆಯ ಹೆಸರು | : | ಬಿ.ಆರ್.ಜಿ.ಎಫ್. |
| 2. | ಲೆಕ್ಕ ಶೀರ್ಷಿಕೆ | : | 2575-02-800-0-01-059 (ಯೋಜನೆ) |
| 3. | ಯೋಜನೆ ಅಡಿಯಲ್ಲಿ ಇದ್ದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು | : | 75 : 25 |
| 4. | ಉದ್ದೇಶ | : | ಹಿಂದುಳಿದ ಜಿಲ್ಲೆಗಳ ಅಭಿವೃದಿ ಯೋಜನೆಯಡಿ ಅನುಷ್ಠಾನಗೊಳಿಸಲಾಗುವ ಯೋಜನೆಗಳ ಬಗ್ಗೆ ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಸಾಮಾರ್ಥ್ಯಾಭಿವೃದ್ಧಿ ತರಬೇತಿ |
| 5. | ಹಣಕಾಸು (ರೂ. ಲಕ್ಷಗಳಲ್ಲಿ) | : | 2009-10 – 839.00 (ಬಂಡವಾಳ)<br>2010-11 – 397.00 (ಬಂಡವಾಳ)<br>2011-12 – 372.00 (ಬಂಡವಾಳ) |
| 6. | ವೆಚ್ಚ (ರೂ. ಲಕ್ಷಗಳಲ್ಲಿ) | : | 2009-10 – 41.2 (ಬಂಡವಾಳ)<br>2010-11 – 1320.85 (ಬಂಡವಾಳ)<br>2011-12 – 160.964 (ಬಂಡವಾಳ) ಮಾರ್ಚ್ 2012ರ ಅಂತ್ಯಕ್ಕೆ |

## ತಃಖ್ತೆ (III)

| | | | |
|---|---|---|---|
| 1. | ಯೋಜನೆಯ ಹೆಸರು | : | ಆರ್.ಜಿ.ಎಸ್.ವೈ. |
| 2. | ಲೆಕ್ಕ ಶೀರ್ಷಿಕೆ | : | 2515–101–19–19–01 (ಯೋಜನೆ) |
| 3. | ಯೋಜನೆ ಅಡಿಯಲ್ಲಿ ಇದ್ದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು | : | 75 : 25 |
| 4. | ಉದ್ದೇಶ | : | ತರಬೇತಿ ಕಾರ್ಯಕ್ರಮಗಳು |
| 5. | ಹಣಕಾಸು (ರೂ. ಲಕ್ಷಗಳಲ್ಲಿ) | : | 2009–10 – – (ರಾಜಸ್ವ)<br>2010–11 – 18.87 (ರಾಜಸ್ವ)<br>2011–12 – 46.20 (ರಾಜಸ್ವ) |
| 6. | ವೆಚ್ಚ (ರೂ. ಲಕ್ಷಗಳಲ್ಲಿ) | : | 2009–10 – 93.76 (ರಾಜಸ್ವ)<br>2010–11 – 67.40 (ರಾಜಸ್ವ)<br>2011–12 – 115.722 (ರಾಜಸ್ವ)<br>ಮಾರ್ಚ್ 2012ರ ಅಂತ್ಯಕ್ಕೆ |

## ತಃಖ್ತೆ (IV)

| | | | |
|---|---|---|---|
| 1. | ಯೋಜನೆಯ ಹೆಸರು | : | ಗ್ರಾಮ ಸ್ವರಾಜ್ |
| 2. | ಲೆಕ್ಕ ಶೀರ್ಷಿಕೆ | : | 2515–00–101–0–80 (ಯೋಜನೆ) |
| 3. | ಯೋಜನೆ ಅಡಿಯಲ್ಲಿ ಇದ್ದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು | : | ವಿಶ್ವ ಬ್ಯಾಂಕ್ ಪ್ರಾಯೋಜಿತ ಯೋಜನೆ |
| 4. | ಉದ್ದೇಶ | : | ರಾಷ್ಟ್ರದಲ್ಲಿ ಗುರುತಿಸಲಾಗಿರುವ ಅತೀ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗಾಗಿ ರೂಪಿಸುವ ಕಾರ್ಯಕ್ರಮಗಳ ಬಗ್ಗೆ ತರಬೇತಿ |
| 5. | ಹಣಕಾಸು (ರೂ. ಲಕ್ಷಗಳಲ್ಲಿ) | : | 2009–10 – 80.00 (ಬಂಡವಾಳ)<br>2010–11 – 141.61 (ಬಂಡವಾಳ)<br>2011–12 – 400.00 (ಬಂಡವಾಳ) |
| 6. | ವೆಚ್ಚ (ರೂ. ಲಕ್ಷಗಳಲ್ಲಿ) | : | 2009–10 – 92.08 (ರಾಜಸ್ವ)<br>2010–11 – 41.67 (ರಾಜಸ್ವ)<br>2011–12 – 2.14 (ರಾಜಸ್ವ) ಮಾರ್ಚ್ 2012ರ ಅಂತ್ಯಕ್ಕೆ |

## ತಃಖ್ತೆ (V)

| | | | |
|---|---|---|---|
| 1. | ಯೋಜನೆಯ ಹೆಸರು | : | ಗ್ರಾಮ ಪಂಚಾಯತಿ ಸದಸ್ಯರ ತರಬೇತಿಗಳು |
| 2. | ಲೆಕ್ಕ ಶೀರ್ಷಿಕೆ | : | 2515–00–102–0–08–01 (ಯೋಜನೆ) |
| 3. | ಯೋಜನೆ ಅಡಿಯಲ್ಲಿ ಇದ್ದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು | : | ರಾಜ್ಯ ಯೋಜನೆ |
| 4. | ಉದ್ದೇಶ | : | ಚುನಾಯಿತ ಸದಸ್ಯರ ಸಾಮರ್ಥ್ಯಾಭಿವೃದ್ಧಿಗೆ ತರಬೇತಿ ಕಾರ್ಯಕ್ರಮಗಳು |
| 5. | ಹಣಕಾಸು (ರೂ. ಲಕ್ಷಗಳಲ್ಲಿ) | : | 2009–10 – –<br>2010–11 – –<br>2011–12 – – |
| 6. | ವೆಚ್ಚ (ರೂ. ಲಕ್ಷಗಳಲ್ಲಿ) | : | 2009–10 – – (ರಾಜಸ್ವ)<br>2010–11 – – (ರಾಜಸ್ವ)<br>2011–12 – 69.46 (ರಾಜಸ್ವ) ಮಾರ್ಚ್ 2012ರ ಅಂತ್ಯಕ್ಕೆ |

## ತಃಖ್ತೆ (VI)

| | | | |
|---|---|---|---|
| 1. | ಯೋಜನೆಯ ಹೆಸರು | : | ಎಂ.ಜಿ.ಎನ್.ಆರ್.ಇ.ಜಿ.ಎಸ್. |
| 2. | ಲೆಕ್ಕ ಶೀರ್ಷಿಕೆ | : | |
| 3. | ಯೋಜನೆ ಅಡಿಯಲ್ಲಿ ಇದ್ದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು | : | 90 : 10 |
| 4. | ಉದ್ದೇಶ | : | ಗ್ರಾಮೀಣ ಪ್ರದೇಶದ ಅಕುಶಲ ಕೂಲಿಕಾರ್ಮಿಕರಿಗೆ ವಾರ್ಷಿಕವಾಗಿ ಕನಿಷ್ಠ 100 ದಿನಗಳ ಉದ್ಯೋಗಾವಕಾಶ ಕಲ್ಪಿಸುವ ಯೋಜನೆಯ ಬಗ್ಗೆ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ |
| 5. | ಹಣಕಾಸು (ರೂ. ಲಕ್ಷಗಳಲ್ಲಿ) | : | 2009–10 – 105.00 – (ರಾಜಸ್ವ)<br>2010–11 – 360.00 – (ರಾಜಸ್ವ)<br>2011–12 – 459.00 – (ರಾಜಸ್ವ) |
| 6. | ವೆಚ್ಚ (ರೂ. ಲಕ್ಷಗಳಲ್ಲಿ) | : | 2009–10 – 88.17 – (ರಾಜಸ್ವ)<br>2010–11 – 331.43 – (ರಾಜಸ್ವ)<br>2011–12 – 138.652 – (ರಾಜಸ್ವ) ಮಾರ್ಚ್ 2012ರ ಅಂತ್ಯಕ್ಕೆ |

## ತಃಖ್ತೆ (VII)

| | | | |
|---|---|---|---|
| 1. | ಯೋಜನೆಯ ಹೆಸರು | : | ಲ್ಯಾಬ್ ಟು ಲ್ಯಾಂಡ್ |
| 2. | ಲೆಕ್ಕ ಶೀರ್ಷಿಕೆ | : | ಕೇಂದ್ರ ಪುರಸ್ಕೃತ ಯೋಜನೆ |
| 3. | ಯೋಜನೆ ಅಡಿಯಲ್ಲಿ ಇದ್ದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು | : | ಕೇಂದ್ರ ಪುರಸ್ಕೃತ ಯೋಜನೆ |
| 4. | ಉದ್ದೇಶ | : | ಗ್ರಾಮೀಣಾಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸುವ ಎಲ್ಲಾ ಯೋಜನೆಗಳ ಮಾಹಿತಿಯನ್ನು ಗ್ರಾಮೀಣ ಜನತೆಗೆ ತಿಳಿಸುವ ಹಾಗೂ ಯೋಜನೆಯ ಫಲವನ್ನು ಲಭ್ಯಗೊಳಿಸುವ ಪ್ರಚಾರಕ್ಕಾಗಿ ಗ್ರಾಮೀಣ ಯುವಕರಿಗೆ ತರಬೇತಿ ಮತ್ತು ಮಾಹಿತಿ ನೀಡುವ ಕಾರ್ಯಕ್ರಮ |
| 5. | ಹಣಕಾಸು (ರೂ. ಲಕ್ಷಗಳಲ್ಲಿ) | : | 2009-10 - -<br>2010-11 - - (ಯೋಜನೆಯು 2011-12ನೇ ಸಾಲಿನಲ್ಲಿ ಪ್ರಾರಂಭಗೊಂಡಿದೆ)<br>2011-12- 46.00 - (ರಾಜಸ್ವ) |
| 6. | ವೆಚ್ಚ (ರೂ. ಲಕ್ಷಗಳಲ್ಲಿ) | : | 2009-10 - -<br>2010-11 - -<br>2011-12- 53.21 - (ರಾಜಸ್ವ) ಮಾರ್ಚ್ 2012ರ ಅಂತ್ಯಕ್ಕೆ |

**ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳು ಮತ್ತು ಮೌಲ್ಯಮಾಪನ ಅಧ್ಯಯನ, ವರದಿ ಹಾಗೂ ತೆಗೆದುಕೊಂಡ ಕ್ರಮಗಳು**

ಪಂಚಾಯತ್ ರಾಜ್ ವ್ಯವಸ್ಥೆಯ ಸಬಲೀಕರಣಕ್ಕಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತವನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಿಕೇಂದ್ರೀಕರಿಸುವುದು ಸರ್ಕಾರದ ಮೂಲ ಉದ್ದೇಶವಾಗಿರುತ್ತದೆ. ಈ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ಆಯೋಜಿಸುವುದು ಈ ಸಂಸ್ಥೆಯ ಧ್ಯೇಯೋದ್ದೇಶವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣಾಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ವಿವಿಧ ಯೋಜನೆಗಳ ಉದ್ದೇಶ ಹಾಗೂ ಅನುಷ್ಠಾನದ ಪ್ರಕ್ರಿಯೆಗಳ ಬಗ್ಗೆ ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಅನುಷ್ಠಾನಾಧಿಕಾರಿಗಳಿಗೆ ವಾರ್ಷಿಕವಾಗಿ ನಿಗದಿಗೊಳಿಸಲಾಗಿರುವ ಕಾರ್ಯಕ್ರಮದ ಪಟ್ಟಿಗನುಸಾರವಾಗಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ.

**2011-12ನೇ ಸಾಲಿನ ತರಬೇತಿ ಕಾರ್ಯಕ್ರಮಗಳ ವಿವರ**

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಬಗ್ಗೆ ತರಬೇತಿ/ಕಾರ್ಯಾಗಾರ/ಸಂಶೋಧನಾ ಚಟುವಟಿಕೆಗಳನ್ನು ಆಯೋಜಿಸುವುದು ಈ ಸಂಸ್ಥೆಯ ಆಡಳಿತಾತ್ಮಕ ಚಟುವಟಿಕೆಯಾಗಿರುತ್ತದೆ. 2011-12ನೇ ಸಾಲಿನಲ್ಲಿ ಇಂತಹ ಕಾರ್ಯಾಗಾರಗಳನ್ನು ಆಯೋಜಿಸಿದ ವಿವರಗಳನ್ನು ಕೆಳಗೆ ವಿವರಿಸಲಾಗಿದೆ.

**ಪಂಚಾಯತ್ ಮಹಿಳಾ ಶಕ್ತಿ ಅಭಿಯಾನ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ**

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | | | | | |
|---|---|---|---|---|---|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ ಹಿಂದುಳಿದ ವರ್ಗ | ಮಹಿಳೆ |
| 09–10 | ಮುಖಾಮುಖಿ ತರಬೇತಿ | 05 | – | – | 279 | 279 | 15 | 14 | 21 | 229 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – | – | – | – | – |
| 10–11 | ಮುಖಾಮುಖಿ ತರಬೇತಿ | – | – | – | – | – | – | – | – | – |
| | ಉಪಗ್ರಹ ಆಧಾರಿತ ತರಬೇತಿ | – | – | – | – | – | – | – | – | – |
| 11–12 | ಮುಖಾಮುಖಿ ತರಬೇತಿ | – | – | – | – | – | – | – | – | – |
| | ಉಪಗ್ರಹ ಆಧಾರಿತ ತರಬೇತಿ | – | – | – | – | – | – | – | – | – |

**ಯುಎನ್–ವುಮೆನ್ ಯೋಜನೆಯಡಿ ತರಬೇತಿ**

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09–10 | ಮುಖಾಮುಖಿ ತರಬೇತಿ | – | – | – | – | – |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 10–11 | ಮುಖಾಮುಖಿ ತರಬೇತಿ | – | – | – | – | – |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 11–12 | ಮುಖಾಮುಖಿ ತರಬೇತಿ | 03 | 25 | 34 | 46 | 105 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |

**ಆರ್.ಜಿ.ಎಸ್.ವೈ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ**

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09–10 | ಮುಖಾಮುಖಿ ತರಬೇತಿ | 03 | 47 | 118 | 06 | 171 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 10–11 | ಮುಖಾಮುಖಿ ತರಬೇತಿ | 45 | 8160 | 266 | 62290 | 70716 |
| | ಉಪಗ್ರಹ ಆಧಾರಿತ ತರಬೇತಿ | 02 | 5701 | – | – | 5701 |
| 11–12 | ಮುಖಾಮುಖಿ ತರಬೇತಿ | 64 | 247 | 442 | 1718 | 2407 |
| | ಉಪಗ್ರಹ ಆಧಾರಿತ ತರಬೇತಿ | 50 | 9666 | 450 | 96560 | 106676 |

**ಬಿ.ಆರ್.ಜಿ.ಎಫ್ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ**

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿ ಗಳು | ಅಧಿಕಾರೇ ತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09–10 | ಮುಖಾಮುಖಿ ತರಬೇತಿ | 14 | 32 | 1934 | 12 | 1978 |
| | ಉಪಗ್ರಹ ಆಧಾರಿತ ತರಬೇತಿ | 2 | 1233 | 58885 | 0 | 60118 |
| 10–11 | ಮುಖಾಮುಖಿ ತರಬೇತಿ | 45 | 1325 | 123 | 0 | 1448 |
| | ಉಪಗ್ರಹ ಆಧಾರಿತ ತರಬೇತಿ | 3 | 1072 | 0 | 10721 | 11793 |
| 11–12 | ಮುಖಾಮುಖಿ ತರಬೇತಿ | 66 | 1155 | 581 | – | 1736 |
| | ಉಪಗ್ರಹ ಆಧಾರಿತ ತರಬೇತಿ | 09 | 1827 | – | 22265 | 24092 |

**ಎಂ.ಜಿ. ಎನ್.ಆರ್.ಇ.ಜಿ.ಎ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ**

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿ ಗಳು | ಅಧಿಕಾರೇ ತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09–10 | ಮುಖಾಮುಖಿ ತರಬೇತಿ | 23 | 272 | 478 | – | 750 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 10–11 | ಮುಖಾಮುಖಿ ತರಬೇತಿ | 21 | 50 | 652 | 5 | 707 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 11–12 | ಮುಖಾಮುಖಿ ತರಬೇತಿ | 39 | 751 | 421 | 168 | 1340 |
| | ಉಪಗ್ರಹ ಆಧಾರಿತ ತರಬೇತಿ | 01 | – | 195 | – | 195 |

**ಎಸ್.ಜಿ.ಎಸ್.ವೈ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ**

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿ ಗಳು | ಅಧಿಕಾರೇ ತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09–10 | ಮುಖಾಮುಖಿ ತರಬೇತಿ | 06 | 102 | 70 | – | 172 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 10–11 | ಮುಖಾಮುಖಿ ತರಬೇತಿ | 11 | 50 | 329 | – | 379 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 11–12 | ಮುಖಾಮುಖಿ ತರಬೇತಿ | 10 | 121 | 277 | – | 398 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |

## ಗ್ರಾಮ ಸ್ವರಾಜ್ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09–10 | ಮುಖಾಮುಖಿ ತರಬೇತಿ | 05 | – | – | 279 | 279 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 10–11 | ಮುಖಾಮುಖಿ ತರಬೇತಿ | – | – | – | – | – |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 11–12 | ಮುಖಾಮುಖಿ ತರಬೇತಿ | 40 | 1877 | 117 | 59 | 2053 |
| | ಉಪಗ್ರಹ ಆಧಾರಿತ ತರಬೇತಿ | 02 | 12212 | – | 3975 | 16187 |

## Recurring Grant ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09–10 | ಮುಖಾಮುಖಿ ತರಬೇತಿ | 22 | 274 | 55 | 126 | 455 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 10–11 | ಮುಖಾಮುಖಿ ತರಬೇತಿ | 32 | 714 | 218 | 80 | 1012 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 11–12 | ಮುಖಾಮುಖಿ ತರಬೇತಿ | 15 | 429 | 16 | 0 | 445 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |

## ಇತರೆ (ಎನ್.ಐ.ಆರ್.ಡಿ) ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09–10 | ಮುಖಾಮುಖಿ ತರಬೇತಿ | 2 | 55 | 5 | – | 60 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 10–11 | ಮುಖಾಮುಖಿ ತರಬೇತಿ | 6 | 151 | 29 | 2 | 182 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |
| 11–12 | ಮುಖಾಮುಖಿ ತರಬೇತಿ | 06 | 149 | 73 | – | 222 |
| | ಉಪಗ್ರಹ ಆಧಾರಿತ ತರಬೇತಿ | – | – | – | – | – |

**ಲ್ಯಾಬ್ ಟು ಲ್ಯಾಂಡ್ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ**

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09-10 | ಮುಖಾಮುಖಿ ತರಬೇತಿ | - | - | - | - | - |
| | ಉಪಗ್ರಹ ಆಧಾರಿತ ತರಬೇತಿ | - | - | - | - | - |
| 10-11 | ಮುಖಾಮುಖಿ ತರಬೇತಿ | - | - | - | - | - |
| | ಉಪಗ್ರಹ ಆಧಾರಿತ ತರಬೇತಿ | - | - | - | - | - |
| 11-12 | ಮುಖಾಮುಖಿ ತರಬೇತಿ | 29 | 05 | 1194 | 03 | 1202 |
| | ಉಪಗ್ರಹ ಆಧಾರಿತ ತರಬೇತಿ | - | - | - | - | - |

## Research Activity ಯಡಿ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09-10 | ಮುಖಾಮುಖಿ ತರಬೇತಿ | - | - | - | - | - |
| | ಉಪಗ್ರಹ ಆಧಾರಿತ ತರಬೇತಿ | - | - | - | - | - |
| 10-11 | ಮುಖಾಮುಖಿ ತರಬೇತಿ | - | - | - | - | - |
| | ಉಪಗ್ರಹ ಆಧಾರಿತ ತರಬೇತಿ | - | - | - | - | - |
| 11-12 | ಮುಖಾಮುಖಿ ತರಬೇತಿ | 01 | 11 | - | - | 11 |
| | ಉಪಗ್ರಹ ಆಧಾರಿತ ತರಬೇತಿ | - | - | - | - | - |

**ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ತರಬೇತಿ ಕಾರ್ಯಕ್ರಮಗಳ ಪ್ರಗತಿ ವರದಿ**

| ಸಾಲು | ವಿವರ | ನಡೆಸಲಾದ ತರಬೇತಿ ಕಾರ್ಯ ಕ್ರಮಗಳ ಸಂಖ್ಯೆ | ಭಾಗವಹಿಸಿದ ಶಿಬಿರಾರ್ಥಿಗಳು | | | |
|---|---|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು | ಚುನಾಯಿತ ಪ್ರತಿನಿಧಿಗಳು | ಒಟ್ಟು |
| 09-10 | ಮುಖಾಮುಖಿ ತರಬೇತಿ | - | - | - | - | - |
| | ಉಪಗ್ರಹ ಆಧಾರಿತ ತರಬೇತಿ | - | - | - | - | - |
| 10-11 | ಮುಖಾಮುಖಿ ತರಬೇತಿ | - | - | - | - | - |
| | ಉಪಗ್ರಹ ಆಧಾರಿತ ತರಬೇತಿ | - | - | - | - | - |
| 11-12 | ಮುಖಾಮುಖಿ ತರಬೇತಿ | 01 | 23 | - | - | 23 |
| | ಉಪಗ್ರಹ ಆಧಾರಿತ ತರಬೇತಿ | - | - | - | - | - |

ತರಬೇತಿಯ ಉದ್ದೇಶ ಪರಿಣಾಮಕಾರಿಯಾಗಿದೆಯೇ ಎಂಬ ಬಗ್ಗೆ ತರಬೇತಿ ಪಡೆದವರ ಕಾರ್ಯವೈಖರಿ ಹಾಗೂ ಅನುಷ್ಠಾನದ ಪ್ರಕ್ರಿಯೆಗಳನ್ನು ಪರಿಶೀಲಿಸಲು ಅನುಪಾಲನ ವರದಿಯನ್ನು ಪಡೆದುಕೊಳ್ಳಲು ಸಂಸ್ಥೆಯು ಕ್ರಮ ವಹಿಸಿರುತ್ತದೆ.

**ತರಬೇತಿ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡಿಸಿದ ವಿವರ**

| ಕ್ರಮ ಸಂಖ್ಯೆ | ವಿಷಯ | ಮೌಲ್ಯಮಾಪನ ಮಾಡಲು ವಹಿಸಿದ ಸಂಖ್ಯೆ | ಮೌಲ್ಯಮಾಪನದ ಹಂತ |
|---|---|---|---|
| 01 | ಗ್ರಾಮ ಪಂಚಾಯತಿ ಸದಸ್ಯರ ಆರೋಗ್ಯ ಮತ್ತು ಶಿಕ್ಷಣ ಉಪಗ್ರಹ ತರಬೇತಿ | ಭಗೀರಥ ಸಂಸ್ಥೆ ಮೈಸೂರು | ಮೌಲ್ಯಮಾಪನ ಕಾರ್ಯವು ಮುಕ್ತಾಯಗೊಂಡಿದ್ದು ಸಂಸ್ಥೆಗೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಆಂಗ್ಲ ಭಾಷೆಗೆ ಸಿದ್ಧಪಡಿಸಿ ಸಂಸ್ಥೆಗೆ ಸಲ್ಲಿಸಲು ತಿಳಿಸಲಾಗಿರುತ್ತದೆ. |
| 02 | ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ತರಬೇತಿ | ಭಗೀರಥ ಸಂಸ್ಥೆ ಮೈಸೂರು | ಮೌಲ್ಯಮಾಪನ ಕಾರ್ಯವು ಮುಕ್ತಾಯಗೊಂಡಿದ್ದು ಸಂಸ್ಥೆಗೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಆಂಗ್ಲ ಭಾಷೆಗೆ ಸಿದ್ಧಪಡಿಸಿ ಸಂಸ್ಥೆಗೆ ಸಲ್ಲಿಸಲು ತಿಳಿಸಲಾಗಿರುತ್ತದೆ. |
| 03 | ಗ್ರಾಮ ಸ್ವರಾಜ್ ಯೋಜನೆಯಡಿ ನಡೆದ ತರಬೇತಿಗಳ ಮೌಲ್ಯಮಾಪನ | ಮಿಡ್ಸ್ ಸಂಸ್ಥೆ, ಚೆನ್ನೈ | ಮೌಲ್ಯಮಾಪನ ಕಾರ್ಯ ಮುಗಿಸಿ ಕರಡು ವರದಿಯನ್ನು ಸಂಸ್ಥೆಗೆ ಸಲ್ಲಿಸಿದ್ದು ಮಾನ್ಯ ಮಹಾನಿರ್ದೇಶಕರು ಕೆಲವು ಮಾರ್ಪಾಡುಗಳನ್ನು ಸೂಚಿಸಿರುವುದರಿಂದ ಪರಿಷ್ಕೃತ ಕರಡು ವರದಿ ಸಲ್ಲಿಸಲು ತಿಳಿಸಿದೆ. |

**ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳು ಮತ್ತು ಮೌಲ್ಯಮಾಪನ ಅಧ್ಯಯನ, ವರದಿ ಹಾಗೂ ತೆಗೆದುಕೊಂಡ ಕ್ರಮಗಳು:**

ಬಿಆರ್‌ಜಿಎಫ್ ಯೋಜನೆಯಡಿ ವಿವಿಧ ಸಂಸ್ಥೆಗಳಲ್ಲಿ ಕೈಗೆತ್ತಿಕೊಂಡಿರುವ ತರಬೇತಿಗಳ ಪ್ರಭಾವ ಕುರಿತು ಅಧ್ಯಯನ ಕೈಗೆತ್ತಿಕೊಂಡು ಟರ್ಮಿನಲ್ ರಿಪೋರ್ಟ್ ಸಿದ್ದಪಡಿಸಲಾಗುತ್ತಿದೆ.

ಸಂಸ್ಥೆಯು ಸರ್ಕಾರದ ಮೌಲ್ಯಮಾಪನ ವಿಭಾಗ, ಯೋಜನಾ ಶಾಖೆ ಇವರು ಹೊರಡಿಸಲಾದ ಟಿಪ್ಪಣಿಯಲ್ಲಿ **ಎಮ್.ಐ.ಡಿ.ಎಸ್. ಚೆನ್ನೈ** ಅಂಗೀಕೃತ ಸಂಸ್ಥೆಯಾಗಿರುವುದರಿಂದ ಸದರಿ ಕಾರ್ಯವನ್ನು ಈ **ಎಮ್.ಐ.ಡಿ.ಎಸ್. ಚೆನ್ನೈ** ಮೂಲಕ ನಡೆಸಲು ಅನುಮೋದನೆಯಾಗಿರುತ್ತದೆ. ಸದರಿ ಸಂಸ್ಥೆಯು ಮೌಲ್ಯಮಾಪನ ವರದಿಗಳನ್ನು ನೀಡಿದ ನಂತರ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

**ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ**

ಈ ಸಂಸ್ಥೆಯ ಆಡಳಿತವನ್ನು ನಿರ್ವಹಿಸಲು ಅಗತ್ಯವಾಗಿರುವ ಲಿಪಿಕ ವೃಂದದ ಹಾಗೂ ಅಧೀಕ್ಷಕ ವೃಂದದ ಹುದ್ದೆಗಳಿಗೆ ಸರ್ಕಾರದ ಇಲಾಖೆಗಳಿಂದ ನಿಯೋಜನೆ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ. ತರಬೇತಿಗೆ ಸಂಬಂಧಿಸಿದಂತೆ ಬೋಧಕರುಗಳಿಗೆ ಸಹಾಯಕರಾಗಿ ಕಾರ್ಯನಿರ್ವಹಿಸಲು ಮಾಸಿಕ ಗೌರವ ಸಂಭಾವನೆ ಆಧಾರದ ಮೇಲೆ ಅಗತ್ಯವಿರುವ ಸಿಬ್ಬಂದಿಯನ್ನು ಅರ್ಹತೆಯನ್ನಾಧರಿಸಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ.

ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ವೃಂದದ ಹಾಗೂ ಲಿಪಿಕ ಮತ್ತು ಅಧೀಕ್ಷಕ ವೃಂದದ ಅಧಿಕಾರಿಗಳ ಬಗ್ಗೆ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಈ ಕೆಳಕಂಡಂತೆ ವಿವರಿಸಲಾಗಿದೆ.

**2011–12ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರ**

| ಕ್ರ. ಸಂ. | ವರ್ಗ | ಒಟ್ಟು ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾ. | ಪ.ಪಂ. |
|---|---|---|---|---|---|---|
| 1 | ಎ | 07 | 05 | 02 | 01 | – |
| 2 | ಬಿ | 04 | 04 | – | – | – |
| 3 | ಸಿ | 26 | 20 | 06 | – | 02 |
| 4 | ಡಿ | 15 | 13 | 02 | 01 | – |
| | **ಒಟ್ಟು** | **52** | **42** | **10** | **02** | **02** |

**2011–12ನೇ ಸಾಲಿನಲ್ಲಿ ಖಾಲಿ ಇರುವ, ನಿವೃತ್ತಿಯಾದ/ನಿವೃತ್ತಿಯಾಗಲಿರುವ ವಿವರ**

| ಕ್ರ. ಸಂ. | ವರ್ಗ | ಖಾಲಿ ಹುದ್ದೆಗಳು | ನಿವೃತ್ತಿಯಾದವರು | ನಿವೃತ್ತಿಯಾಗಲಿರುವವರು |
|---|---|---|---|---|
| 1 | ಎ | 07 | | |
| 2 | ಬಿ | – | | |
| 3 | ಸಿ | 07 | | |
| 4 | ಡಿ | 08 | | |
| | **ಒಟ್ಟು** | **22** | | |

**2011–12ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರ**

| ಕ್ರ. ಸಂ. | ಹುದ್ದೆ | ಸಂಖ್ಯೆ |
|---|---|---|
| 1 | ಕೋರ್ ಫ್ಯಾಕಲ್ಟಿಗಳು | 02 |
| 2 | ಸಲಹೆಗಾರರು /<br>ಸೀನಿಯರ್ ಪ್ರೋಗ್ರಾಮರ್ | 01<br>01 |
| 3 | ಎಂ.ಜಿ.ಎನ್.ಆರ್.ಇ.ಜಿ.ಎಸ್.<br>ತರಬೇತಿ ಸಂಯೋಜಕರುಗಳು<br>ಲ್ಯಾಬ್ ಟು ಲ್ಯಾಂಡ್ | 03<br><br>01 |
| 4 | ಯೋಜನಾ ಸಹಾಯಕರು | 08 |

| | | |
|---|---|---|
| 5 | ಗ್ರೂಪ್ ಡಿ | 10 |
| 6 | ವಾಹನ ಚಾಲಕರು | – |
| 7 | ಇತರೆ (ಡಾಟಾ ಎಂಟ್ರಿ ಆಪರೇಟರ್ಸ್) | 01 |
| 8 | ಭದ್ರತಾ ಸಿಬ್ಬಂದಿ | 09 |
| 9 | ತೋಟಗಾರಿಕೆ ಕೆಲಸಗಾರರು | 15 |
| | **ಒಟ್ಟು** | **51** |

**2011–12ನೇ ಸಾಲಿನಲ್ಲಿ ತರಬೇತಿ ಪಡೆದ ಅಧಿಕಾರಿ/ಸಿಬ್ಬಂದಿಗಳ ವಿವರ**

ವಿವರಗಳನ್ನು ನಿಗದಿತ ನಮೂನೆಯಲ್ಲಿ ಈ ಕೆಳಗೆ ನೀಡಲಾಗಿದೆ.

| **ಕ್ರ. ಸಂ.** | **ವರ್ಗ** | **ರಾಜ್ಯದ ತರಬೇತಿ ಕಾರ್ಯಕ್ರಮಗಳು** | **ಹೊರ ರಾಜ್ಯದ ತರಬೇತಿ ಕಾರ್ಯಕ್ರಮಗಳು** | **ವಿದೇಶ ತರಬೇತಿ ಕಾರ್ಯಕ್ರಮಗಳು** |
|---|---|---|---|---|
| 1 | ಎ | 07 | 24 | 05 |
| 2 | ಬಿ | – | – | – |
| 3 | ಸಿ | – | – | – |
| 4 | ಡಿ | – | – | – |

**2011–12ನೇ ಸಾಲಿನಲ್ಲಿ ಪಡೆದ ಪ್ರಶಸ್ತಿಗಳ ವಿವರ :**

ತರಬೇತಿ ಪಡೆದ ಶಿಬಿರಾರ್ಥಿಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಸಲ್ಲಿಸಿರುವ ಉತ್ತಮ ಸೇವೆಗಾಗಿ ಕೆಳಕಂಡ 02 ಯೋಜನೆಗಳಲ್ಲಿ ಸಂಬಂಧಿಸಿದ ಗ್ರಾಮ ಪಂಚಾಯತಿಗಳಿಗೆ ರಾಷ್ಟ್ರ ಮಟ್ಟದ ಪ್ರಶಸ್ತಿ ದೊರಕಿದೆ.

1. ಎಂ.ಜಿ.ಎನ್.ಆರ್.ಇ.ಜಿ.ಎಸ್. – ಧಾರವಾಡ ಜಿಲ್ಲೆಯ ಯಾದ್‌ವಾಡ್ ಗ್ರಾಮ ಪಂಚಾಯತ್
2. ಲ್ಯಾಬ್ ಟು ಲ್ಯಾಂಡ್ – ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಎಳೆಬೇವಿನಹಳ್ಳಿ ಗ್ರಾಮಕ್ಕೆ 'ಗ್ರಾಮ ರತ್ನ' ಪ್ರಶಸ್ತಿ ದೊರಕಿದೆ.

**2011–12ನೇ ಸಾಲಿನಲ್ಲಿ ಕೈಗೊಂಡ ಆಡಳಿತಾತ್ಮಕ ಪರಿವೀಕ್ಷಣಾ ವಿವರ**

ಉಪಗ್ರಹ ಆಧಾರಿತ ತರಬೇತಿಗಳನ್ನು ನಿರ್ವಹಿಸುವ ಕಾರ್ಯಕ್ರಮಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಬಿತ್ತರಿಸುವ ಕಾರಣ ಆಯಾ ತಾಲ್ಲೂಕು ಮತ್ತು ಜಿಲ್ಲಾ ತರಬೇತಿ ಕೇಂದ್ರಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ತರಬೇತಿಯಲ್ಲಿ ಭಾಗವಹಿಸುತ್ತಿರುವವರ ಹಾಜರಾತಿ ಮತ್ತು ಸ್ಥಳೀಯ ಸಮಸ್ಯೆಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಸಂಸ್ಥೆಯ ಬೋಧಕರು ಮತ್ತು ಅಧಿಕಾರಿಗಳು ನಿರ್ವಹಿಸಿರುತ್ತಾರೆ.

**ವಿಧಾನಸಭಾ/ವಿಧಾನಪರಿಷತ್/ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ವಿವರ:**

| **ವಿಧಾನ ಸಭಾ ಪ್ರಶ್ನೆಗಳು** | | **ವಿಧಾನ ಪರಿಷತ್ ಪ್ರಶ್ನೆಗಳು** | | **ಗಮನ ಸೆಳೆಯುವ ಸೂಚನೆಗೆ ಉತ್ತರಗಳು** | | **ಮುಂದಿನ ಅಧಿವೇಶನದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು** | |
|---|---|---|---|---|---|---|---|
| ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ವಿಧಾನಸಭಾ | ವಿಧಾನ ಪರಿಷತ್ |
| – | – | 02 | 02 | – | – | – | – |

**ಮಾಹಿತಿ ಹಕ್ಕು ಅಧಿನಿಯಮ 2005**

ಮಾಹಿತಿ ಹಕ್ಕು ಅಧಿನಿಯಮ – 2005ರಡಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ – 05, ವಿವರ ಸಲ್ಲಿಸಿದ ಅರ್ಜಿಗಳ ಸಂಖ್ಯೆ – 05

| **ಸ್ವೀಕರಿಸಿದ ಒಟ್ಟು ಅರ್ಜಿಗಳು** | **ನಿಗದಿತ ಕಾಲಾವಧಿಯಲ್ಲಿ ಉತ್ತರಿಸಿದ ಅರ್ಜಿಗಳು** | **ಸ್ವೀಕರಿಸಿದ ಅರ್ಜಿ ಶುಲ್ಕ + ದಾಖಲೆ ಪ್ರತಿಗಳನ್ನು ನೀಡಲು ಸ್ವೀಕರಿಸಿದ ಮೊತ್ತ (ರೂ. ಗಳಲ್ಲಿ)** | **ಮೇಲ್ಮನವಿ ನಂತರ ಇತ್ಯರ್ಥಗೊಳಿಸಿದ ಅರ್ಜಿಗಳು** | | **ವಿಧಿಸಿದ ದಂಡ (ರೂ.ಗಳಲ್ಲಿ)** |
|---|---|---|---|---|---|
| | | | **ಮೇಲ್ಮನವಿ ಪ್ರಾಧಿಕಾರ ಇತ್ಯರ್ಥ ಗೊಳಿಸಿದ ಸಂಖ್ಯೆ** | **ಮಾಹಿತಿ ಹಕ್ಕು ಆಯೋಗದಿಂದ ಇತ್ಯರ್ಥಗೊಳಿಸಿದ ಸಂಖ್ಯೆ** | |
| 05 | 05 | 50/– + 90/–(ಹೆಚ್ಚುವರಿ ಮಾಹಿತಿಗಾಗಿ) | – | – | – |

* *

# 3. ಗ್ರಾಮ ಸ್ವರಾಜ್ ಯೋಜನೆ

## 1. ಯೋಜನೆಯ ದೃಷ್ಟಿಕೋನ, ಧ್ಯೇಯ ಮತ್ತು ಉದ್ದೇಶಗಳು :

ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆ ಎಂಬುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಅನುಷ್ಠಾನಗೊಳ್ಳುತ್ತಿರುವ ಒಂದು ವಿಶ್ವ ಬ್ಯಾಂಕ್ ಆರ್ಥಿಕ ನೆರವಿನ ಯೋಜನೆಯಾಗಿದೆ. ಈ ಯೋಜನೆಯು 2006–07ನೇ ಆರ್ಥಿಕ ಸಾಲಿನಿಂದ ಅರಂಭಗೊಂಡು ಪ್ರಮುಖವಾಗಿ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ. ಯೋಜನಾ ಅನುಷ್ಠಾನ ಅವಧಿಯು 5 ವರ್ಷಗಳಾಗಿದ್ದು, ಈ ಅವಧಿಗೆ ರೂ.600.00 ಕೋಟಿಗಳ ಯೋಜನಾ ಗಾತ್ರವನ್ನು ಹೊಂದಿದೆ.

ಯೋಜನೆಯ ಮುಖ್ಯ ಧ್ಯೇಯವೆಂದರೆ ಯೋಜನಾ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳ ಗ್ರಾಮ ಪಂಚಾಯತಿಗಳಲ್ಲಿ ಮೊದಲಿದ್ದ ಸ್ಥಿತಿಯನ್ನು ಸುಧಾರಿಸಿ ಆ ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸುವುದಾಗಿದೆ.

**ಗ್ರಾಮ ಸ್ವರಾಜ್ ಯೋಜನೆಯ ಪ್ರಮುಖ ಉದ್ದೇಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿದೆ;**

ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆ ಮತ್ತು ಗ್ರಾಮೀಣ ಜನರು ನಿರ್ಧರಿಸುವ ಆದ್ಯತೆಯ ಮೇಲೆ ಅಗತ್ಯವಾದ ಸೇವೆಗಳನ್ನು ಒದಗಿಸುವುದು. ಈ ಧ್ಯೇಯೋದ್ದೇಶಗಳನ್ನು ಸಾಧಿಸುವ ಸಲುವಾಗಿ ಈ ಕೆಳಗಿನ ಯೋಜನೆಗಳನ್ನು ಹಮ್ಮಿಕೊಳ್ಳಲು ಕ್ರಮವಹಿಸಿದೆ.

- ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಸಾಮರ್ಥ್ಯ ನಿರ್ಮಾಣ.
- ಸ್ವಂತ ಆದಾಯ ಸಂಗ್ರಹಣೆಯ ಕುರಿತು ಮಾರ್ಗದರ್ಶನ ಮತ್ತು ಕಾರ್ಯ ವಿಧಾನದಲ್ಲಿ ಸುಧಾರಣೆ.
- ಅತ್ಯಂತ ಹಿಂದುಳಿದ 39 ತಾಲೂಕುಗಳ 1341 ಗ್ರಾಮ ಪಂಚಾಯತಿಗಳಿಗೆ ಮುಕ್ತ ಅನುದಾನವನ್ನು ಸೂತ್ರದ ಆಧಾರದ ಮೇಲೆ ಒದಗಿಸುವುದು.
- ಸಂಗ್ರಹಣಾ ಪದ್ಧತಿ ಮತ್ತು ಹಣಕಾಸು ನಿರ್ವಹಣೆಯ ಪುನಶ್ಚೇತನ.
- ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಅಧಿನಿಯಮ 1993ರ ಅಡಿಯಲ್ಲಿ ವಹಿಸಲಾದ ವಿವಿಧ ಶ್ರೇಣಿಯ ಸೇವೆಗಳ ನೀಡಿಕೆಯಲ್ಲಿ ಪರಿಣಾಮಕಾರಿ ಸುಧಾರಣೆ

## 2. ಯೋಜನೆಯ ಸಂಘಟನೆ :

ಗ್ರಾಮ ಸ್ವರಾಜ್ ಯೋಜನೆಯನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಯೋಜನಾ ಕೇಂದ್ರ ಕಛೇರಿಯನ್ನು ತೆರೆಯಲಾಗಿದೆ. ಯೋಜನಾ ಕಛೇರಿಯ ಉಸ್ತುವಾರಿಯನ್ನು ಮುಖ್ಯಸ್ಥರು ವಹಿಸಿರುತ್ತಾರೆ. ಇವರಿಗೆ ಸಹಾಯಕವಾಗಿ ಅಪರ ಮುಖ್ಯಸ್ಥರು – ಕಾರ್ಯಾಚರಣೆ, ಅಪರ ಮುಖ್ಯಸ್ಥರು – ಹಣಕಾಸು, ಪಂಚಾಯತಿ ಸೌಲಭ್ಯ ತಜ್ಞರುಗಳು, ಸಂಗ್ರಹಣಾಧಿಕಾರಿ, ಕಾರ್ಯನಿರ್ವಾಹಕ ಸಹಾಯಕರುಗಳು ಮತ್ತು ಗಣಕಯಂತ್ರ ಪ್ರೋಗ್ರಾಮರ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಅಲ್ಲದೇ ಗುಲಬರ್ಗಾದಲ್ಲಿ ಯೋಜನಾ ಉಪಘಟಕವೊಂದನ್ನು ಪಂಚಾಯತಿ ಸೌಲಭ್ಯ ತಜ್ಞರ ನೇತೃತ್ವದಲ್ಲಿ ಸ್ಥಾಪಿಸಲಾಗಿದ್ದು ಉತ್ತರ ಕರ್ನಾಟಕ ಭಾಗದಲ್ಲಿ ಬರುವ ಯೋಜನಾ ವ್ಯಾಪ್ತಿಯ ತಾಲ್ಲೂಕುಗಳಲ್ಲಿ ಯೋಜನೆಯ ಅನುಷ್ಠಾನದ ಉಸ್ತುವಾರಿಯನ್ನು ನೋಡಿಕೊಳ್ಳುತ್ತದೆ.

### 3. ಇಲಾಖೆಯ ಅಧಿನಿಯಮಗಳ ಯಥಾವತ್ ಅನುಷ್ಠಾನ :

ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬರುವುದರಿಂದ ಈ ಇಲಾಖೆಗಾಗಿ ಇರುವ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ – 1993ನ್ನು ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ಪ್ರತಿ ಹಂತದಲ್ಲಿಯೂ ಸಹ ಅಳವಡಿಸಿಕೊಳ್ಳಲಾಗಿದೆ.

### 4. ಯೋಜನೆಯ ಪ್ರಸಕ್ತ ಆರ್ಥಿಕ ಸಾಲಿನ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳು :

ರೂ. ಕೋಟಿಗಳಲ್ಲಿ

| ಆರ್ಥಿಕ ಸಾಲು | ಆರ್ಥಿಕ ಪ್ರಗತಿ | | ಭೌತಿಕ ಪ್ರಗತಿ | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 1 | 2 | 3 | 4 | 5 |
| 2011–12 | 66.31 | 63.09 | 5382 | 3307 |

### 5. ಲೆಕ್ಕ ಪರಿಶೋಧನೆ ಹಾಗೂ ಪರಿವೀಕ್ಷಣೆಯಲ್ಲಿ ಗುರುತಿಸಲಾದ ಯೋಜನಾ ಅನುಷ್ಠಾನದ ಬಗೆಗಿನ ಅಂಶಗಳು:

ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ಬಗೆಗಿನ ಲೆಕ್ಕಪತ್ರಗಳನ್ನು ಗ್ರಾಮ ಪಂಚಾಯತಿ/ತಾಲ್ಲೂಕು ಪಂಚಯತಿಗಳಲ್ಲಿ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲದಿಂದ ಲೆಕ್ಕ ಪರಿಶೋಧನೆ ನಡೆಸಲಾಗುತ್ತಿದೆ. ಅಲ್ಲದೇ ಯೋಜನಾ ವತಿಯಿಂದ ನೇಮಿಸಲಾದ ಸನ್ನದು ಲೆಕ್ಕಿಗರು ಸಹ ಯೋಜನೆ ಬಗೆಗೆ ಆಂತರಿಕ ಮತ್ತು ಬಾಹ್ಯ ಲೆಕ್ಕ ಪರಿಶೋಧನೆಯನ್ನು ನಡೆಸಿದ್ದು ವರದಿಗಳನ್ನು ಯೋಜನಾ ಕಛೇರಿಗೆ ಸಲ್ಲಿಸಿರುತ್ತಾರೆ. ಲೆಕ್ಕ ಪರಿಶೋಧನಾ ವರದಿಗಳಲ್ಲಿ ತಿಳಿಸಿರುವಂತೆ ಗ್ರಾಮ ಸ್ವರಾಜ್ ಯೋಜನೆಯು ಇದುವರೆಗೆ ಉತ್ತಮ ಅಂಶಗಳೊಂದಿಗೆ ಸಮರ್ಪಕವಾಗಿ ಅನುಷ್ಠಾನಗೊಂಡಿದ್ದು ನಿಗದಿತ ಮಾರ್ಗದಲ್ಲಿ ಸಾಗುತ್ತಿರುವುದು ಮನದಟ್ಟಾಗಿದೆ.

### 6. ಪ್ರಸಕ್ತ ಸಾಲಿನಲ್ಲಿ ಮಾಡಲಾದ ಮೌಲ್ಯಮಾಪನ ಹಾಗೂ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸ್ವೀಕರಿಸಲಾದ ಅಧ್ಯಯನ ವರದಿಗಳು :

ಗ್ರಾಮ ಸ್ವರಾಜ್ ಯೋಜನೆಯ ಮೂಲ ಅಧ್ಯಯನ (ಬೇಸ್‌ಲೈನ್) ಮಾಡಲು ಎಸ್.ಆರ್.ಐ – ಐ.ಎಂ.ಆರ್.ಬಿ, ಚೆನ್ನೈ ಈ ಸಂಸ್ಥೆಯ ಸೇವೆಯನ್ನು ಪಡೆಯಲಾಗಿದೆ ಹಾಗೂ ಸದರಿ ಸಂಸ್ಥೆಯವರು ಅಧ್ಯಯನ ನಡೆಸಿದ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

ಇದಿಷ್ಟೇ ಅಲ್ಲದೇ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ವತಿಯಿಂದಲೂ ಸಹ ಗ್ರಾಮ ಸ್ವರಾಜ್ ಯೋಜನೆಗೆ ಸಂಬಂಧಿಸಿದಂತೆ ಸಂಶೋಧನೆ ಅಧ್ಯಯನವನ್ನು ನಡೆಸಲಾಗಿದೆ.

**7. ವರದಿಗಳು ಅಥವಾ ಪ್ರಕಟಣೆಗಳನ್ನು ಹೊರಡಿಸಿರುವ ಕುರಿತು :**

ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈ ಕೆಳಕಾಣಿಸಿದ ಪ್ರಕಟಣೆಗಳನ್ನು ಹೊರತರಲಾಗಿದೆ.

1. ಕರ್ನಾಟಕ ವಿಕಾಸ ಪೂರ್ಣ ಪ್ರಮಾಣದ ಸಂಚಿಕೆಯನ್ನು ಪ್ರಕಟಿಸಲಾಯಿತು.
2. ಯೋಜನೆಯ ಅನುಷ್ಠಾನದಲ್ಲಿ ಗುರುತಿಸಲಾದ ಉತ್ತಮ ಪ್ರಯೋಗಗಳು ಮತ್ತು ಯಶೋಗಾಥೆಗಳ ಬಗ್ಗೆ ಪುಸ್ತಕವನ್ನು ಹೊರತರಲಾಯಿತು.
3. ವಿಶ್ವಬ್ಯಾಂಕಿನ ತಂಡದ 8ನೇ ಭೇಟಿಯ ಸಂದರ್ಭದಲ್ಲಿ ಸಂಕ್ಷಿಪ್ತ ಟಿಪ್ಪಣಿಯನ್ನು ಹೊರತರಲಾಯಿತು.

**8. ಕಾರ್ಯ ನಿರ್ವಹಿಸಿದ ಅಧಿಕಾರಿ/ ಸಿಬ್ಬಂದಿಗಳ ವಿವರ :**

| | |
|---|---|
| ಎ – ಗುಂಪಿನ ಹುದ್ದೆಗಳು | 10 |
| ಬಿ – ಗುಂಪಿನ ಹುದ್ದೆಗಳು | – |
| ಸಿ – ಗುಂಪಿನ ಹುದ್ದೆಗಳು | 19 |
| ಡಿ – ಗುಂಪಿನ ಹುದ್ದೆಗಳು | 03 |
| ಮಹಿಳಾ ಅಧಿಕಾರಿಗಳು / ಸಿಬ್ಬಂದಿಗಳು | 02 / 01 |
| ಪುರುಷ ಅಧಿಕಾರಿಗಳು / ಸಿಬ್ಬಂದಿಗಳು | 04 / 03 |
| ಪ.ಜಾತಿ ಅಧಿಕಾರಿಗಳು / ಸಿಬ್ಬಂದಿಗಳು | – |
| ಪ.ಪಂಗಡ ಅಧಿಕಾರಿಗಳು / ಸಿಬ್ಬಂದಿಗಳು | – |

**9. ಖಾಲಿ ಹುದ್ದೆಗಳ ವಿವರ, ಪ್ರಸ್ತುತ ವರ್ಷದಲ್ಲಿ ಅಧಿಕಾರಿಗಳು / ಸಿಬ್ಬಂದಿಗಳ್ ನಿವೃತ್ತಿಯಿಂದ ತೆರವಾಗುವ ಹುದ್ದೆಗಳು :**

| ಹುದ್ದೆಗಳು | ಒಟ್ಟು ಹುದ್ದೆಗಳು | ಭರ್ತಿ | ಖಾಲಿ |
|---|---|---|---|
| ಎ – ಗುಂಪಿನ ಹುದ್ದೆಗಳು | 10 | 06 | 04 |
| ಬಿ – ಗುಂಪಿನ ಹುದ್ದೆಗಳು | – | – | – |
| ಸಿ – ಗುಂಪಿನ ಹುದ್ದೆಗಳು | 19 | 04 | 15 |
| ಡಿ – ಗುಂಪಿನ ಹುದ್ದೆಗಳು | 03 | – | 03 |

**10. ಬಾಹ್ಯ ಮೂಲದಿಂದ ಸೇವೆ ಪಡೆಯಲಾಗಿರುವ ಸಿಬ್ಬಂದಿಗಳ ವಿವರ:**

| ಸಿಬ್ಬಂದಿಗಳು | ಒಟ್ಟು ಹುದ್ದೆಗಳು | ಬಾಹ್ಯ ಮೂಲದಿಂದ ಸೇವೆ ಪಡೆಯಲಾಗಿರುವ ಹುದ್ದೆಗಳ ಸಂಖ್ಯೆ |
|---|---|---|
| ಕಾರ್ಯನಿರ್ವಾಹಕ ಸಹಾಯಕರು (ಗ್ರೂಪ್-ಸಿ) | 22 | 22 |
| ಗ್ರೂಪ್ – ಡಿ | 04 | 04 |
| ವಾಹನ ಚಾಲಕರು | – | – |

**11. ರಾಜ್ಯ, ಅಂತರ್‌ರಾಜ್ಯ ಮತ್ತು ವಿದೇಶಗಳಲ್ಲಿನ ತರಬೇತಿಗೆ ಹಾಜರಾದ ಅಧಿಕಾರಿಗಳ ವಿವರ :**

ಗ್ರಾಮ ಸ್ವರಾಜ್ ಯೋಜನೆಯ ಮುಖ್ಯಸ್ಥರು ಮತ್ತು ಹೆಚ್ಚುವರಿ ಮುಖ್ಯಸ್ಥರು (ಹಣಕಾಸು) ಇವರು ಥೈಲ್ಯಾಂಡಿನ ಏಷ್ಯಾ ತಾಂತ್ರಿಕ ತರಬೇತಿ ಸಂಸ್ಥೆಯಲ್ಲಿ ನಡೆದ ತರಬೇತಿಯಲ್ಲಿ ಬಾಗವಹಿಸಿರುತ್ತಾರೆ.

**12. ರಾಜ್ಯ / ರಾಷ್ಟ್ರ ಪ್ರಶಸ್ತಿಗಳು, ಪಿ.ಹೆಚ್.ಡಿ ಯಂತಹ ಉನ್ನತ ಪದವಿಗಳನ್ನು ಪಡೆದ ಅಧಿಕಾರಿಗಳು :**

- ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯ ಉಸ್ತುವಾರಿಯಲ್ಲಿ ಅಭಿವೃದ್ಧಿಪಡಿಸಲಾದ ಪಂಚತಂತ್ರ – ಗಣಕ ತಂತ್ರಾಂಶದ ಉತ್ತಮ ಪ್ರಯೋಗಕ್ಕೆ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಷ್ಟ್ರ ಮಟ್ಟದಲ್ಲಿ ನಗದು ಬಹುಮಾನದೊಂದಿಗೆ ಸುವರ್ಣ ಪದಕವನ್ನು ನೀಡಿ ಪುರಸ್ಕರಿಸಿದೆ.
- ಭಾರತ ಸರ್ಕಾರ, ಭಾರತೀಯ ಗುಣಮಟ್ಟದ ಪರಿಷತ್ತು, ರಾಜ್ಯದಲ್ಲಿ ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯಲ್ಲಿ ಬರುವ 104 ಗ್ರಾಮ ಪಂಚಾಯಿತಿಗಳಲ್ಲಿ ಮೌಲ್ಯಮಾಪನ ನಡೆಸಿ 10 ಗ್ರಾಮ ಪಂಚಾಯಿತಿಗಳನ್ನು ಅತ್ಯುತ್ತಮ ಕಾರ್ಯನಿರ್ವಹಣೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿರುತ್ತಾರೆ. ಸದರಿ 10 ಗ್ರಾಮ ಪಂಚಾಯಿತಿಗಳು ದೆಹಲಿಯಲ್ಲಿ ನಡೆದ 7ನೇ ರಾಷ್ಟ್ರೀಯ ಸಭೆಯಲ್ಲಿ ಗುಣಮಟ್ಟದ ಮಾನ್ಯತಾ ಪ್ರಮಾಣ ಪತ್ರವನ್ನು ಪಡೆದಿರುತ್ತವೆ.

**13. ಕಳೆದ ಸಾಲಿನಲ್ಲಿ ಮತ್ತು ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳು ಆಡಳಿತಾತ್ಮಕ ಪರಿವೀಕ್ಷಣೆಯನ್ನು ನಡೆಸಿದ ಬಗ್ಗೆ, ಅಂಶಗಳನ್ನು ಗುರುತಿಸಿದ ಮತ್ತು ನಿಯಮಬಾಹಿರ ಕ್ರಮಗಳಿಗಾಗಿ ಅಧಿಕಾರಿಗಳು / ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸಿರುವ ಕುರಿತು :**

ಕಳೆದ ಮತ್ತು ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಮತ್ತು ರಾಜ್ಯ ಮಟ್ಟದ ಹಲವು ಅಧಿಕಾರಿಗಳು ಯೋಜನಾ ವ್ಯಾಪ್ತಿಯಲ್ಲಿ ಸಂಚರಿಸಿ ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ಉಸ್ತುವಾರಿ ನಡೆಸಿದ್ದಾರೆ. ಹಾಗೂ ನಿಯಮಬಾಹಿರ ಕ್ರಮಗಳಿಗಾಗಿ ಅಧಿಕಾರಿಗಳು / ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸುವಂತಹ ಯಾವುದೇ ಪ್ರಕರಣಗಳು ಮೇಲೆ ಹೇಳಿದ ಸಾಲುಗಳಲ್ಲಿ ಎದುರಾಗಿರುವುದಿಲ್ಲ.

**14. ಕಳೆದ ಮೂರು ವರ್ಷಗಳಲ್ಲಿನ ಆಡಿಟ್ ಪ್ಯಾರಾಗಳು :**

| ಆರ್ಥಿಕ ಸಾಲು | ಒಟ್ಟು ಆಡಿಟ್ ಪ್ಯಾರಾಗಳು | ಅನುಪಾಲನಾ ವರದಿ ಸಲ್ಲಿಸಲಾದ ಪ್ಯಾರಾಗಳ ಸಂಖ್ಯೆ | ಬಾಕಿ |
|---|---|---|---|
| 2008-09 | 423 | 423 | – |
| 2009-10 | 1531 | 1531 | – |
| 2010-11 | 320 | 320 | – |

**15. ಮಾಹಿತಿ ಹಕ್ಕು ಅಧಿನಿಯಮ – 2005 :**

| **2010-11ನೇ ಸಾಲು** | | | | |
|---|---|---|---|---|
| ಸ್ವೀಕರಿಸಿದ ಅರ್ಜಿಗಳ ಒಟ್ಟು ಸಂಖ್ಯೆ | ಎಷ್ಟು ಅರ್ಜಿಗಳ ಮೇಲೆ ಉತ್ತರಿಸಲಾಗಿದೆ | ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ | ಎಷ್ಟು ಅರ್ಜಿಗಳಿಗೆ ಉತ್ತರಿಸುವುದು ಬಾಕಿ ಇದೆ | ಷರಾ |
| 12 | 11 | 00 | 01 | |

* *

# 4. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

## 4.1 ಗ್ರಾಮೀಣ ಕೂಲಿ ಉದ್ಯೋಗ ಕಾರ್ಯಕ್ರಮಗಳು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ಈ ಶಾಖೆಯಿಂದ ನಿರ್ವಹಿಸಲಾಯಿತು.

**ಯೋಜನೆಯ ದೂರದೃಷ್ಟಿ, ನಿರ್ದಿಷ್ಟ ಪಡಿಸಿದ ಗುರಿ ಮತ್ತು ಉದ್ದೇಶಗಳು:–** ಅಕುಶಲ ದೈಹಿಕ ಕೆಲಸ ಮಾಡಲು ಇಚ್ಚಿಸುವ ಗ್ರಾಮೀಣ ಪ್ರದೇಶಗಳಲ್ಲಿನ ವಯಸ್ಕರಿಗೆ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗ ಒದಗಿಸುವುದು. ಗ್ರಾಮಗಳಿಂದ ಪಟ್ಟಣಗಳಿಗೆ ವಲಸೆಯನ್ನು ತಡೆಗಟ್ಟುವುದು. ಕೂಲಿಯಾಧಾರಿತ ಉದ್ಯೋಗ ಸೃಜಿಸಿ ಗ್ರಾಮೀಣ ಜನರ ಜೀವನಕ್ಕೆ ಭದ್ರತೆ ಒದಗಿಸುವುದು ಮುಖ್ಯವಾಗಿ ಬರಗಾಲ ತಡೆಯಲು ವಿವಿಧ ಕಾಮಗಾರಿಗಳನ್ನು ಹಮ್ಮಿಕೊಳ್ಳುವುದು.

**ಮುಖ್ಯವಾಗಿ ಈ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳುವುದು**

1) ಜಲಸಂರಕ್ಷಣೆ ಮತ್ತು ನೀರಿನ ಕೊಯಿಲು
2) ಬರಗಾಲ ತಡೆಗಟ್ಟುವಿಕೆ (ಅರಣ್ಯೀಕರಣ ಮತ್ತು ಗಿಡ ನೆಡುವುದು ಸೇರಿದಂತೆ)
3) ಕಿರು ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಸೇರಿದಂತೆ ನೀರಾವರಿ ಕಾಲುವೆಗಳ ನಿರ್ಮಾಣ
4) ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಕುಟುಂಬಗಳ ಒಡೆತನದ ಭೂ ಸುಧಾರಣಾ ಫಲಾನುಭವಿಗಳ, ಇಂದಿರಾ ಆವಾಸ್ ಯೋಜನೆ ಫಲಾನುಭವಿಗಳ ಜಮೀನುಗಳಲ್ಲಿ ನೀರಾವರಿ ಸೌಲಭ್ಯ ಒದಗಿಸುವುದು
5) ಸಾಂಪ್ರದಾಯಿಕ ನೀರು ಸಂಚಯಗಳ ಜೀರ್ಣೋದ್ಧಾರ ಸೇರಿದಂತೆ ಕೆರೆಗಳ ಹೂಳು ತೆಗೆಯುವುದು
6) ಜಮೀನುಗಳ ಅಭಿವೃದ್ಧಿ
7) ನೀರು ನಿಂತ ಪ್ರದೇಶಗಳಲ್ಲಿ ಚರಂಡಿಯೂ ಸೇರಿದಂತೆ ಪ್ರವಾಹ ನಿಯಂತ್ರಣ ಮತ್ತು ಸಂರಕ್ಷಣಾ ಕಾಮಗಾರಿಗಳು
8) ಎಲ್ಲಾ ರೀತಿಯ ಹವಾಮಾನ ಪರಿಸ್ಥಿತಿಯಲ್ಲಿ ಉಪಯೋಗಿಸಬಹುದಾದ ಗ್ರಾಮೀಣ ಸಂಪರ್ಕಗಳ ನಿರ್ಮಾಣ
9) ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಆದೇಶದಂತೆ ತೆಗೆದುಕೊಳ್ಳುವ ಇತರೆ ಕಾಮಗಾರಿಗಳು

ಈ ಅಧಿನಿಯಮದಡಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಫೆಬ್ರವರಿ 2, 2006ರಿಂದ ಮತ್ತು 1.4.2008 ರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಂತಹಂತವಾಗಿ ಜಾರಿಗೆ ತರಲಾಗಿದೆ. ಗ್ರಾಮೀಣ ಕುಟುಂಬವೊಂದಕ್ಕೆ ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸಿ ಸಮುದಾಯ ಆಸ್ತಿಗಳನ್ನು ನಿರ್ಮಿಸುವುದರ ಮೂಲಕ ಅವರ ಜೀವನೋಪಾಯದ ಆಧಾರಗಳನ್ನು ಬಲಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಉದ್ಯೋಗ ಕೋರಿ ಅರ್ಜಿ ಸಲ್ಲಿಸುವ ಗ್ರಾಮೀಣ ಜನರಿಗೆ 15 ದಿನಗಳ ಒಳಗಾಗಿ ಸರ್ಕಾರ ಕೆಲಸ ನೀಡಬೇಕು. ತಪ್ಪಿದಲ್ಲಿ

ನಿರುದ್ಯೋಗ ಭತ್ಯೆ ನೀಡಬೇಕಾಗುತ್ತದೆ. ಈ ಯೋಜನೆಯು ಕೇವಲ ಯೋಜನೆಯಾಗಿರದೆ ಕಾಯಿದೆಯಾಗಿದ್ದು ಹಿಂದೆ ಇರುವ ಉದ್ಯೋಗದಾಯಕ ಯೋಜನೆಗಳಿಗಿಂತ ವಿಭಿನ್ನವಾಗಿರುತ್ತದೆ. ಅಂದರೆ ಈ ಯೋಜನೆಯು ಕಾನೂನುಬದ್ಧ ಕಾರ್ಯಕ್ರಮವಾಗಿರುತ್ತದೆ.

ಯೋಜನೆಯು ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿದ್ದು, ವಾರ್ಷಿಕ ಹಂಚಿಕೆಯ ಆಧಾರಿತ ಕಾರ್ಯಕ್ರಮವಾಗಿರುವುದಿಲ್ಲ. ಈ ಯೋಜನೆಯ ಮೂಲ ಉದ್ದೇಶ ಅಕುಶಲ ಕಾರ್ಮಿಕರಿಗೆ ಉದ್ಯೋಗ ನೀಡುವುದು, ಉತ್ಪಾದಯುತ ಆಸ್ತಿಗಳ ಸೃಜನೆ, ಪರಿಸರ ರಕ್ಷಣೆ ಮತ್ತು ಗ್ರಾಮೀಣ ಮಹಿಳೆಯರ ಜೀವನಶೈಲಿಯನ್ನು ಉತ್ತಮಪಡಿಸುವುದು ಹಾಗೂ ಗ್ರಾಮಾಂತರದಿಂದ ಪಟ್ಟಣ ಪ್ರದೇಶಗಳಿಗೆ ವಲಸೆಯನ್ನು ತಡೆಗಟ್ಟುವುದು. ಅಕುಶಲ ಕೂಲಿಯ ವೆಚ್ಚವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರವು ಭರಿಸುತ್ತದೆ ಮತ್ತು ಸಾಮಗ್ರಿ ವೆಚ್ಚದಲ್ಲಿ ಕೇಂದ್ರ ಸರ್ಕಾರವು ಶೇ.75 ರಷ್ಟು ಮತ್ತು ರಾಜ್ಯ ಸರ್ಕಾರವು ಶೇ. 25ರಷ್ಟು ಭರಿಸುತ್ತದೆ. ಒಟ್ಟಾರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯೋಜನೆಯ ವೆಚ್ಚವನ್ನು ಬಹುತೇಕ 90:10 ರ ಅನುಪಾತದಲ್ಲಿ ಭರಿಸುತ್ತವೆ.

ದಿನಾಂಕ:31.07.2008 ರವರೆಗೆ ರೂ.74/–, ದಿನಾಂಕ:31.12.2009ರವರೆಗೆ ರೂ.82/–, ದಿನಾಂಕ: 31.12.2010ರವರೆಗೆ ರೂ.100/–, ದಿನಾಂಕ 1.1.2011 ರಿಂದ ಪ್ರತಿ ದಿನ ಕಾರ್ಯ ನಿರ್ವಹಿಸಿದ ವ್ಯಕ್ತಿಗೆ ರೂ.125/–, ದಿ:1.4.2012 ರಿಂದ ರೂ.155/– ರಂತೆ ಕೂಲಿಯನ್ನು ಪಾವತಿಸಲಾಗುತ್ತಿದೆ.

**ಶಾಖೆಯ ರಚನೆ:**



## ಅಧ್ಯಾಯ-2

### ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆರ್ಥಿಕ ಪ್ರಗತಿ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಆರ್ಥಿಕ ವರ್ಷ | ಆರಂಭ ಶಿಲ್ಕು ಏಪ್ರಿಲ್ 1ರಂತೆ | ಒಟ್ಟು ಬಿಡುಗಡೆ | ಒಟ್ಟು ಲಭ್ಯವಿರುವ ಅನುದಾನ | ವೆಚ್ಚ | ಷರಾ |
|---|---|---|---|---|---|---|
| 1 | 2006-07 (5 ಜಿಲ್ಲೆಗಳು) | 7181.78 | 26230.91 | 33412.69 | 22561.76 | |
| 2 | 2007-08 (11 ಜಿಲ್ಲೆಗಳು) | 11777.97 | 28970.57 | 40748.55 | 19831.72 | |
| 3 | 2008-09 | 23741.22 | 45378.44 | 69119.56 | 38075.65 | |
| 4 | 2009-10 | 35337.01 | 266079.71 | 301416.72 | 221604.81 | |
| 5 | 2010-11 | 81773.30 | 208507.75 | 290281.05 | 186047.28 | |
| 6 | 2011-12 (ಎಂ.ಐ.ಎಸ್. ಪ್ರಕಾರ) | 109393.98 | 82162.49 | 191556.47 | 219711.90 | ಹೆಚ್ಚುವರಿ ವೆಚ್ಚವನ್ನು 2012-13 ರಲ್ಲಿ ಪಾವತಿಸಲಾಗುತ್ತದೆ. |

### ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಭೌತಿಕ ಪ್ರಗತಿ

| ಕ್ರ. ಸಂ. | ಜಿಲ್ಲೆಗಳು | ನೋಂದಣಿಯಾದ ಮತ್ತು ವಿತರಿಸಿದ ಉದ್ಯೋಗ ಕಾರ್ಡಗಳ ಸಂಖ್ಯೆ | ಉದ್ಯೋಗ ಕೇಳಿದ ಕುಟುಂಬಗಳ ಸಂಖ್ಯೆ | ಉದ್ಯೋಗ ನೀಡಿದ ಕುಟುಂಬಗಳ ಸಂಖ್ಯೆ | ಉತ್ಪತ್ತಿಯಾದ ಕೆಲಸದ ಲಕ್ಷ ಮಾನವ ದಿನಗಳು | 100 ದಿನಗಳ ಉದ್ಯೋಗವನ್ನು ಪೂರೈಸಿದ ಕುಟುಂಬಗಳ ಸಂಖ್ಯೆ |
|---|---|---|---|---|---|---|
| 1 | 2006-07 (5 ಜಿಲ್ಲೆಗಳು) | 795600 | 548532 | 545185 | 222.047 | 69789 |
| 2 | 2007-08 (11 ಜಿಲ್ಲೆಗಳು) | 1523091 | 554002 | 549994 | 197.77 | 23081 |
| 3 | 2008-09 | 3420945 | 906503 | 896212 | 287.63 | 27009 |
| 4 | 2009-10 | 6142948 | 3416807 | 3310995 | 1793023 | 405397 |
| 5 | 2010-11 | 5301760 | 2416064 | 2366290 | 1099.82 | 132179 |
| 6 | 2011-12 | 5571697 | 1664074 | 1652095 | 699.20 | 45111 |

ಈ ಸಾಲಿಗೆ ಕೇಂದ್ರ ಸರ್ಕಾರವು ಕಾರ್ಮಿಕ ಮುಂಗಡವನ್ನು ರೂ.241290.10 ಲಕ್ಷಗಳಿಗೆ ಅನುಮೋದನೆ ನೀಡಿದ್ದು ವಿವಿಧ ಹಂತಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಿರುತ್ತವೆ.

1. ಕೇಂದ್ರ ಸರ್ಕಾರ ₹ 66256.92 ಲಕ್ಷಗಳು
2. ರಾಜ್ಯ ಸರ್ಕಾರ ₹ 15905.57 ಲಕ್ಷಗಳು
3. ಆರಂಭಿಕ ಶಿಲ್ಕು ₹ 109393.98 ಲಕ್ಷಗಳು

**ಒಟ್ಟು: ₹ 191556.47 ಲಕ್ಷಗಳು**

**ಜಿಲ್ಲಾವಾರು ಆರ್ಥಿಕ ಪ್ರಗತಿ** (₹ ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆಗಳು | ಆರಂಭ ಶಿಲ್ಕು ದಿನಾಂಕ: 1-4-2011 | ಒಟ್ಟು ಬಿಡುಗಡೆ | ಒಟ್ಟು ಲಭ್ಯವಿರುವ ಮೊತ್ತ | ವೆಚ್ಚ |
|---|---|---|---|---|---|
| 1 | ಬೀದರ್ | 1987 | 4089 | 6076.01 | 6891.49 |
| 2 | ಚಿತ್ರದುರ್ಗ | 1197 | 11632 | 12828.95 | 18457.8 |
| 3 | ದಾವಣಗೆರೆ | 2097 | 9747 | 11844 | 18680.2 |
| 4 | ಗುಲ್ಬರ್ಗಾ | 4634.6 | 6145 | 10779.6 | 11236.4 |
| 5 | ರಾಯಚೂರು | 1324.5 | 8908 | 10232.48 | 14174 |
| 6 | ಬೆಳಗಾಂ | 3772 | 17028 | 20799.95 | 22476.5 |
| 7 | ಬಳ್ಳಾರಿ | 1716.6 | 2140 | 3856.62 | 3962.73 |
| 8 | ಚಿಕ್ಕಮಗಳೂರು | 1505.1 | 4055 | 5560.12 | 5646.04 |
| 9 | ಹಾಸನ | 1288.5 | 4328 | 5616.47 | 9299.84 |
| 10 | ಕೊಡಗು | 424.71 | 1860 | 2284.71 | 2482.76 |
| 11 | ಶಿವಮೊಗ್ಗ | 1141.84 | 4045 | 5186.84 | 5571.33 |
| 12 | ಬಾಗಲಕೋಟೆ | 1152.1 | 5076 | 6228.1 | 7881.12 |
| 13 | ಬೆಂಗಳೂರು(ನ)) | 1268.64 | 42 | 1310.64 | 207.13 |
| 14 | ಬೆಂಗಳೂರು(ಗ್ರಾ) | 709.45 | 1736 | 2445.45 | 2053.75 |
| 15 | ಬಿಜಾಪುರ | 3109.02 | 5710 | 8819.02 | 13448.12 |
| 16 | ಚಾಮರಾಜನಗರ | 1424.85 | 2852 | 4276.85 | 4492.5 |
| 17 | ಚಿಕ್ಕಬಳ್ಳಾಪುರ | 1444.95 | 1866 | 3310.95 | 2978.47 |
| 18 | ದಕ್ಷಿಣ ಕನ್ನಡ | 1532.41 | 765 | 2297.41 | 2001.61 |
| 19 | ಧಾರವಾಡ | 708.93 | 4475 | 5183.93 | 5863.51 |
| 20 | ಗದಗ | 547.53 | 3641 | 4188.53 | 3766.01 |
| 21 | ಹಾವೇರಿ | 1764.57 | 4522 | 6286.57 | 8482.78 |
| 22 | ಕೋಲಾರ | 1594.86 | 4014 | 5608.864 | 6997.72 |
| 23 | ಕೊಪ್ಪಳ | 1117.61 | 6332 | 7449.61 | 8526.54 |
| 24 | ಮಂಡ್ಯ | 1848.15 | 3900 | 5748.15 | 5338.89 |
| 25 | ಮೈಸೂರು | 2299.24 | 3007 | 5306.24 | 3920.75 |
| 26 | ರಾಮನಗರ | 845.64 | 4139 | 4984.64 | 6880.1 |
| 27 | ತುಮಕೂರು | 3532.53 | 7494 | 11026.53 | 5571.18 |
| 28 | ಉಡುಪಿ | 1621.37 | 125 | 1746.37 | 260.47 |
| 29 | ಉತ್ತರ ಕನ್ನಡ | 1277.46 | 2860 | 4137.46 | 4507.77 |
| **30** | ಯಾದಗಿರಿ | 2203.22 | 4511 | 6714.22 | 7654.54 |
| | ಎಎನ್ಎಸ್ಐಆರ್ಡಿ, ಮೈಸೂರು | 67.54 | 459 | 526.54 | 0 |
| | Bangalore® e-FMS | 0 | 20 | 20 | 0 |
| | ಆಡಳಿತಾತ್ಮಕ ವೆಚ್ಚ **(Tech.support Cell)** | 20.43 | 462.47 | 482.9 | 0 |
| | **ಒಟ್ಟು:** | **51179.30** | **141985.50** | **193164.72** | **219711.90*** |

* ಹೆಚ್ಚುವರಿ ವೆಚ್ಚವನ್ನು ಪೈಪ್ ಲೈನ್ ವೆಚ್ಚವೆಂದು ಪರಿಗಣಿಸಿ 2012-13 ನೇ ಸಾಲಿನಲ್ಲಿ ಹೊಂದಣಿಕೆಯಾಗುತ್ತದೆ.

**ಭೌತಿಕ ಪ್ರಗತಿ:**

| ಕ್ರ. ಸಂ. | ಜಿಲ್ಲೆಗಳು | ನೊಂದಣಿಯಾದ ಮತ್ತು ವಿತರಿಸಿದ ಉದ್ಯೋಗ ಕಾರ್ಡಗಳ ಸಂಖ್ಯೆ | ಉದ್ಯೋಗ ಕೇಳಿದ ಕುಟುಂಬಗಳ ಸಂಖ್ಯೆ | ಉದ್ಯೋಗ ನೀಡಿದ ಸಂಖ್ಯೆ | ಉತ್ಪತ್ತಿಯಾದ ಲಕ್ಷ ಮಾನವ ದಿನಗಳು | 100 ದಿನಗಳ ಉದ್ಯೋಗವನ್ನು ಪೂರೈಸಿದ ಕುಟುಂಬಗಳ ಸಂಖ್ಯೆ |
|---|---|---|---|---|---|---|
| 1 | ಬೀದರ್ | 206121 | 57247 | 57135 | 17.87 | 621 |
| 2 | ಚಿತ್ರದುರ್ಗ | 238476 | 94854 | 94384 | 44.79 | 1029 |
| 3 | ದಾವಣಗೆರೆ | 238814 | 126719 | 126412 | 70.90 | 8033 |
| 4 | ಗುಲ್ಬರ್ಗಾ | 230929 | 81046 | 80743 | 40.16 | 3105 |
| 5 | ರಾಯಚೂರು | 230250 | 104593 | 100304 | 36.38 | 1158 |
| 6 | ಬೆಳಗಾಂ | 540783 | 157327 | 157062 | 72.11 | 1541 |
| 7 | ಬಳ್ಳಾರಿ | 234537 | 28411 | 28261 | 12.93 | 972 |
| 8 | ಚಿಕ್ಕಮಗಳೂರು | 132388 | 50857 | 50705 | 24.99 | 1893 |
| 9 | ಹಾಸನ | 217036 | 79789 | 79506 | 32.54 | 1360 |
| 10 | ಕೊಡಗು | 58518 | 21326 | 21087 | 10.75 | 726 |
| 11 | ಶಿವಮೊಗ್ಗ | 185055 | 82564 | 81781 | 18.55 | 446 |
| 12 | ಬಾಗಲಕೋಟೆ | 199647 | 72812 | 72540 | 34.20 | 1486 |
| 13 | ಬೆಂಗಳೂರು(ನ) | 61487 | 1946 | 1937 | 0.59 | 12 |
| 14 | ಬೆಂಗಳೂರು(ಗ್ರಾ) | 77396 | 15968 | 15881 | 8.20 | 622 |
| 15 | ಬಿಜಾಪುರ | 355225 | 85878 | 85560 | 37.71 | 1429 |
| 16 | ಚಾಮರಾಜನಗರ | 103320 | 36335 | 36233 | 16.70 | 2168 |
| 17 | ಚಿಕ್ಕಬಳ್ಳಾಪುರ | 135984 | 32795 | 32717 | 9.47 | 255 |
| 18 | ದಕ್ಷಿಣ ಕನ್ನಡ | 94926 | 19120 | 19093 | 7.74 | 906 |
| 19 | ಧಾರವಾಡ | 118930 | 54046 | 53753 | 21.34 | 1757 |
| 20 | ಗದಗ | 124576 | 35239 | 35086 | 11.63 | 718 |
| 21 | ಹಾವೇರಿ | 174958 | 56175 | 55808 | 24.96 | 1593 |
| 22 | ಕೋಲಾರ | 197444 | 59606 | 59528 | 20.95 | 925 |
| 23 | ಕೊಪ್ಪಳ | 231054 | 46974 | 45636 | 20.59 | 5882 |
| 24 | ಮಂಡ್ಯ | 203661 | 50163 | 49890 | 16.11 | 1155 |
| 25 | ಮೈಸೂರು | 164332 | 23380 | 23224 | 9.08 | 888 |
| 26 | ರಾಮನಗರ | 134002 | 36046 | 35688 | 16.40 | 670 |
| 27 | ತುಮಕೂರು | 268755 | 40814 | 40457 | 16.45 | 1407 |
| 28 | ಉಡುಪಿ | 34986 | 4730 | 4714 | 1.49 | 134 |
| 29 | ಉತ್ತರ ಕನ್ನಡ | 143568 | 59908 | 59696 | 23.80 | 1342 |
| 30 | ಯಾದಗಿರಿ | 234539 | 47406 | 47274 | 19.80 | 878 |
| | **ಒಟ್ಟು:** | **5571697** | **1664074** | **1652095** | **699.20** | **45111** |

## ಅಧ್ಯಾಯ-3

2011-12ನೇ ಸಾಲಿನಲ್ಲಿ ರಾಜ್ಯದಲ್ಲಿ ಯೋಜನೆಯ ಉತ್ತಮ ಸಾಧನೆಗಾಗಿ ಧಾರವಾಡ ಜಿಲ್ಲೆಯ ಯಾದವಾಡ ಗ್ರಾಮ ಪಂಚಾಯತಿಗೆ ಮತ್ತು ಉತ್ತಮ ಬೆಂಬಲ ನೀಡಿದ ಬೈಫ್ ಸಂಸ್ಥೆಗೆ ಪ್ರಶಸ್ತಿಯನ್ನು ನವದೆಹಲಿಯಲ್ಲಿ ದಿನಾಂಕ:02-02-2012ರಂದು ಮಾನ್ಯ ಪ್ರಧಾನ ಮಂತ್ರಿಗಳಿಂದ ಸ್ವೀಕರಿಸಲಾಯಿತು. ಸದರಿಯಂತೆ ರಾಜ್ಯ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಂದ ದಿನಾಂಕ:07-02-2012 ರಂದು ಬೆಂಗಳೂರಿನಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಲಾಯಿತು.

## ಅಧ್ಯಾಯ-4

## ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೈಗೊಂಡಿರುವ್ ಕ್ರಮಗಳು:

### ಆಡಳಿತಾತ್ಮಕ ಅನುಮೋದನೆ

- ರೂ.10.00 ಲಕ್ಷದವರೆಗೆ ಗ್ರಾಮ ಪಂಚಾಯತಿಗಳಿಗೆ ಮತ್ತು ರೂ.10.00 ಲಕ್ಷಕ್ಕೂ ಮೇಲ್ಪಟ್ಟ ಪೂರ್ಣ ಅಧಿಕಾರವನ್ನು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ನೀಡಿದೆ.

### ತಾಂತ್ರಿಕ ಅನುಮೋದನೆ

- ಗ್ರಾಮ ಪಂಚಾಯತ್/ಹೋಬಳಿ ಮಟ್ಟದ ಆಯಾ ಇಲಾಖಾ ಅಧಿಕಾರಿಗಳಿಗೆ ರೂ.1.00 ಲಕ್ಷದವರೆಗೆ ಮತ್ತು ರೂ.10.00 ಲಕ್ಷಕ್ಕೂ ಮೇಲ್ಪಟ್ಟ ಪೂರ್ಣ ಅಧಿಕಾರವನ್ನು ಆಯಾ ಇಲಾಖೆಯ ತಾಲ್ಲೂಕು ಮಟ್ಟದ್ ಅಧಿಕಾರಿಯವರಿಗೆ ನೀಡಿದೆ.
- ನೊಂದಾಯಿತ ಕೆಲಸಗಾರರು ತರುವ ಸಾಮಗ್ರಿಗಳಿಗಾಗಿ ಪ್ರತಿ ಕೆಲಸಗಾರರಿಗೆ ಪ್ರತಿ ದಿನ ಒಂದಕ್ಕೆ ಸಾಮಗ್ರಿ ಬಾಬ್ತು ರೂ.3.00 ಗಳ ವೆಚ್ಚವನ್ನು ನೀಡಲು ಅವಕಾಶ ಕಲ್ಪಿಸಿದೆ.
- ಯೋಜನೆಯಡಿ ಅನುಷ್ಠಾನಗೊಳಿಸುವ ಕಾಮಗಾರಿಗಳ ಆಂದಾಜು ಪಟ್ಟಿ ತಯಾರಿಕೆಯಲ್ಲಿನ ದರ ಪಟ್ಟಿಯನ್ನು ಕೆಲಸಗಾರರು ಎಂಟು ಗಂಟೆಗಳ ಕಾಲ ಕೆಲಸ ನಿರ್ವಹಿಸಿದಲ್ಲಿ ಕನಿಷ್ಠ ನಿಗದಿಪಡಿಸಿದ ಕೂಲಿ ಮೊತ್ತವನ್ನು ಪಡೆಯುವಂತೆ ಪ್ರಯೋಗಿಕವಾಗಿ ಕಾಲ ಮತ್ತು ಚಲನೆ ಅಧ್ಯಯನ ಮಾಡಿ ದ್ರ ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.
- ಎಲ್ಲಾ ಇಲಾಖೆಗಳೂ ಈ ಯೋಜನೆಯೊಂದಿಗೆ ತಮ್ಮ ತಮ್ಮ ಇಲಾಖೆಯ ಕಾರ್ಯಕ್ರಮಗಳನ್ನು ಒಗ್ಗೂಡಿಸಿಕೊಂಡು ಅನುಷ್ಠಾನಗೊಳಿಸಲು ಸರಳೀಕೃತ ಮಾರ್ಗಸೂಚಿಗಳನ್ನು ಹೊರಡಿಸಿದೆ.
- ರಾಜ್ಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಸಣ್ಣ ರೈತರು/ಅತೀ ಸಣ್ಣ ರೈತರುಗಳ ಭೂ-ಅಭಿವೃದ್ಧಿ ಕಾಮಗಾರಿಗಳನ್ನು ಮತ್ತು ರೈತಾಪಿ ಜನರ ಹೊಲ/ಗದ್ದೆಗಳಿಗಾಗಿ (2 ಹೆಕ್ಟೇರುಗಳ ಜಮೀನಿರುವ) ಹೋಗಬೇಕಾಗಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಿದೆ.
- ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲವನ್ನು ಗ್ರಾಮ ಪಂಚಾಯತಿ/ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಮಟ್ಟದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.
- ಯೋಜನೆಯಡಿ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಉದ್ಯೋಗ ಮಿತ್ರರನ್ನು ನೇಮಕಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.
- ವಿಕಲಚೇತನ ಮತ್ತು 60 ವರ್ಷ ಮೀರಿದ ಕಾರ್ಮಿಕರಿಗೆ ಶೇಕಡಾ 25ರಷ್ಟು ಕೆಲಸದಲ್ಲಿ ರಿಯಾಯಿತಿ ಕಲ್ಪಿಸಲಾಗಿದೆ.
- ವಿಕಲಚೇತನರಿಗೆ ಪ್ರಯಾಣಭತ್ಯೆ ಸಲುವಾಗಿ ಶೇ.10ರಷ್ಟು ಹೆಚ್ಚಿನ ಕೂಲಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

- ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ತೆರೆದ ಮತ್ತು ಕೊಳವೆ ಬಾವಿಗಳನ್ನು ತೆಗೆಸಲು ಅವಕಾಶ ಕಲ್ಪಿಸಲಾಗಿದೆ.
- ಯೋಜನೆಯ ಅನುಷ್ಠಾನದಲ್ಲಿ ಸಾಮಾಜಿಕ ಲೆಕ್ಕತಪಾಸಣೆ ನಡೆಸಲು ಪ್ರತಿ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಸಾಮಾಜಿಕ ಲೆಕ್ಕ ತಪಾಸಣಾ ಸಮನ್ವಯಾಧಿಕಾರಿಗಳನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು ಇವರ ಮೂಲಕ ನೇಮಕ ಮಾಡಿ ಕ್ರಮ ವಹಿಸಲಾಗಿದೆ.
- ಯಂತ್ರೋಪಕರಣಗಳ ಉಪಯೋಗದ ಅವಶ್ಯಕತೆ ಅನಿವಾರ್ಯವಾದಲ್ಲಿ ಸಂಬಂಧಿಸಿದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಅನುಮತಿ ಪಡೆದು ಉಪಯೋಗಿಸಲು ಆದೇಶ ನೀಡಲಾಗಿದೆ.
- MIS (Management Information System) ನಿಂದ ಸೃಜಿಸಲಾದ NMR ಗಳನ್ನು ಮಾತ್ರ ಕಾಮಗಾರಿ ಸ್ಥಳಗಳಲ್ಲಿ ಬಳಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವೆಬ್‌ಸೈಟ್ ನಲ್ಲಿ ಅಳವಡಿಸಲಾಗಿದೆ.
- ಬರ ಪೀಡಿತ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಹೆಚ್ಚಾಗಿ ಹಮ್ಮಿಕೊಳ್ಳುವಂತೆ ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಯವರಿಗೆ ನಿರ್ದೇಶನ ನೀಡಲಾಗಿದೆ.
- ಗ್ರಾಮೀಣ ಜನರ ವಲಸೆಯನ್ನು ತಡೆಗಟ್ಟುವ ಸಲುವಾಗಿ ಬೇಡಿಕೆ ಮೇರೆಗೆ ಶೀಘ್ರವಾಗಿ ಕಾಮಗಾರಿಗಳನ್ನು ಹಮ್ಮಿಕೊಳ್ಳುವ ಮೂಲಕ ಉದ್ಯೋಗಗಳನ್ನು ಕಲ್ಪಿಸಲು ಸೂಚಿಸಲಾಗಿದೆ.
- ದಿನಾಂಕ:1-4-2012 ರಿಂದ ಅನ್ವಯುವಾಗುವಂತೆ ಕಾರ್ಮಿಕರ ಕೂಲಿಯನ್ನು ‘ 125/- ರಿಂದ ‘ 155/- ಗಳಿಗೆ ಹೆಚ್ಚಿಸಲಾಗಿದೆ.
- ಉದ್ಯೋಗ ಖಾತರಿ ಯೋಜನೆಯ (ಕುಂದುಕೊರತೆಗಳ ನಿವಾರಣೆಗೆ) ನಿಯಮ 2009ನ್ನು ಸಿದ್ಧಪಡಿಸಿ ಕರ್ನಾಟಕ ರಾಜ್ಯದ ಗೆಜೆಟ್ ನಲ್ಲಿ ಪ್ರಚುರಪಡಿಸಲಾಗಿದೆ.
- ಪ್ರಸ್ತುತ ರಾಜ್ಯದ 23 ಜಿಲ್ಲೆಗಳಲ್ಲಿ “ ಒಂಬಡ್ಸ್‌ಮನ್ ” ನೇಮಕಾತಿ ಮಾಡಲಾಗಿದ್ದು ಉಳಿದ ಜಿಲ್ಲೆಗಳಿಗೆ ನೇಮಕಾತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.
- ನಿಧಿ ವರ್ಗಾವಣೆಯನ್ನು ವಿದ್ಯುನ್ಮಾನದ ಮೂಲಕ (Electronic Fund Management System) ವರ್ಗಾಯಿಸಲು 1)ಬೆಂಗಳೂರು(ಗ್ರಾ) 2)ಧಾರವಾಡ (3)ಬಾಗಲಕೋಟೆ (4) ಬಳ್ಳಾರಿ (5) ಮೈಸೂರು (6)ಹಾಸನ ಮತ್ತು (7)ತುಮಕೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ಈ ಕ್ರಮದಿಂದಾಗಿ ಕೂಲಿಕಾರ್ಮಿಕರ ವೇತನವನ್ನು ಅವರ ಖಾತೆಗೆ ನೇರವಾಗಿ ವರ್ಗಾಯಿಸಲು ಅನುಕೂಲವಾಗಿರುತ್ತದೆ.

2011-12ನೇ ಸಾಲಿನಲ್ಲಿ 63950 ಕಾಮಗಾರಿಗಳನ್ನು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ತಪಾಸಣೆ ಮಾಡಿರುತ್ತಾರೆ. ಈ ಪೈಕಿ ಯೋಜನೆಯ ನಿಯಮಾವಳಿಯನ್ನು ಪಾಲಿಸದೇ

ಇರುವ ಅಧಿಕಾರಿಗಳು/ ಜನಪ್ರತಿನಿಧಿಗಳು ವಿರುದ್ಧ ಶಿಸ್ತು ಕ್ರಮ ತೆಗೆದುಕೊಂಡಿರುವ ವಿವರಗಳು ಈ ಕೆಳಕಂಡಂತಿರುತ್ತವೆ.

ಅ) ಇಲಾಖಾ ವಿಚಾರಣೆ – 26

ಆ) ಇಲಾಖಾ ವಿಚಾರಣೆ ಮತ್ತು ವಜಾಗೊಳಿಸಿರುವುದು – 32

ಇ) ಅಮಾನತ್ತಿನಲ್ಲಿಟ್ಟಿರುವುದು – 138

ಈ) ಅಮಾನತ್ತಿನಲ್ಲಿಟ್ಟು ಇಲಾಖಾ ವಿಚಾರಣೆ – 2

ಉ) ಅಮಾನತ್ತಿನಲ್ಲಿಟ್ಟು ಕ್ರಿಮಿನಲ್ ಮೊಕದ್ದಮೆ ಹೂಡಿರುವುದು – 71

ಊ) ಅಮಾನತ್ತಿನಲ್ಲಿಟ್ಟು ಕ್ರಿಮಿನಲ್ ಮೊಕದ್ದಮೆ ಹೂಡಿರುವುದು ಹಾಗೂ ಇಲಾಖಾ ವಿಚಾರಣೆ – 2

ಋ) ಅಮಾನತ್ತು ತೆರವುಗೊಳಿಸಿರುವುದು – 50

ಎ) ಅಮಾನತ್ತು ತೆರವುಗೊಳಿಸಿ ಇಲಾಖಾ ವಿಚಾರಣೆ ಹೂಡಿರುವುದು – 137

ಏ) ಅಮಾನತ್ತು ತೆರವುಗೊಳಿಸಿ ಕ್ರಿಮಿನಲ್ ಮೊಕದ್ದಮೆ ಹೂಡಿರುವುದು – 16

ಐ) ಅಮಾನತ್ತು ತೆರವುಗೊಳಿಸಿ ಕ್ರಿಮಿನಲ್ ಮೊಕದ್ದಮೆ & ಇಲಾಖಾ ವಿಚಾರಣೆ – 5

ಒ) ಕ್ರಿಮಿನಲ್ ಮೊಕದ್ದಮೆ ಹೂಡಿರುವುದು – 91

ಓ) ಸೇವೆಯಿಂದ ವಜಾಗೊಳಿಸಿರುವುದು – 3

ಔ) ದಂಡ ವಿಧಿಸಿ ಇಲಾಖಾ ವಿಚಾರಣೆ ಮುಕ್ತಾಯಗೊಳಿಸಿರುವುದು – 32

ಅಂ) ಆಪಾದನೆ ಮುಕ್ತಗೊಳಿಸಿ ಇಲಾಖಾ ವಿಚಾರಣೆ ಮುಕ್ತಗೊಳಿಸುವುದು – 12

ಅ:) ವಿಚಾರಣೆ ಹಂತ – 19

**ಒಟ್ಟು ಪ್ರಕರಣಗಳು:**

**– 636**

**ಮೌಲ್ಯಮಾಪನ ಅಧ್ಯಯನ ಮತ್ತು ವರದಿ ಸಲ್ಲಿಕೆ:**

ಯೋಜನೆಯ ಅನುಷ್ಠಾನದಿಂದ ಗ್ರಾಮೀಣ ಮಹಿಳೆಯರಿಗೆ ಆಗಿರುವ ಅನುಕೂಲಗಳ ಬಗ್ಗೆ ಮತ್ತು ಭೂ ಸಂರಕ್ಷಣೆ ಆಗಿರುವ ಪರಿಣಾಮದ ಬಗ್ಗೆ ಮೌಲ್ಯಮಾಪನ ಅಧ್ಯಯನ ಮಾಡಲು M/s. Pragna, Hyderabad & M/s.HKCL, Gulbarga & Hyderabad ಸಂಸ್ಥೆಗಳಿಗೆ ಕ್ರಮವಾಗಿ ವಹಿಸಲಾಗಿದೆ.

**ಅಧ್ಯಾಯ–5**

**ಕಾರ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರ:**

| ಕ್ರ. ಸಂ. | ವರ್ಗ | ಒಟ್ಟು ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾ. | ಪ.ಪಂ. |
|---|---|---|---|---|---|---|
| 1 | ಎ | 5 | 5 | 0 | 0 | 0 |
| 2 | ಬಿ | 8 | 4 | 4 | 0 | 0 |
| 3 | ಸಿ | 7 | 4 | 3 | 0 | 0 |
| 4 | ಡಿ | 0 | 0 | 0 | 0 | 0 |
| | **ಒಟ್ಟು:** | **20** | **13** | **7** | **0** | **0** |

**ಖಾಲಿ ಇರುವ, ನಿವೃತ್ತಿಯಾದ/ನಿವೃತ್ತಿಯಾಗಲಿರುವ ವಿವರ:**

| ಕ್ರ.ಸಂ. | ವರ್ಗ | ಖಾಲಿ ಹುದ್ದೆಗಳು | ನಿವೃತ್ತಿಯಾದವರು | ನಿವೃತ್ತಿಯಾಗಲಿರುವವರು |
|---|---|---|---|---|
| 1 | ಎ | 0 | 0 | 0 |
| 2 | ಬಿ | 0 | 0 | 1 |
| 3 | ಸಿ | 6 | 0 | 0 |
| 4 | ಡಿ | 3 | 0 | 0 |
| ಒಟ್ಟು: | | 9 | 0 | 1 |

**2010–11ನೇ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರ:**

| ಕ್ರಮ ಸಂಖ್ಯೆ | ಹುದ್ದೆ | ಸಂಖ್ಯೆ |
|---|---|---|
| 1 | ಡಾಟಾ ಎಂಟ್ರಿ ಆಪರೇಟರ್ಸ್ | 11 |
| 2 | ಗ್ರೂಪ್ ಡಿ | 9 |
| 3 | ವಾಹನ ಚಾಲಕರು | 2 |
| 4 | ಪ್ರೋಗ್ರಾಂ ಮ್ಯಾನೇಜರ್/ ಸಲಹೆಗಾರರು/ಯೋಜನಾ ನಿರ್ವಾಹಕರು | 2/2/4 |
| ಒಟ್ಟು:– | | 30 |

**ತರಬೇತಿ ಪಡೆದ ಅಧಿಕಾರಿ/ಸಿಬ್ಬಂದಿಗಳ ವಿವರ:**

| ಕ್ರ.ಸಂ. | ವರ್ಗ | ರಾಜ್ಯದ ತರಬೇತಿ ಕಾರ್ಯಕ್ರಮಗಳು | ಹೊರ ರಾಜ್ಯದ ತರಬೇತಿ ಕಾರ್ಯಕ್ರಮಗಳು | ವಿದೇಶ ತರಬೇತಿ ಕಾರ್ಯಕ್ರಮಗಳು |
|---|---|---|---|---|
| 1 | ಎ | 0 | 0 | 0 |
| 2 | ಬಿ | 0 | 6 | 0 |
| 3 | ಸಿ | 0 | 1 | 0 |
| 4 | ಡಿ | 0 | 0 | 0 |

## 2011-12ನೇ ಸಾಲಿನಲ್ಲಿ ಪಡೆದ ಪ್ರಶಸ್ತಿಗಳ ವಿವರ:

| ಕ್ರ.ಸಂ. | ಪ್ರಶಸ್ತಿ ವಿವರ | ವೈಯಕ್ತಿಕವಾಗಿದ್ದಲ್ಲಿ ಅಧಿಕಾರಿ/ಸಿಬ್ಬಂದಿ ಹೆಸರು | ಷರಾ |
|---|---|---|---|
| 1 | ರಾಷ್ಟ್ರ ಪ್ರಶಸ್ತಿ | 1 | ಪಿಡಿಓ ಯಾದವಾಡ ಗ್ರಾಮ ಪಂಚಾಯತಿ, ಧಾರವಾಡ ಜಿಲ್ಲೆ |
| 2 | ರಾಜ್ಯ ಪ್ರಶಸ್ತಿ | 1 | ಪಿಡಿಓ ಯಾದವಾಡ ಗ್ರಾಮ ಪಂಚಾಯತಿ, ಧಾರವಾಡ ಜಿಲ್ಲೆ |
| 3 | ಕ್ರೀಡೆಗಳಲ್ಲಿ ಸಾಧನೆ | 0 | 0 |
| 4 | ಉನ್ನತ ವ್ಯಾಸಂಗ (ಪಿಹೆಚ್‌ಡಿ ಇತ್ಯಾದಿ) | 0 | 0 |
| 5 | ಇತರೆ ಇದ್ದಲ್ಲಿ | 1 | ಬೈಫ್ ಸಂಸ್ಥೆ |

**ವಿಧಾನಸಭೆ, ವಿಧಾನ ಪರಿಷತ್ತು, ಗಮನ ಸೆಳೆಯುವ ಸೂಚನೆ ಹಾಗೂ ಭರವಸೆಗಳಿಗೆ ಉತ್ತರಿಸಿದ ವಿವರ:**

| ವಿಧಾನಸಭೆ | ವಿಧಾನ ಪರಿಷತ್ತು | ಗಮನ ಸೆಳೆಯುವ ಸೂಚನೆ | ಭರವಸೆ | ಉತ್ತರಿಸಿರುವುದು |
|---|---|---|---|---|
| 30<br>ಚುಕ್ಕೆ ಗುರುತಿನ-4<br>ಚುಕ್ಕೆ ಗುರುತಿಲ್ಲದ-26 | 27<br>ಚುಕ್ಕೆ ಗುರುತಿನ-4<br>ಚುಕ್ಕೆ ಗುರುತಿಲ್ಲದ-23 | 6<br>ವಿಧಾನಸಭೆ -2<br>ವಿಧಾನ ಪರಿಷತ್ತು -4 | 5 | 68 |

**ಮಾಹಿತಿ ಹಕ್ಕು ಅಧಿನಿಯಮ-2005:**

| ಸ್ವೀಕರಿಸಿದ ಅರ್ಜಿಗಳ ಸಂಖ್ಯೆ | ಉತ್ತರಿಸಿದ ಅರ್ಜಿಗಳ ಸಂಖ್ಯೆ | ತಿರಸ್ಕೃತ ಅರ್ಜಿಗಳ ಸಂಖ್ಯೆ | ಉಳಿಕೆ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಮೊತ್ತ(ರೂ.ಗಳಲ್ಲಿ) |
|---|---|---|---|---|
| 148 | 148 | 0 | 0 | 1376/- |

**ಸಮಿತಿಗಳ ರಚನೆ ಮತ್ತು ತೆಗೆದುಕೊಂಡ ನಿರ್ಣಯಗಳು:**

ಅ) ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ ಇದರಲ್ಲಿ 34 ಸದಸ್ಯರಿದ್ದು, ಯೋಜನೆಯ ನಿರ್ವಹಣೆ, ಉಸ್ತುವಾರಿ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಆ) ಕರ್ನಾಟಕ ರಾಷ್ಟ್ರೀಯ ಉದ್ಯೋಗ ಖಾತರಿ (ಕುಂದುಕೊರತೆ ನಿವಾರಣೆ) – ಈ ಸಮಿತಿಯಲ್ಲಿ 7 ಜನ ಸದಸ್ಯರಿದ್ದು ದೂರು ವಿಲೇವಾರಿ, ಮೇಲ್ವಿಚಾರಣೆಯನ್ನು ನಿರ್ವಹಿಸಲಾಗುತ್ತಿದೆ.

ಇ) **ಕಾರ್ಯಕಾರಿ ಸಮಿತಿ**: ಈ ಸಮಿತಿಯಲ್ಲಿ 4 ಸದಸ್ಯರಿದ್ದು ನಿಧಿ ನಿರ್ವಹಣೆ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಈ) ಗ್ರಾಮೀಣ ಉದ್ಯೋಗ ಖಾತರಿ ನಿಧಿ ಗೌರ್ನಿಂಗ್ ಕೌನ್ಸಿಲ್ ನಲ್ಲಿ 16 ಸದಸ್ಯರಿದ್ದು, ನಿಧಿ ನಿರ್ವಹಣೆ, ಉಸ್ತುವಾರಿ ಮತ್ತು ಮೇಲ್ವಿಚಾರಣೆಯನ್ನು ನಿರ್ವಹಿಸಲಾಗುತ್ತಿದೆ.

* * *

# 5. ಗ್ರಾಮೀಣ ಮೂಲಭೂತ ಸೌಲಭ್ಯಗಳು –1

## 5.1 ಗ್ರಾಮೀಣ ಸಂಪರ್ಕ

### ರಸ್ತೆ ಮತ್ತು ಸೇತುವೆಗಳು

ರಾಜ್ಯದಲ್ಲಿ ಗ್ರಾಮೀಣ ರಸ್ತೆಗಳ ಒಟ್ಟು ಉದ್ದ 147212 ಕಿ.ಮೀ.ಗಳಾಗಿದ್ದು, 56682 ಗ್ರಾಮೀಣ ಜನವಸತಿಗಳಿಗೆ ಸಂಪರ್ಕ ಕಲ್ಪಿಸಲಾಗಿದೆ.

ರಾಜ್ಯದಲ್ಲಿರುವ ಗ್ರಾಮೀಣ ರಸ್ತೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ :

| | |
|---|---|
| ಡಾಂಬರೀಕರಣಗೊಂಡ ರಸ್ತೆಗಳು | 47744.00 ಕಿ.ಮೀ.ಗಳು |
| ಜಲ್ಲಿ ರಸ್ತೆಗಳು | 25771.00 ಕಿ.ಮೀ.ಗಳು |
| ಮಣ್ಣಿನ ರಸ್ತೆಗಳು | 73697.00 ಕಿ.ಮೀ.ಗಳು |
| **ಒಟ್ಟು** | **147212.00 ಕಿ.ಮೀ.ಗಳು** |

1987 ರಿಂದ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯು ಜಿಲ್ಲಾ ಪಂಚಾಯತಿಗಳ ಜವಾಬ್ದಾರಿಯಾಗಿದೆ. ರಸ್ತೆಗಳ ನಿರ್ವಹಣೆ 1999ರ ಅಂತ್ಯದವರೆಗೆ ರಾಜ್ಯ ಮಟ್ಟದಲ್ಲಿ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಮೇಲ್ವಿಚಾರಣೆಯಲ್ಲಿದ್ದು, 1.1.2000 ದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ವರ್ಗಾಯಿಸಲಾಗಿದೆ. ರಾಜ್ಯದ ಗ್ರಾಮೀಣ ರಸ್ತೆಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ನಬಾರ್ಡ್ ಯೋಜನೆ, ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ, ಗ್ರಾಮೀಣ ಸಂಪರ್ಕ ಯೋಜನೆ ಇತ್ಯಾದಿ ಕಾರ್ಯಕ್ರಮಗಳಡಿ ಅಭಿವೃದ್ಧಿ ಹಾಗೂ ನಿರ್ವಹಣೆ ಮಾಡಲಾಗುತ್ತಿದೆ.

**ನಬಾರ್ಡ್ ನೆರವಿನ ಯೋಜನೆ :**

ನಬಾರ್ಡ್ ಸಂಸ್ಥೆಯ ಹಣಕಾಸು ನೆರವಿನಿಂದ ಆರ್‌ಐಡಿಎಫ್–15ರಡಿಯಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆರ್‌ಐಡಿಎಫ್–15ರಡಿ ನಬಾರ್ಡ್ ಸಂಸ್ಥೆಯಿಂದ ರೂ. 11948.20 ಲಕ್ಷಗಳ ಅಂದಾಜು ಮೊತ್ತದಲ್ಲಿ 250 ಕಾಮಗಾರಿಗಳು ಅನುಮೋದನೆಗೊಂಡಿದ್ದು, 634.47 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದ್ದು, ಇದರಲ್ಲಿ ರೂ. 9497.42 ಲಕ್ಷಗಳ ವೆಚ್ಚದಲ್ಲಿ 536.16 ಕಿ.ಮೀ. ಉದ್ದದ 207 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತವೆ. ಸದರಿ ಹಂತದಡಿಯಲ್ಲಿ ರೂ. 190.00 ಲಕ್ಷಗಳ ಮೊತ್ತದಲ್ಲಿ 27 ಸಂಖ್ಯೆಯ ಕಾಲುಸಂಕಗಳು ಅನುಮೋದನೆಗೊಂಡಿದ್ದು, ಇವುಗಳಲ್ಲಿ ರೂ. 121.03 ಲಕ್ಷಗಳ ವೆಚ್ಚದಲ್ಲಿ 20 ಸಂಖ್ಯೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ.

ನಬಾರ್ಡ್ ಸಂಸ್ಥೆಯ ಹಣಕಾಸು ನೆರವಿನಿಂದ ಆರ್‌ಐಡಿಎಫ್–16ರಡಿಯಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆರ್‌ಐಡಿಎಫ್–16ರಡಿ ನಬಾರ್ಡ್ ಸಂಸ್ಥೆಯಿಂದ ರೂ. 15126.70 ಲಕ್ಷಗಳ ಅಂದಾಜು ಮೊತ್ತದಲ್ಲಿ 251 ಕಾಮಗಾರಿಗಳು ಅನುಮೋದನೆಗೊಂಡಿದ್ದು, 651.79 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಇದರಲ್ಲಿ ರೂ. 9005.54 ಲಕ್ಷಗಳ ವೆಚ್ಚದಲ್ಲಿ 255.31 ಕಿ.ಮೀ. ಉದ್ದದ 100 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತವೆ. ಸದರಿ ಹಂತದಡಿಯಲ್ಲಿ ರೂ. 733.44 ಲಕ್ಷಗಳ ಮೊತ್ತದಲ್ಲಿ 153 ಸಂಖ್ಯೆಯ ಕಾಲುಸಂಕಗಳು ಅನುಮೋದನೆಗೊಂಡಿದ್ದು, ಇವುಗಳಲ್ಲಿ ರೂ. 158.77 ಲಕ್ಷಗಳ ವೆಚ್ಚದಲ್ಲಿ 50 ಸಂಖ್ಯೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ.

ನಬಾರ್ಡ್ ಸಂಸ್ಥೆಯ ಹಣಕಾಸು ನೆರವಿನಿಂದ ಆರ್‌ಐಡಿಎಫ್–17ರಡಿಯಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆರ್‌ಐಡಿಎಫ್–17ರಡಿ ನಬಾರ್ಡ್ ಸಂಸ್ಥೆಯಿಂದ ರೂ. 18,928.50 ಲಕ್ಷ ಅಂದಾಜು ಮೊತ್ತದಲ್ಲಿ 473 ಕಾಮಗಾರಿಗಳು ಅನುಮೋದನೆಗೊಂಡಿದ್ದು, 675 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. 126 ಸೇತುವೆ ಹಾಗೂ ಕಾಲುಸಂಕಗಳನ್ನು ನಿರ್ಮಾಣ ಮಾಡಲು ರೂ.1536.00 ಲಕ್ಷಗಳು ಅನುಮೋದನೆಯಾಗಿರುತ್ತದೆ. ಇವುಗಳ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿ ಹಾಗೂ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

**ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ :**

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯನ್ನು 2003–04 ನೇ ಸಾಲಿನಲ್ಲಿ ಪ್ರಾರಂಭಿಸಿ ರೂ. 10000 ಲಕ್ಷಗಳ ಮೊತ್ತದ ಒಂದು ನಿಧಿಯನ್ನು ಸ್ಥಾಪಿಸಲಾಯಿತು. 2011–12ನೇ ಸಾಲಿನಲ್ಲಿ ಒಟ್ಟು ರೂ. 14,827.50 ಲಕ್ಷಗಳನ್ನು ಪ್ರಾದೇಶಿಕ ಅಸಮತೋಲನಾ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸಿನ ಅನ್ವಯ ಒದಗಿಸಲಾಗಿದೆ.

ರೂ. 14,827.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಮಾರ್ಚ್–2012ರ ಅಂತ್ಯಕ್ಕೆ ರೂ. 13,283.44 ಲಕ್ಷಗಳ ವೆಚ್ಚದಲ್ಲಿ 6641.70 ಕಿ.ಮೀ. ಉದ್ದದ ರಸ್ತೆಯನ್ನು ನಿರ್ವಹಣೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲೆ | 2011-12 | | | |
|---|---|---|---|---|---|
| | | ಹಂಚಿಕೆ ಮಾಡಿದ ಅನುದಾನ | ಬಿಡುಗಡೆಯಾದ ಅನುದಾನ | 31.03.2012ರ ಅಂತ್ಯದವರೆಗಿನ ವೆಚ್ಚ | ಭೌತಿಕ ಪ್ರಗತಿ (ಕಿ.ಮೀ.ಗಳಲ್ಲಿ) |
| | | ಲೆಕ್ಕಶೀರ್ಷಿಕೆ 3054(CMGSY) | ಲೆಕ್ಕಶೀರ್ಷಿಕೆ 3054(CMGSY) | | |
| 1 | ಬಾಗಲಕೋಟೆ | 412.00 | 412.00 | 293.85 | 146.9 |
| 2 | ಬೆಂಗಳೂರು(ನ) | 425.29 | 425.29 | 417.76 | 208.9 |
| 3 | ಬೆಂಗಳೂರು(ಗ್ರಾ) | 233.59 | 233.59 | 183.69 | 91.8 |
| 4 | ಬೆಳಗಾಂ | 572.83 | 572.83 | 527.51 | 263.8 |
| 5 | ಬಳ್ಳಾರಿ | 578.31 | 578.31 | 530.09 | 265.0 |
| 6 | ಬೀದರ್ | 769.19 | 769.19 | 768.98 | 384.5 |
| 7 | ಬಿಜಾಪುರ | 755.01 | 755.01 | 683.25 | 341.6 |
| 8 | ಚಾಮರಾಜನಗರ | 474.52 | 474.52 | 419.58 | 209.8 |
| 9 | ಚಿಕ್ಕಮಗಳೂರು | 433.80 | 433.80 | 410.22 | 205.1 |
| 10 | ಚಿಕ್ಕಬಳ್ಳಾಪುರ | 384.17 | 384.17 | 305.14 | 152.6 |
| 11 | ಚಿತ್ರದುರ್ಗ | 454.51 | 454.51 | 454.51 | 227.3 |
| 12 | ದಕ್ಷಿಣ ಕನ್ನಡ | 260.00 | 260.00 | 260.00 | 130.0 |
| 13 | ದಾವಣಗೆರೆ | 592.45 | 592.45 | 592.45 | 296.2 |
| 14 | ಧಾರವಾಡ | 532.93 | 532.93 | 287.72 | 143.9 |
| 15 | ಗದಗ್ | 305.04 | 305.04 | 305.04 | 152.5 |
| 16 | ಗುಲ್ಬರ್ಗಾ | 1133.68 | 1133.68 | 1133.68 | 566.8 |
| 17 | ಹಾಸನ | 415.00 | 415.00 | 386.66 | 193.3 |
| 18 | ಹಾವೇರಿ | 347.97 | 347.97 | 347.97 | 174.0 |
| 19 | ಕೊಡಗು | 195.00 | 195.00 | 193.83 | 96.9 |
| 20 | ಕೋಲಾರ | 281.31 | 281.31 | 231.08 | 115.5 |
| 21 | ಕೊಪ್ಪಳ | 473.53 | 473.53 | 398.11 | 199.1 |
| 22 | ಮಂಡ್ಯ | 475.71 | 475.71 | 475.71 | 237.9 |
| 23 | ಮೈಸೂರು | 583.33 | 583.33 | 560.97 | 280.5 |
| 24 | ರಾಮನಗರ | 420.52 | 420.52 | 418.87 | 209.4 |
| 25 | ರಾಯಚೂರು | 717.47 | 717.47 | 593.46 | 296.7 |
| 26 | ಶಿವಮೊಗ್ಗ | 367.76 | 367.76 | 356.56 | 178.3 |
| 27 | ತುಮಕೂರು | 905.66 | 905.66 | 699.15 | 349.6 |
| 28 | ಉಡುಪಿ | 175.00 | 175.00 | 151.40 | 75.7 |
| 29 | ಉತ್ತರ ಕನ್ನಡ | 668.82 | 668.82 | 513.84 | 256.9 |
| 30 | ಯಾದಗಿರಿ | 483.10 | 483.10 | 382.36 | 191.2 |
| | **ಒಟ್ಟು:** | **14827.50** | **14827.50** | **13283.44** | **6641.7** |

## 5.2 ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ

**ದೂರದೃಷ್ಟಿ:**

ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಹಾಗೂ ಅಭ್ಯುದಯಕ್ಕಾಗಿ ಗುಣಮಟ್ಟದ ಸರ್ವಋತು ಸಂಪರ್ಕ ರಸ್ತೆಗಳನ್ನು ಮಾಪಕ ಸಂಸ್ಥೆಗಳ ಮಾನದಂಡಕ್ಕನುಗುಣವಾಗಿ ನಿರ್ಮಿಸುವುದು. ಈ ರೀತಿ ನಿರ್ಮಿಸಿದ ರಸ್ತೆಗಳ ಉತ್ತಮ ನಿರ್ವಹಣೆಯನ್ನು ಕಾರ್ಯರೂಪಕ್ಕೆ ತರುವುದು.

**ಉದ್ದೇಶ:**

1) ಗ್ರಾಮೀಣ ಮೂಲಸೌಕರ್ಯಗಳನ್ನು ಕಡಿಮೆ ವೆಚ್ಚದಲ್ಲಿ ಉತ್ತಮ ತಾಂತ್ರಿಕತೆಯೊಂದಿಗೆ ವಿವಿಧ ತಾಂತ್ರಿಕ ವಿದ್ಯಾಸಂಸ್ಥೆಗಳ ಸಹಯೋಗದೊಂದಿಗೆ ನಿರ್ಮಿಸಲು ಇಲಾಖೆಗೆ ಸಹಕಾರ ನೀಡುವುದು. ಈ ಮೂಲ ಸೌಕರ್ಯಗಳನ್ನು ನಿರ್ಮಿಸಲು ಸ್ಥಳೀಯವಾಗಿ ಲಭ್ಯವಿರುವ ಸಾಮಗ್ರಿಗಳನ್ನು ಉಪಯೋಗಿಸಲು ಇಲಾಖೆಗೆ ಸಹಕಾರ ನೀಡುವುದು.
2) ಮೂಲಸೌಕರ್ಯ ಅಭಿವೃದ್ಧಿಗಾಗಿ ನಿಗದಿಪಡಿಸಿದ ಹಣವನ್ನು ಸೂಕ್ತವಾಗಿ ಉಪಯೋಗಿಸಿ ಕೊಂಡು ನಿಗಧಿತ ಸಮಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.
3) ಇಲಾಖೆಯ ಇಂಜಿನಿಯರ್‌ಗಳಲ್ಲಿ ಕಾಮಗಾರಿ ನಿರ್ವಹಿಸುವ ಗುತ್ತಿಗೆದಾರ ಇಂಜಿನಿಯರ್‌ಗಳಲ್ಲಿ ಸೂಕ್ತ ತಾಂತ್ರಿಕ ತರಬೇತಿ ನೀಡಿ ಇತ್ತೀಚಿನ ತಾಂತ್ರಿಕ ಅಭಿವೃದ್ಧಿಯ ಹಾಗೂ ಹೊಸ ಅವಿಷ್ಕಾರಗಳ ಬಗ್ಗೆ ಮಾಹಿತಿ ನೀಡುವುದು.
4) ಅಭಿವೃದ್ಧಿಪಡಿಸಿದ ರಸ್ತೆಗಳನ್ನು ಉತ್ತಮವಾಗಿ ನಿರ್ವಹಣೆ ಮಾಡುವುದು.
5) ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಹಾಗೂ ಸಾರ್ವಜನಿಕ ದೂರಿಗೆ ಸೂಕ್ತವಾಗಿ ಸ್ಪಂದಿಸುವ ವ್ಯವಸ್ಥೆ ಬಲಪಡಿಸುವುದು.
6) ಕಾಮಗಾರಿಯ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದು.

**ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ.**

(ರೂ.ಕೋಟಿಗಳಲ್ಲಿ)

| ಪ್ರಾರಂಭಿಕ ಶಿಲ್ಕು | ಕೇಂದ್ರ ಅನುದಾನ | ರಾಜ್ಯ ಅನುದಾನ | ಒಟ್ಟು | ಆರ್ಥಿಕ ಪ್ರಗತಿ (ಮಾರ್ಚ್ 2012 ರ ಅಂತ್ಯಕ್ಕೆ) | ಭೌತಿಕ ಪ್ರಗತಿ (ಕಿ.ಮೀ) |
|---|---|---|---|---|---|
| 529.00 | – | 87.00 | 616.00 | 446.35 | 1838.62 |

**ನಮ್ಮ ಗ್ರಾಮ ನಮ್ಮ ರಸ್ತೆ:**

(ರೂ.ಕೋಟಿಗಳಲ್ಲಿ)

| ಪ್ರಾರಂಭಿಕ ಶಿಲ್ಕು | ಕೇಂದ್ರ ಅನುದಾನ | ರಾಜ್ಯ ಅನುದಾನ | ಒಟ್ಟು | ಆರ್ಥಿಕ ಪ್ರಗತಿ (ಮಾರ್ಚ್ 2012 ರ ಅಂತ್ಯಕ್ಕೆ) | ಭೌತಿಕ ಪ್ರಗತಿ (ಕಿ.ಮೀ) |
|---|---|---|---|---|---|
| 100.00 | – | 719.76 | 819.76 | 525.00 | 1497.71 |

## ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ

### 2011ಮತ್ತು 2012 ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರ

| ಕ್ರ ಸಂ | ವರ್ಗ | ಒಟ್ಟು ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾತಿ | ಪ.ಪಂಗಡ |
|---|---|---|---|---|---|---|
| 1 | ಎ | 116 | 114 | 2 | 11 | 5 |
| 2 | ಬಿ | 399 | 381 | 18 | 25 | 6 |
| 3 | ಸಿ | 425 | 290 | 135 | 18 | 9 |
| 4 | ಡಿ | 156 | 139 | 17 | 9 | 4 |

### 2011ಮತ್ತು 2012 ನೇ ಸಾಲಿನಲ್ಲಿ ಖಾಲಿ ಇರುವ, ನಿವೃತ್ತಿಯಾದ/ ನಿವೃತ್ತಿಯಾಗಲಿರುವ ವಿವರ

| ಕ್ರಸಂ | ವರ್ಗ | ಖಾಲಿ ಹುದ್ದೆಗಳು | ನಿವೃತ್ತಿಯಾದವರು | ನಿವೃತ್ತಿಯಾಗಲಿರುವವರು |
|---|---|---|---|---|
| 1 | ಎ | – | 1 | 2 |
| 2 | ಬಿ | – | 2 | 2 |
| 3 | ಸಿ | 46 | 3 | 4 |
| 4 | ಡಿ | 4 | 1 | 3 |

### 2011ಮತ್ತು 2012 ನೇ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರ

| ಕ್ರಸಂ | ಹುದ್ದೆ | ಸಂಖ್ಯೆ |
|---|---|---|
| 1 | ಆಪ್ತ ಸಹಾಯಕರು | – |
| 2 | ಗ್ರೂಪ್ ಡಿ | 108 |
| 3 | ವಾಹನ ಚಾಲಕರು | 9 |
| 4 | ಸಲಹೆಗಾರರು/ಪ್ರೋಗ್ರಾಂ ಮ್ಯಾನೇಜರ್ | 23 |
| 5 | ಇತರೆ(ಡಾಟಾ ಎಂಟ್ರಿ ಆಪರೇಟರ್) | 81 |

### 2011 ಮತ್ತು 2012 ನೇ ಸಾಲಿನಲ್ಲಿ ತರಬೇತಿ ಪಡೆದ ಅಧಿಕಾರಿ/ಸಿಬ್ಬಂದಿಗಳ ವಿವರ

| ಕ್ರಸಂ | ವರ್ಗ | ರಾಜ್ಯದ ತರಬೇತಿ ಕಾರ್ಯಕ್ರಮಗಳು | ಹೊರರಾಜ್ಯದ ತರಬೇತಿ ಕಾರ್ಯಕ್ರಮಗಳು | ವಿದೇಶ ತರಬೇತಿ ಕಾರ್ಯಕ್ರಮಗಳು |
|---|---|---|---|---|
| 1 | ಎ | – | 12 | 2 |
| 2 | ಬಿ | 100 | 68 | – |
| 3 | ಸಿ | 14 | 6 | – |
| 4 | ಡಿ | – | – | – |

## 2011 ಮತ್ತು 2012 ನೇ ಸಾಲಿನಲ್ಲಿ ಕೈಗೊಂಡ ಆಡಳಿತಾತ್ಮಕ ಪರಿವೀಕ್ಷಣಾ ವಿವರ

| ಕ್ರಸಂ | ವರ್ಷ | ಆಡಳಿತಾತ್ಮಕ ಪರಿವೀಕ್ಷಣೆ ಕೈಗೊಂಡ ಸಂಖ್ಯೆ | | ಶಿಸ್ತು ಕ್ರಮ ತೆಗೆದು ಕೊಂಡಿರುವ ಅಧಿಕಾರಿ/ ಸಿಬ್ಬಂದಿ ಸಂಖ್ಯೆ |
|---|---|---|---|---|
| | | ರಾಜ್ಯ ಮಟ್ಟ | ಜಿಲ್ಲಾ ಮಟ್ಟ | |
| 1 | 2011–12 | – | 3 | – |

## ವಿಧಾನ ಸಭಾ/ಪರಿಷತ್/ ಗಮನಸೆಳೆಯುವ ಸೂಚನೆಗೆ ಉತ್ತರಿಸಿದ ವಿವರ

| ವಿಧಾನ ಸಭಾ ಪ್ರಶ್ನೆಗಳು | | ವಿಧಾನ ಪರಿಷತ್ ಪ್ರಶ್ನೆಗಳು | | ಗಮನ ಸೆಳೆಯುವ ಸೂಚನೆಗೆ ಉತ್ತರಗಳು | | ಮುಂದಿನ ಅಧಿವೇಶನದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು | |
|---|---|---|---|---|---|---|---|
| ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ |
| 32 | 32 | 8 | 8 | 40 | 40 | – | – |

## ಮಾಹಿತಿ ಹಕ್ಕು ಅಧಿನಿಯಮ

| ಸ್ವೀಕರಿಸಿದ ಒಟ್ಟು ಅರ್ಜಿ ಗಳು | ನಿಗದಿತ ಕಾಲಾವಧಿ ಯಲ್ಲಿಉತ್ತರಿಸಿದ ಅರ್ಜಿಗಳು | ಸ್ವೀಕರಿಸಿದ ಅರ್ಜಿ ಶುಲ್ಕ ದಾಖಲೆಪ್ರತಿ ಗಳನ್ನು ನೀಡಲು ಸ್ವೀಕರಿಸಿದ ಮೊತ್ತ (ರೂ.ಗಳಲ್ಲಿ) | ಮೇಲ್ಮನವಿ ನಂತರ ಇತ್ಯರ್ಥಗೊಳಿಸಿದ ಅರ್ಜಿಗಳು | | ವಿಧಿಸಿದ ದಂಡ (ರೂ. ಗಳಲ್ಲಿ) |
|---|---|---|---|---|---|
| | | | ಮೇಲ್ಮನವಿ ಪ್ರಾಧಿಕಾರ ಇತ್ಯರ್ಥ ಗೊಳಿಸಿದ ಸಂಖ್ಯೆ | ಮಾಹಿತಿ ಹಕ್ಕು ಆಯೋಗದಿಂದ ಇತ್ಯರ್ಥಗೊಳಿಸಿದ ಸಂಖ್ಯೆ | |
| 12 | 12 | 7168.00 | ಇಲ್ಲ | ಇಲ್ಲ | ಇಲ್ಲ |

# 6. ಗ್ರಾಮೀಣ ಮೂಲಭೂತ ಸೌಲಭ್ಯಗಳು –2

## 6.1 ಸ್ವ ಉದ್ಯೋಗ ಕಾರ್ಯಕ್ರಮಗಳು

### ದೂರದೃಷ್ಠಿ

- ಆರ್ಥಿಕವಾಗಿ ಹಿಂದುಳಿದವರನ್ನು ಒಂದುಗೂಡಿಸಿ, ಸ್ವಸಹಾಯ ಸಂಘಗಳನ್ನು ರಚಿಸಿ ವಿವಿಧ ಆದಾಯಕರ ಉತ್ಪನ್ನಗಳನ್ನು ತಯಾರಿಸುವ ನಿಟ್ಟಿನಲ್ಲಿ ಕೌಶಲ್ಯಭಿವೃದ್ಧಿಗಳಲ್ಲಿ ತರಬೇತಿ ನೀಡಿ ಕುಶಲಕರ್ಮಿಗಳನ್ನಾಗಿಸುವುದು.
- ಸುತ್ತುನಿಧಿ, ಸಾಲ ಮತ್ತು ಸಹಾಯಧನ ಒದಗಿಸಿ ಆ ಮೂಲಕ ಸ್ವಾವಲಂಬಿಗಳನ್ನಾಗಿಸಿ ಆರ್ಥಿಕವಾಗಿ ಸದೃಢರನ್ನಾಗಿಸಲು ನೆರವಾಗುವುದು.
- ಆರ್ಥಿಕವಾಗಿ ಹಿಂದುಳಿದವರಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಗುರುತಿಸಿ ಅವರನ್ನು ಮಾನಸಿಕ, ವ್ಯಾವಹಾರಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯವಾಗಿ ಪ್ರೋತ್ಸಾಹಿಸಿ ಸಮಾಜದ ಮುಖ್ಯವಾಹಿನಿಗೆ ಕರೆತರುವುದು.
- ಹಂತ–ಹಂತವಾಗಿ ಬಡತನ ರೇಖೆಯಿಂದ ಮೇಲೆ ಬರಲು ಪ್ರೋತ್ಸಾಹಿಸುವುದು.
- ಸಣ್ಣ ಸಣ್ಣ ಉದ್ಯಮಗಳನ್ನು ಸ್ಥಾಪಿಸುವುದು.

### ಉದ್ದೇಶ

- ಬಡ ಕುಟುಂಬಗಳಿಗೆ ಲಾಭದಾಯಕ ಸ್ವ–ಉದ್ಯೋಗ, ಕುಶಲ ಕೂಲಿ ಉದ್ಯೋಗಾವಕಾಶಗಳ ಮೂಲಕ ಅವರ ಬಡತನವನ್ನು ತಗ್ಗಿಸುವುದು. ಈ ಮೂಲಕ ಅವರ ಏಳಿಗೆಗಾಗಿ, ಜೀವನೋಪಾಯಕ್ಕಾಗಿ ಭದ್ರಬುನಾದಿ ಹಾಕುವುದು.
- ಸ್ವಸಹಾಯ ಸಂಘಗಳ ಮೂಲಕ ಜಾಗತಿಕವಾಗಿ ಹಾಗೂ ಸಾಮಾಜಿಕವಾಗಿ ಸಜ್ಜುಗೊಳಿಸುವುದು.
- ತಳಹದಿಯಿಂದಲೇ ಸ್ವಸಹಾಯ ಸಂಘಗಳ ಒಕ್ಕೂಟದೊಂದಿಗೆ ಬಲಿಷ್ಠ ಸಂಸ್ಥೆಯೊಂದನ್ನು ನಿರ್ಮಿಸುವುದು.

### ಗುರಿ

- ಗ್ರಾಮೀಣ ಬಡಜನರ ಸಂಘಟನೆಯನ್ನು ಸ್ವಸಹಾಯ ಸಮೂಹಗಳಾಗಿ, ಮತ್ತು ಅವರ ಸಾಮರ್ಥ್ಯ ಹೆಚ್ಚಿಸುವ ಸಮೂಹ ಚಟುವಟಿಕೆ, ಯೋಜನೆ ಮೂಲಭೂತ ಸೌಕರ್ಯ ನಿರ್ಮಾಣ, ತಾಂತ್ರಿಕತೆ ತರಬೇತಿ ಮತ್ತು ಆದಾಯಕರ ಆಸ್ತಿಯನ್ನು ಬ್ಯಾಂಕ್ ಸಾಲ ಹಾಗೂ ಸರ್ಕಾರದ ಸಹಾಯಧನ ಒದಗಿಸಲಾಗುತ್ತದೆ.
- ಪ್ರಚಾರದ ಮೂಲಕ ಮಾಹಿತಿ ನೀಡುವುದು, ಕೌಶಲ್ಯಾಭಿವೃದ್ಧಿ, ಸಾಲ ಒದಗಿಸುವಿಕೆ, ಮಾರುಕಟ್ಟೆ ಮತ್ತು ಇತರೆ ಜೀವನೋಪಾಯ ಮಾರ್ಗಗಳನ್ನು ಒದಗಿಸುವುದು..
- ಬಡವರ ಜೀವನಾಧಾರ ವೃತ್ತಿಗಳ ಆಯ್ಕೆಯ ಸ್ವಾತಂತ್ರ್ಯತೆಗಳನ್ನು ಹೆಚ್ಚಿಸುವುದು ಮತ್ತು ವಿಸ್ತರಿಸುವುದು.

- ಬಡಜನರ ನೈಪುಣ್ಯತೆಯನ್ನು ಹೆಚ್ಚಿಸಿ, ಗ್ರಾಮದ ಹೊರಗೆ ವಿಶಾಲ ಮಾರುಕಟ್ಟೆ ಹಾಗೂ ಉದ್ಯೋಗಾವಕಾಶ ಒದಗಿಸುವುದು.
- ಆರ್ಥಿಕ, ಬಂಡವಾಳ, ಉತ್ಪಾದನಾ ವಿಸ್ತರಣೆ, ತಾಂತ್ರಿಕತೆ, ಕೌಶಲ್ಯಾಭಿವೃದ್ಧಿ ಬಗ್ಗೆ ಅರಿವು ಹಾಗೂ ಮಾರುಕಟ್ಟೆ ಸೇವೆಗಳನ್ನು ಒದಗಿಸುವುದು.

**ಕ್ರಿಯೆ**

- ಎಸ್‌ಜಿಎಸ್‌ವೈ ಯೋಜನೆಯು ಗುಂಪು ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ.
- ಅಂಗವಿಕಲ ಸ್ವರೋಜ್‌ಗಾರಿಗಳಿದಲ್ಲಿ ವೈಯಕ್ತಿಕವಾಗಿ ಸಹಾಯ ಒದಗಿಸಬಹುದು.
- ಉತ್ತಮ ಸರ್ಕಾರೇತರ ಸಂಸ್ಥೆ ಹಾಗೂ ನಾಗರೀಕ ಸಂಸ್ಥೆ (ಸಿಎಸ್‌ಒ)ಗಳನ್ನು ಗುರುತಿಸುವುದು.
- ಪ್ರದೇಶದಲ್ಲಿನ ಕಾರ್ಯಸಾಧ್ಯಗಳನ್ನು ಗುರುತಿಸುವುದು.
- ಫಲಾನುಭವಿಗಳ ಪಟ್ಟಿಗೆ ಗ್ರಾಮಸಭೆಯ ಮೂಲಕ ಅಧಿಕೃತ ಒಪ್ಪಿಗೆ ನೀಡುವುದು.

ಐಆರ್‌ಡಿಪಿ, ಟ್ರೈಸಂ, ಟೂಲ್‌ಕಿಟ್ಸ್, ಜಿಕೆವೈ ಇತ್ಯಾದಿ ಕಾರ್ಯಕ್ರಮಗಳ ಸಂಯೋಜನೆಯೊಂದಿಗೆ ಎಸ್‌ಜಿಎಸ್‌ವೈ ಯೋಜನೆಯನ್ನು ದಿನಾಂಕ : 01–04–1999 ರಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75 : 25 ರ ಅನುಪಾತದಲ್ಲಿ ಯೋಜನೆಯನ್ನು ಜಾರಿಗೊಳಿಸುತ್ತದೆ. 2008–09, 2009–10, 2010–11, 2011–12ನೇ ಸಾಲಿನ ವಾರ್ಷಿಕ ವರದಿಯಲ್ಲಿ ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ. ಯೋಜನೆಯ ವಿವಿಧ ಅಂಶಗಳ ವಿವರಗಳನ್ನು ಪ್ರತ್ಯೇಕ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ನೀಡಿರುವ ಪ್ರಮುಖ ವಿವರಗಳೆಂದರೆ, ಆರ್ಥಿಕ ಹಾಗೂ ಭೌತಿಕ ಪ್ರಗತಿ, ಭಾರತ ಸರ್ಕಾರ ರೂಪಿಸಿರುವ ಅನುದಾನ ಹಂಚಿಕೆ, ಸ್ವಸಹಾಯ ಗುಂಪುಗಳಿಗೆ ಹಾಗೂ ವೈಯಕ್ತಿಕ ಸ್ವರೋಜ್ಗಾರಿಗಳಿಗೆ ಒದಗಿಸುವ ತರಬೇತಿ ಸೌಲಭ್ಯ, ಸಾಲ ಸಹಾಯಧನ, ಇತ್ಯಾದಿ.

**ಡಿಆರ್‌ಡಿಎ ರಚನೆ:**



## ಅಧ್ಯಾಯ-2

**ಕಳೆದ 5 ವರ್ಷಗಳಲ್ಲಿ (2007-08 ರಿಂದ 2011-12) ಸಾಧಿಸಿದ ಆರ್ಥಿಕ ಪ್ರಗತಿ ವರದಿ ಈ ಕೆಳಕಂಡಂತಿದೆ.**

| ವರ್ಷ | ಆರ್ಥಿಕ (ರೂ. ಕೋಟಿಗಳಲ್ಲಿ) | |
|---|---|---|
| | ಗುರಿ | ಸಾಧನೆ |
| 2007-08 | 90.41 | 98.80 |
| 2008-09 | 106.89 | 107.31 |
| 2009-10 | 109.61 | 120.03 |
| 2010-11 | 126.42 | 126.69 |
| 2011-12 | 115.65 | 120.13 |

**ಕಳೆದ 5 ವರ್ಷಗಳಲ್ಲಿ (2007-08 ರಿಂದ 2011-12) ಸಾಧಿಸಿದ ಭೌತಿಕ ಪ್ರಗತಿ ವರದಿ ಈ ಕೆಳಕಂಡಂತಿದೆ.**

| ಭೌತಿಕ | | | | |
|---|---|---|---|---|
| ವರ್ಷ | ಸ್ವಸಸಹಾಯ ಸಂಘಗಳ ರಚನೆ | | ಆರ್ಥಿಕ ಚಟುವಟಿಕೆ ಕೈಗೊಂಡ ಸ್ವರೋಜ್‌ಗಾರಿಗಳ ಸಂಖ್ಯೆ | |
| | ಗುರಿ | ಸಾಧನೆ | ಗುರಿ | ಸಾಧನೆ |
| 2007-08 | 5316 | 7226 | 65034 | 82158 |
| 2008-09 | 6348 | 7384 | 76834 | 88794 |
| 2009-10 | 5104 | 7018 | 63216 | 91366 |
| 2010-11 | 7282 | 7388 | 90420 | 104527 |
| 2011-12 | 6653 | 7802 | 82610 | 82509 |

### ರಾಜ್ಯದಲ್ಲಿ ವಿಲೇಜ್ ಹಾಥ್‌ಗಳ ನಿರ್ಮಾಣ

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯದಲ್ಲಿ ಸ್ವಸಹಾಯ ಸಂಘಗಳ ಉತ್ಪನ್ನಗಳ ವಹಿವಾಟಿಗಾಗಿ 87 ವಿಲೇಜ್ ಹಾಥ್‌ಗಳನ್ನು ನಿರ್ಮಿಸಲು ಅನುಮೋದಿಸಿ, ಇದಕ್ಕಾಗಿ ರೂ.5.19 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನ ರೂ.1.52 ಕೋಟಿಗಳನ್ನು ಬಿಡುಗಡೆಗೊಳಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಜಿಲ್ಲಾ ಹಾಥ್ ಸ್ಥಾಪನೆಗಾಗಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರೂ.1.50 ಕೋಟಿಗಳ ಯೋಜನೆಯನ್ನು ಅಂಗೀಕರಿಸಿ, ರೂ.28.12 ಲಕ್ಷಗಳನ್ನು ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನ ರೂ.9.37 ಲಕ್ಷಗಳನ್ನು ಬಿಡುಗಡೆ ಮಾಡಿದೆ.

**ಆರ್–ಸೆಟಿಗಳ ಸ್ಥಾಪನೆ ಹಾಗೂ ಉನ್ನತೀಕರಣ**

ಆರ್–ಸೆಟಿ / ರೂಡ್‌ಸೆಟಿಗಳ ಸ್ಥಾಪನೆ / ಉನ್ನತೀಕರಣಕ್ಕಾಗಿ ಕೇಂದ್ರ ಸರ್ಕಾರಕ್ಕೆ ಇದುವರೆಗೂ 32 ಪ್ರಸ್ತಾವನೆಗಳನ್ನು ಸಲ್ಲಿಸಲಾಗಿ, ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರೂ.2587.86 ಲಕ್ಷ ಮೌಲ್ಯದ 28 ಪ್ರಸ್ತಾವನೆಗಳನ್ನು ಅಂಗೀಕರಿಸಿ, ರೂ.1713.56 ಲಕ್ಷಗಳನ್ನು ಬಿಡುಗಡೆಗೊಳಿಸಿದೆ.

**ವಿಶೇಷ ಯೋಜನೆಗಳ ಸ್ಥಾಪನೆ**

ರಾಷ್ಟ್ರಮಟ್ಟದಲ್ಲಿ ಎಸ್‌ಜಿಎಸ್‌ವೈಯಡಿ ಒದಗಿಸಲಾಗಿರುವ ಅನುದಾನದಲ್ಲಿ ಶೇ.15ರಷ್ಟು ಅನುದಾನವನ್ನು ವಿಶೇಷ ಯೋಜನೆ / ಕಾರ್ಯಕ್ರಮಗಳ ಜಾರಿಗಾಗಿ ಮೀಸಲಿಡಲಾಗಿದೆ. ಈ ವಿಶೇಷ ಯೋಜನೆಗಳನ್ನು ಸರ್ಕಾರದ ಇಲಾಖೆಗಳು, ಅರೆ ಸರ್ಕಾರದ ಇಲಾಖೆಗಳು ಸರ್ಕಾರೇತರ ಸಂಸ್ಥೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾಗುತ್ತದೆ.

ಪ್ರತಿಯೊಂದು ಯೋಜನೆಯೂ ಕಾಲಬದ್ಧವಾಗಿದ್ದು, ನಿರ್ದಿಷ್ಟ ಸಂಖ್ಯೆಯ ಬಡತನ ರೇಖೆಗಿಂತ ಕಡಿಮೆ ಆದಾಯ ಹೊಂದಿರುವ ಕುಟುಂಬಗಳಿಗೆ ಸ್ವ ಉದ್ಯೋಗ ಕಲ್ಪಿಸುವುದು ಮತ್ತು ಈ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆತ್ತುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಗ್ರಾಮೀಣ ಬಡಜನರನ್ನು ಸಂಘಟಿಸುವುದು, ಇವರಿಗೆ ಮೂಲಭೂತ ಸೌಲಭ್ಯ, ತಂತ್ರಜ್ಞಾನ ಮತ್ತು ಮಾರುಕಟ್ಟೆ ಸೌಲಭ್ಯ ಒದಗಿಸುವುದು, ಬೇರೆ ಇತರೆ ಚಟುವಟಿಕೆಗಳ ಮೂಲಕ ತರಬೇತಿ ಒದಗಿಸುವುದು ಮತ್ತು ಉದ್ಯೋಗದ ಅವಕಾಶಗಳನ್ನು ಕಲ್ಪಿಸುವುದು ಯೋಜನೆಯ ಮುಖ್ಯ ಗುರಿಯಾಗಿದೆ.

ಭಾರತ ಸರ್ಕಾರಕ್ಕೆ ಈವರೆಗೆ ಯೋಜನೆಯು ಜಾರಿಯಾದಾಗಿನಿಂದ ರೂ.177.76 ಕೋಟಿ ಯೋಜನಾ ಮೊತ್ತದ 22 ಪ್ರಸ್ತಾವನೆಗಳನ್ನು ಕಳುಹಿಸಿಕೊಡಲಾಗಿದೆ. ಈ ಪ್ರಸ್ತಾವನೆಗಳಲ್ಲಿ ದಕ್ಷಿಣ ಕನ್ನಡ, ಬಾಗಲಕೋಟೆ ಮತ್ತು ಮೈಸೂರು ಜಿಲ್ಲೆಯ ತಲಾ 2 ವಿಶೇಷ ಯೋಜನೆಗಳಿಗೆ ಮತ್ತು ಕೋಲಾರ, ಬಳ್ಳಾರಿ ಹಾಗೂ ಧಾರವಾಡ ಜಿಲ್ಲೆಗಳ ತಲಾ 1 ವಿಶೇಷ ಯೋಜನೆಗಳು, ಮಂಜೂರಾಗಿರುತ್ತವೆ. ಒಟ್ಟು ಮಂಜೂರಾದ ವಿಶೇಷ ಯೋಜನೆಗಳ ಯೋಜನಾ ಮೊತ್ತವು ರೂ.71.05 ಕೋಟಿಗಳಾಗಿರುತ್ತವೆ.

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು 2011–12ನೇ ಸಾಲಿನ ಮಾರ್ಚ್ ಅಂತ್ಯಕ್ಕೆ ರೂ.28.12 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಒಟ್ಟಾರೆಯಾಗಿ ರೂ.30.81 ಕೋಟಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರವು ಪ್ರಸ್ತುತ ಸಾಲಿನಲ್ಲಿ ರೂ.0.46 ಕೋಟಿಗಳನ್ನು ಬಿಡುಗಡೆ ಮಾಡಿದ್ದು ಹಾಗೂ ಒಟ್ಟಾರೆಯಾಗಿ 7.96 ಕೋಟಿಗಳನ್ನು ಬಿಡುಗಡೆ ಮಾಡಿದೆ.

## ಸ್ವ-ಸಹಾಯ ಸಂಘಗಳಿಗಾಗಿ ಸರಸ್ ಮೇಳ ಆಯೋಜನೆ

ಸ್ವ-ಸಹಾಯ ಸಂಘಗಳ ಉತ್ಪನ್ನಗಳ ಮಾರುಕಟ್ಟೆಗಾಗಿ, ಪ್ರಾದೇಶಿಕ ಸರಸ್ ವಸ್ತು ಪ್ರದರ್ಶನ ಮೇಳವನ್ನು ರಾಜ್ಯದಲ್ಲಿ ಆಯೋಜಿಸಲಾಗುತ್ತಿದ್ದು, ಕಳೆದ ನಾಲ್ಕು ವರ್ಷಗಳ ಸರಸ್ ಮೇಳದ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವರ್ಷ | ಸರಸ್ ಮೇಳ ಆಯೋಜನೆ | ಮಾರಾಟಗೊಂಡ ಉತ್ಪನ್ನಗಳ ಮೌಲ್ಯ ರೂ. | ಷರಾ |
|---|---|---|---|---|
| 1 | 2008-09 | ಬೆಂಗಳೂರು ನಗರ | 2.43 ಕೋಟಿಗಳು | 16 ದಿನಗಳು |
| 2 | 2009-10 | ಬೆಳಗಾವಿ | 2.85 ಕೋಟಿಗಳು | 12 ದಿನಗಳು |
| 3 | 2010-11 | ಹುಬ್ಬಳ್ಳಿ | 4.94 ಕೋಟಿಗಳು | 12 ದಿನಗಳು |
| 4 | 2011-12 | ದಾವಣಗೆರೆ | 2.02 ಕೋಟಿಗಳು | 11 ದಿನಗಳು |

## ತರಬೇತಿ ಕಾರ್ಯಕ್ರಮಗಳು

*ಎಸ್‌ಜಿಎಸ್‌ವೈ ಯಡಿ ವಿವಿಧ ಚಟುವಟಿಕೆಗಳಲ್ಲಿ ತರಬೇತಿ ಪಡೆದ ಸ್ವರೋಜ್‌ಗಾರಿಗಳ ಸಂಖ್ಯೆ*

| ವರ್ಷ | ತರಬೇತಿ ಹೊಂದಿದವರ ಸಂಖ್ಯೆ | | | | | |
|---|---|---|---|---|---|---|
| 2008-09 | ಎಸ್‌ಸಿ | ಎಸ್‌ಟಿ | ಅಲ್ಪ ಸಂಖ್ಯಾತರು | ಮಹಿಳೆಯರು | ವಿಕಲಚೇತನರು | ಒಟ್ಟು |
| ಸ್ವಸಹಾಯ ಗುಂಪುಗಳ ಸ್ವರೋಜ್‌ಗಾರಿಗಳು | 26530 | 9713 | 8621 | 72378 | 1141 | 79698 |
| ವೈಯಕ್ತಿಕ | 458 | 194 | 248 | 1236 | 266 | 1750 |

| ವರ್ಷ | ತರಬೇತಿ ಹೊಂದಿದವರ ಸಂಖ್ಯೆ | | | | | |
|---|---|---|---|---|---|---|
| 2009-10 | ಎಸ್‌ಸಿ | ಎಸ್‌ಟಿ | ಅಲ್ಪ ಸಂಖ್ಯಾತರು | ಮಹಿಳೆಯರು | ವಿಕಲಚೇತನರು | ಒಟ್ಟು |
| ಸ್ವಸಹಾಯ ಗುಂಪುಗಳ ಸ್ವರೋಜ್‌ಗಾರಿಗಳು | 27640 | 10227 | 9011 | 74401 | 1026 | 89035 |
| ವೈಯಕ್ತಿಕ | 1094 | 345 | 323 | 1916 | 914 | 2923 |

| ವರ್ಷ | ತರಬೇತಿ ಹೊಂದಿದವರ ಸಂಖ್ಯೆ | | | | | |
|---|---|---|---|---|---|---|
| 2010-11 | ಎಸ್‌ಸಿ | ಎಸ್‌ಟಿ | ಅಲ್ಪ ಸಂಖ್ಯಾತರು | ಮಹಿಳೆಯರು | ವಿಕಲಚೇತನರು | ಒಟ್ಟು |
| ಸ್ವಸಹಾಯ ಗುಂಪುಗಳ ಸ್ವರೋಜ್‌ಗಾರಿಗಳು | 30194 | 10828 | 10531 | 78447 | 1158 | 92872 |
| ವೈಯಕ್ತಿಕ | 909 | 305 | 256 | 894 | 227 | 2591 |

| ವರ್ಷ | ತರಬೇತಿ ಹೊಂದಿದವರ ಸಂಖ್ಯೆ | | | | | |
|---|---|---|---|---|---|---|
| 2011-12 | ಎಸ್‌ಸಿ | ಎಸ್‌ಟಿ | ಅಲ್ಪ ಸಂಖ್ಯಾತರು | ಮಹಿಳೆಯರು | ವಿಕಲಚೇತನರು | ಒಟ್ಟು |
| ಸ್ವಸಹಾಯ ಗುಂಪುಗಳ ಸ್ವರೋಜ್‌ಗಾರಿಗಳು | 26243 | 7756 | 8731 | 70132 | 1168 | 78577 |
| ವೈಯಕ್ತಿಕ | 477 | 154 | 154 | 519 | 1087 | 1299 |

## ಎಸ್‌ಜಿಎಸ್‌ವೈ ನ ಪ್ರತ್ಯೇಕ ವಿಭಾಗಗಳಲ್ಲಿ ಭರಿಸಿದ ವೆಚ್ಚಗಳು

| ಕ್ರ. ಸಂ | ವರ್ಷ | ಅನುದಾನ (ಕೋಟಿ ಗಳಲ್ಲಿ) | ಮೂಲ | ವೆಚ್ಚ (ರೂ. ಕೋಟಿಗಳಲ್ಲಿ ) | ಉದ್ದೇಶ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | 2008-09 | 106.89 | ಭಾರತ ಸರ್ಕಾರ + ರಾಜ್ಯ ಸರ್ಕಾರ | 107.31 | 1. NGO ಫೆಸಿಲಿಟೇಟರ್<br>2. ಬೇಸಿಕ್ ಓರಿಯೆಂಟೇಶನ್ ಪ್ರೋಗ್ರಾಮ್<br>3. ಸ್ಕಿಲ್ ಡೆವೆಲಪ್‌ಮೆಂಟ್ ಪ್ರೋಗ್ರಾಮ್<br>4. ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್<br>5. ಮಾರ್ಕೆಟಿಂಗ್<br>6. ರಿವಾಲ್ವಿಂಗ್ ಫಂಡ್<br>7. ಸಬ್ಸಿಡಿ | ವೆಚ್ಚವು ಕಾಲಂ-6ರಲ್ಲಿ ತೋರಿಸಿದ ಉದ್ದೇಶಗಳಿಗಾಗಿ ಆಗಿದೆ |
| 2 | 2009-10 | 109.61 | ಭಾರತ ಸರ್ಕಾರ + ರಾಜ್ಯ ಸರ್ಕಾರ | 120.03 | -ಮೇಲಿನಂತೆ- | -ಮೇಲಿನಂತೆ- |

| | | | | | | |
|---|---|---|---|---|---|---|
| 3 | 2010–11 | 126.42 | ಭಾರತ ಸರ್ಕಾರ + ರಾಜ್ಯ ಸರ್ಕಾರ | 126.69 | –ಮೇಲಿನಂತೆ– | –ಮೇಲಿನಂತೆ– |
| 4 | 2011–12 | 115.65 | ಭಾರತ ಸರ್ಕಾರ + ರಾಜ್ಯ ಸರ್ಕಾರ | 120.13 | –ಮೇಲಿನಂತೆ– | –ಮೇಲಿನಂತೆ– |

**ವರದಿ–2:**

ಸ್ವ–ಸಹಾಯ ಗುಂಪುಗಳ ಹಾಗೂ ವೈಯಕ್ತಿಕ ಸ್ವರೋಜ್ಗಾರಿಗಳಿಗೆ ಬಿಡುಗಡೆಯಾದ ಸಹಾಯಧನ ಹಾಗೂ ಸಾಲಗಳ ವಿವರ ಈ ಕೆಳಕಂಡಂತಿವೆ.

**(ರೂ. ಕೋಟಿಗಳಲ್ಲಿ)**

| **ವರ್ಷ** | **ಸಾಲ** | | | **ಸಹಾಯಧನ** | | |
|---|---|---|---|---|---|---|
| | **ಗುಂಪುಗಳು** | **ವೈಯಕ್ತಿಕ** | **ಒಟ್ಟು** | **ಗುಂಪುಗಳು** | **ವೈಯಕ್ತಿಕ** | **ಒಟ್ಟು** |
| 2008–09 | 186.08 | 2.16 | 188.24 | 71.47 | 0.85 | 72.32 |
| 2009–10 | 191.45 | 4.58 | 196.03 | 76.24 | 1.72 | 77.96 |
| 2010–11 | 223.95 | 7.08 | 231.03 | 79.55 | 2.51 | 82.06 |
| 2011–12 | 204.61 | 6.92 | 211.53 | 72.62 | 2.34 | 74.96 |

**ಅಧ್ಯಾಯ–3**

**ಎಸ್‌ಜಿಎಸ್‌ವೈ ಯೋಜನೆಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಗಳನ್ನು ಆಯಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಡಿಆರ್‌ಡಿಎ ಪ್ರಾಧಿಕಾರದಲ್ಲೇ ನಡೆಸಲಾಗುತ್ತಿದೆ.**

**ಅಧ್ಯಾಯ–4**

**ಆಜೀವಿಕ – ನ್ಯಾಷನಲ್ ರೂರಲ್ ಲೈವ್ಲಿ ಹುಡ್ ಮಿಷನ್ (ಎನ್‌ಆರ್‌ಎಲ್‌ಎಂ) :** ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಎಸ್‌ಜಿಎಸ್‌ವೈ ಯೋಜನೆಯನ್ನು ಪುನರ್‌ರಚಿಸಿ **ಆಜೀವಿಕ –** ನ್ಯಾಷನಲ್ ರೂರಲ್ ಲೈವ್ಲಿ ಹುಡ್ ಮಿಷನ್ (ಎನ್‌ಆರ್‌ಎಲ್‌ಎಂ) 2010–11 ರಿಂದ ಜಾರಿಗೊಳಿಸಿದೆ. ಇದರನ್ವಯ ರಾಜ್ಯ ಸರ್ಕಾರವು ರಾಜ್ಯದಲ್ಲಿ ಆಜೀವಿಕ ಯೋಜನೆಯನ್ನು ಕರ್ನಾಟಕ ಸ್ಟೇಟ್ ರೂರಲ್ ಲೈವ್ಲಿಹುಡ್ ಪ್ರಮೋಷನ್ ಸೊಸೈಟಿ (ಕೆಎಸ್‌ಆರ್‌ಎಲ್‌ಪಿಎಸ್) ಯಿಂದ ಜಾರಿಗೊಳಿಸಲು ಆದೇಶ ಹೊರಡಿಸಿ ಸೊಸೈಟಿಯನ್ನು ನೋಂದಣಿ ಮಾಡಿಸಲಾಗಿದೆ. ರಾಜ್ಯ ಸರ್ಕಾರವು ಆಜೀವಿಕ ಯೋಜನೆಯನ್ನು " ಸಂಜೀವಿನಿ " ಎಂಬ ಹೆಸರಿನಲ್ಲಿ ಹಂತ ಹಂತವಾಗಿ ರಾಜ್ಯದಲ್ಲಿ ಜಾರಿಗೊಳಿಸಲಾಗುವುದು.

ಪ್ರಥಮ ಹಂತದಲ್ಲಿ, ರಾಜ್ಯದ 5 ಜಿಲ್ಲೆಗಳ 20 ತಾಲ್ಲೂಕುಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಅವುಗಳೆಂದರೆ,

(1) ಬೆಳಗಾವಿ ಜಿಲ್ಲೆಯ – ಅಥಣಿ, ಗೋಕಾಕ್, ಸವದತ್ತಿ, ಹುಕ್ಕೇರಿ
(2) ಧಾರವಾಡ ಜಿಲ್ಲೆಯ – ಕಲಘಟಗಿ, ಕುಂದಗೋಳ, ನವಲಗುಂದ
(3) ಗುಲ್ಬರ್ಗಾ ಜಿಲ್ಲೆಯ – ಗುಲ್ಬರ್ಗಾ, ಜೇವರ್ಗಿ, ಸೇಡಂ, ಆಳಂದ್
(4) ಮೈಸೂರು ಜಿಲ್ಲೆಯ – ಹೆಚ್.ಡಿ. ಕೋಟೆ, ಹುಣಸೂರು, ನಂಜನಗೂಡು, ಟಿ. ನರಸೀಪುರ ಹಾಗೂ
(5) ತುಮಕೂರು ಜಿಲ್ಲೆಯ – ಗುಬ್ಬಿ, ಕುಣಿಗಲ್, ಮಧುಗಿರಿ, ಪಾವಗಡ, ಕೊರಟಗೆರೆ.

ರಾಜ್ಯದ ಉಳಿದ ತಾಲ್ಲೂಕುಗಳಲ್ಲಿ ನಾನ್ ಇಂಟೆನ್ಸಿವ್ ಬ್ಲಾಕ್‌ಗಳಾಗಿ (non intensive block) ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

**ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂ.ಕೆ.ಎಸ್.ಪಿ)**

ಕೇಂದ್ರ ಸರ್ಕಾರವು ಎಂಕೆಎಸ್‌ಪಿ ಯೋಜನೆಯನ್ನು ಜಾರಿಗೊಳಿಸಿದ್ದು, ಈ ಯೋಜನೆಯು ಗ್ರಾಮೀಣ ಬಡವರಲ್ಲಿ ಅತಿ ಬಡವರಾದ ಮಹಿಳೆಯರಿಗೆ ಕೃಷಿಯಲ್ಲಿ ತರಬೇತಿ ನೀಡಿ, ಅವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಈ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75 : 25 ರ ಅನುಪಾತದಲ್ಲಿ ಅನುದಾನವನ್ನು ಭರಿಸುವುದು. ಕೇಂದ್ರ ಸರ್ಕಾರವು ತನ್ನ ಪಾಲಿನ ಶೇ.75 ರಷ್ಟು ಅನುದಾನವನ್ನು 25 : 50 : 25 ರಂತೆ ಮೂರು ಕಂತುಗಳಲ್ಲಿ ನೀಡುವುದು. ಕೇಂದ್ರ ಬಿಡುಗಡೆಗೊಳಿಸಿದ ಅನುದಾನಕ್ಕನುಗುಣವಾಗಿ ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನ (ಶೇ.25) ಬಿಡುಗಡೆಗೊಳಿಸುವುದು.

ಈ ಯೋಜನೆಯನ್ನು ಸರ್ಕಾರೇತರ ಸ್ವಯಂ ಸೇವಾ ಸಂಘಗಳ ಮೂಲಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುವುದು. ಮೊದಲಿಗೆ ಮೆ: ಗ್ರೀನ್ ಫೌಂಡೇಷನ್ ಸಂಸ್ಥೆಯ ವತಿಯಿಂದ ರಾಮನಗರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು ಒಟ್ಟು ರೂ.6.25 ಕೋಟಿಗಳ ಅನುಮೋದನೆ ನೀಡಿ, ಪ್ರಥಮ ಕಂತಿನ ಅನುದಾನ ರೂ.1.17 ಕೋಟಿ (ಶೇ.25 ರಷ್ಟು) ಗಳನ್ನು ಬಿಡುಗಡೆಗೊಳಿಸಿದೆ. ಇದಕ್ಕನುಗುಣವಾಗಿ ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನ ರೂ.0.39 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ.

## ಅಧ್ಯಾಯ-5

### 5.1 ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ

2011-12 ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ / ಸಿಬ್ಬಂದಿಗಳ ವಿವರ

| ಕ್ರ.ಸಂ | ವರ್ಗ | ಒಟ್ಟು ಅಧಿಕಾರಿ / ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾ | ಪ.ಪಂ. |
|---|---|---|---|---|---|---|
| 1 | ಎ | 2 | 1 | 1 | - | - |
| 2 | ಬಿ | 2 | - | 2 | - | - |
| 3 | ಸಿ | 13 | 10 | 3 | - | - |
| 4 | ಡಿ | 1 | 1 | - | 1 | - |
| | ಒಟ್ಟು | 18 | 12 | 6 | 1 | - |

### 5.2 2011-12 ನೇ ಸಾಲಿನಲ್ಲಿ ಖಾಲಿ ಇರುವ, ನಿವೃತ್ತಿಯಾದ / ನಿವೃತ್ತಿಯಾಗಲಿರುವ ವಿವರ

| ಕ್ರ.ಸಂ | ವರ್ಗ | ಖಾಲಿ ಹುದ್ದೆಗಳು | ನಿವೃತ್ತಿಯಾದವರು | ನಿವೃತ್ತಿಯಾಗಲಿರುವವರು |
|---|---|---|---|---|
| 1 | ಎ | 2 | - | - |
| 2 | ಬಿ | 1 | - | - |
| 3 | ಸಿ | 2 | - | - |
| 4 | ಡಿ | - | - | - |
| | ಒಟ್ಟು | 5 | - | - |

### 5.8 ವಿಧಾನಸಭಾ / ವಿಧಾನಪರಿಷತ್ / ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ವಿವರ:

| ವಿಧಾನಸಭಾ ಪ್ರಶ್ನೆಗಳು | | ವಿಧಾನಪರಿಷತ್ತಿನ ಪ್ರಶ್ನೆಗಳು | | ಗಮನ ಸೆಳೆಯುವ ಸೂಚನೆಗೆ ಉತ್ತರಗಳು | | ಮುಂದಿನ ಅಧಿವೇಶನದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು | |
|---|---|---|---|---|---|---|---|
| ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ವಿಧಾನ ಸಭಾ | ವಿಧಾನ ಪರಿಷತ್ |
| - | - | 2 | 2 | - | - | - | - |

### 5.9 ಮಾಹಿತಿ ಹಕ್ಕು ಅಧಿನಿಯಮ 2005

| ಸ್ವೀಕರಿಸಿದ ಒಟ್ಟು ಅರ್ಜಿಗಳು | ನಿಗದಿತ ಕಾಲಾವಧಿಯಲ್ಲಿ ಉತ್ತರಿಸಿದ ಅರ್ಜಿಗಳು | ಸ್ವೀಕರಿಸಿದ ಅರ್ಜಿ ಶುಲ್ಕ + ದಾಖಲೆ ಪ್ರತಿಗಳನ್ನು ನೀಡಲು ಸ್ವೀಕರಿಸಿದ ಮೊತ್ತ (ರೂ.ಗಳಲ್ಲಿ) | ಮೇಲ್ಮನವಿ ನಂತರ ಇತ್ಯರ್ಥಗೊಳಿಸಿದ ಅರ್ಜಿಗಳು | | ವಿಧಿಸಿದ ದಂಡ (ರೂ.ಗಳಲ್ಲಿ) |
|---|---|---|---|---|---|
| | | | ಮೇಲ್ಮನವಿ ಪ್ರಾಧಿಕಾರ ಇತ್ಯರ್ಥಗೊಳಿಸಿದ ಸಂಖ್ಯೆ | ಮಾಹಿತಿ ಹಕ್ಕು ಆಯೋಗದಿಂದ ಇತ್ಯರ್ಥಗೊಳಿಸಿದ ಸಂಖ್ಯೆ | |
| 20 | 20 | 200/- | - | - | - |

**ಅಧ್ಯಾಯ-6**

ಮಾಹಿತಿ ಹಕ್ಕು ಅಧಿನಿಯಮಕ್ಕೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಮಾಹಿತಿ ಕೋರಿ ಬಂದ ಮನವಿಗಳ ವಿವರ ಈ ಕೆಳಗಿನಂತಿವೆ.

| ಕ್ರ. ಸಂ | ವರ್ಷ | ಒಟ್ಟು ಅರ್ಜಿಗಳು | ವಿಲೇವಾರಿಯಾದ ಒಟ್ಟು ಅರ್ಜಿಗಳು |
|---|---|---|---|
| 1 | 2008-09 | 6 | 6 |
| 2 | 2009-10 | 21 | 21 |
| 3 | 2010-11 | 7 | 7 |
| 4 | 2011-12 | 20 | 20 |

* *

## 6.2 ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯಕ್ರಮ

**ಯೋಜನೆಯ ದೂರದೃಷ್ಟಿ, ನಿರ್ದಿಷ್ಟಪಡಿಸಿದ ಗುರಿ ಮತ್ತು ಉದ್ದೇಶಗಳು:**

ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಜೀತಪದ್ಧತಿಯನ್ನು ಗುರುತಿಸುವುದು ಮತ್ತು ಅವರುಗಳನ್ನು ಜೀತಪದ್ಧತಿಯಿಂದ ಬಿಡುಗಡೆಗೊಳಿಸಿ ಪುನರ್‌ವಸತಿ ಕಾರ್ಯಕ್ರಮಗಳನ್ನು ರೂಪಿಸುವುದು. ರಾಜ್ಯದ ಕಂದಾಯ ಇಲಾಖೆ ವ್ಯಾಪ್ತಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಆಯಾ ಪ್ರದೇಶಗಳಲ್ಲಿ ಚಾಲನೆಯಲ್ಲಿರುವ ಜೀತಪದ್ಧತಿಯನ್ನು ಗುರುತಿಸಿ, ಸದರಿ ವ್ಯಕ್ತಿಗಳನ್ನು ಜೀತಪದ್ಧತಿಯಿಂದ ಬಿಡುಗಡೆಗೊಳಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವಿವರಗಳನ್ನು ನೀಡುತ್ತಿದ್ದು ಜೀತವಿಮುಕ್ತರಿಗೆ ಪುನರ್‌ವಸತಿ ಕಾರ್ಯವನ್ನು ಈ ಇಲಾಖೆಯಿಂದ ತೆಗೆದುಕೊಳ್ಳಲಾಗುತ್ತಿದೆ. ಈ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಜೀತಕಾರ್ಮಿಕರನ್ನು ಹಾಗೂ ಬಾಲಜೀತ ಕಾರ್ಮಿಕರನ್ನು ಜೀತಪದ್ಧತಿಯಿಂದ ಬಿಡುಗಡೆಗೊಳಿಸಿದ ನಂತರ ಅವರುಗಳಿಗೆ ಆರ್ಥಿಕ ಸವಲತ್ತನ್ನು ಪುನರ್ವಸತಿ ರೂಪದಲ್ಲಿ ಕಲ್ಪಿಸುವ ಸಲುವಾಗಿ ಕೇಂದ್ರ ಸರ್ಕಾರವು ಕೇಂದ್ರ ಪುರಸ್ಕೃತ ಪುನರ್ವಸತಿ ಕಾರ್ಯಯೋಜನೆ ಎಂಬ ಯೋಜನೆಯನ್ನು 1978ರಲ್ಲಿ ಜಾರಿಗೆ ತಂದಿರುತ್ತದೆ ಹಾಗೂ ಈ ಯೋಜನೆಯನ್ನು 2000ನೇ ಸಾಲಿನ ಮೇ ತಿಂಗಳಲ್ಲಿ ಪರಿಷ್ಕೃತಗೊಳಿಸಿರುತ್ತದೆ. ಈ ಯೋಜನೆಯಡಿ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 50:50ರ ಅನುಪಾತದಲ್ಲಿ ಭರಿಸಬೇಕಾಗಿರುತ್ತದೆ. ಅಂದರೆ ಪ್ರತಿ ಜೀತವಿಮುಕ್ತನಿಗೆ/ಬಾಲಜೀತ ವಿಮುಕ್ತನಿಗೆ 20,000/- (ಇಪ್ಪತ್ತು ಸಾವಿರ) ರೂಪಾಯಿಗಳನ್ನು ಪುನರ್‌ವಸತಿಗಾಗಿ ಬಿಡುಗಡೆ ಮಾಡಬೇಕಾಗಿದ್ದು,

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಲಾ 10,000/-ಗಳನ್ನು ತನ್ನ ಪಾಲಿನ ಅನುದಾನವಾಗಿ ಬಿಡುಗಡೆ ಮಾಡಲಿದೆ. ಈ ಪೈಕಿ 1,000/-ರೂ.ಗಳನ್ನು ನಗದು ರೂಪದಲ್ಲಿ ತಕ್ಷಣ ಬಿಡುಗಡೆ ಮಾಡಲಾಗುವುದು. ನಂತರ ರೂ.19,000/- ಗಳ ಮೌಲ್ಯದ ವಸ್ತುರೂಪದಲ್ಲಿ ಪುನರ್‌ವಸತಿಯನ್ನು ಕಲ್ಪಿಸಲಾಗುವುದು. ಈ ಯೋಜನೆಯಡಿ ಜೀತವಿಮುಕ್ತರಿಗೆ ಸಾಕು ಪ್ರಾಣಿಗಳನ್ನು, ಕೃಷಿ ಜಮೀನು, ಕುಶಲ ಸಾಮಾಗ್ರಿಗಳನ್ನು ಕೃಷಿ ಆಧಾರಿತ ವಾಹನ, ಪೆಟ್ಟಿ (ವ್ಯಾಪಾರ) ಅಂಗಡಿ ಇತ್ಯಾದಿ ಸೌಲಭ್ಯಗಳನ್ನು ವಸ್ತು ರೂಪದಲ್ಲಿ ಒದಗಿಸುವ ಮುಖಾಂತರ ಪುನರ್‌ವಸತಿಯನ್ನು ಕಲ್ಪಿಸಲಾಗುವುದು.

ಈ ಯೋಜನೆಯ ಮಾರ್ಗಸೂಚಿಯನ್ವಯ, ಜಿಲ್ಲಾಧಿಕಾರಿಗಳು/ಕಂದಾಯ ಉಪ ವಿಭಾಗಾಧಿಕಾರಿಗಳು ಜೀತ ಕಾರ್ಮಿಕರು/ಬಾಲಜೀತ ಕಾರ್ಮಿಕರುಗಳನ್ನು ಪತ್ತೆ ಹಚ್ಚಿ ಜೀತಪದ್ಧತಿಯಿಂದ ಬಿಡುಗಡೆಗೊಳಿಸಿದ ನಂತರ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪುನರ್‌ವಸತಿಗೊಳಿಸಬೇಕಾದ ಜೀತವಿಮುಕ್ತರ ಬಗ್ಗೆ ನಿಗದಿತ ಚೆಕ್‌ಲಿಸ್ಟ್‌ನಲ್ಲಿ ಪ್ರಸ್ತಾವನೆಯನ್ನು ಹಾಗೂ ಈ ಸಂಬಂಧ ರಚಿತವಾಗಿರುವ ಜಿಲ್ಲಾ ಮಟ್ಟದ ಪರಾಮರ್ಶಕ ಸಮಿತಿ ಸಭೆ ನಡವಳಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಅನಂತರ ರಾಜ್ಯ ಸರ್ಕಾರವು ಅಂತಹ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕಾಗುತ್ತದೆ. ಈ ಪ್ರಸ್ತಾವನೆ ಮೇರೆಗೆ ಕೇಂದ್ರ ಸರ್ಕಾರವು ತಮ್ಮ ಪಾಲಿನ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡುವುದು. ಅನಂತರ ರಾಜ್ಯ ಸರ್ಕಾರವು ಕೇಂದ್ರ ಪಾಲಿನ ಅನುದಾನದೊಂದಿಗೆ ತನ್ನ ಪಾಲಿನ ಅನುದಾನವನ್ನು ಸೇರಿಸಿ ಒಟ್ಟು ಪುನರ್‌ವಸತಿ ಪರಿಹಾರಧನವನ್ನು ಅನುಷ್ಠಾನಾಧಿಕಾರಿಗಳಿಗೆ (ಜಿಲ್ಲಾ ಪಂಚಾಯಿತಿಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ) ಬಿಡುಗಡೆ ಮಾಡಲಾಗುವುದು.

ಮೇಲ್ಕಂಡಂತೆ, ಜೀತವಿಮುಕ್ತರುಗಳಿಗೆ ಪುನರ್‌ವಸತಿ ಸೌಲಭ್ಯವನ್ನು ಒದಗಿಸುವ ಕಾರ್ಯವು ಇನ್ನು ರೂಪುಗೊಳ್ಳುತ್ತಿರುವ ಸಮಯದಲ್ಲಿ ಅವರುಗಳು ಹೊಸ ಸಾಲಗಳಿಗೆ ಮತ್ತೆ ಮಾರುಹೋಗದಂತೆ ತಡೆಯುವ ಸಲುವಾಗಿ ಹಾಗೂ ಜೀತಪದ್ಧತಿಯಿಂದ ಬಿಡುಗಡೆಗೊಂಡ ಕೂಡಲೇ ಅವರುಗಳಿಗೆ ಕನಿಷ್ಠ ಅರ್ಥಿಕ ಸವಲತ್ತನ್ನು ಮಾಹೆಯಾನ ಒದಗಿಸುವ ದೃಷ್ಟಿಯಿಂದ, ರಾಜ್ಯ ಪುರಸ್ಕೃತ ಜೀತವಿಮುಕ್ತರ ಪುನರ್‌ವಸತಿ ಸಹಾಯಧನ ಎಂಬ ಹೊಸ ಯೋಜನೆಯನ್ನು ದಿನಾಂಕ:21/01/2006ರ ತರುವಾಯ ಜೀತಪದ್ಧತಿಯಿಂದ ಬಿಡುಗಡೆಗೊಳಿಸಿದ ಈ ರಾಜ್ಯದ ಪ್ರತಿ ಜೀತವಿಮುಕ್ತನಿಗೆ ಜೀತಪದ್ಧತಿಯಿಂದ ಬಿಡುಗಡೆಗೊಂಡ ದಿನದಿಂದ ಮೊದಲ 2 ವರ್ಷಗಳ ಅಂದರೆ 24 ತಿಂಗಳುಗಳ ಅವಧಿಗೆ ಮಾತ್ರ ಮಾಹೆಯಾನ ರೂ.300/- (ಮೂರು ನೂರು ಮಾತ್ರ) ಗಳನ್ನು ಸಹಾಯಧನ ರೂಪದಲ್ಲಿ ಪಾವತಿಸಲಾಗುವುದು. ಜೀತ ಪದ್ಧತಿಯಿಂದ ಬಿಡುಗಡೆಗೊಳಿಸಿದವರ ಮಾಹಿತಿಯನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿದ ನಂತರ, ಈ ಸಹಾಯಧನವನ್ನು ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯಿತಿಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ) ಬಿಡುಗಡೆ ಮಾಡಲಾಗುವುದು. ಅನಂತರ ಸದರಿ ಸಹಾಯಧನವನ್ನು ಸಂಬಂಧಪಟ್ಟ ಜೀತವಿಮುಕ್ತರುಗಳಿಗೆ ಅವರ ಸ್ಥಳೀಯ ಬ್ಯಾಂಕ್ ಉಳಿತಾಯ ಖಾತೆಗಳಿಗೆ ಮಾಹೆಯಾನ ಜಮೆ ಮಾಡುವ ಮೂಲಕ ಪಾವತಿಸಲಾಗುವುದು.

ರಾಜ್ಯದಲ್ಲಿ ಜೀತದಾಳುಗಳನ್ನು ಗುರುತಿಸಲು ಮರು ಸಮೀಕ್ಷೆ ಕಾರ್ಯವನ್ನು ಪ್ರತಿ 3 ವರ್ಷಕ್ಕೊಮ್ಮೆ ಕೈಗೊಳ್ಳಬೇಕಾಗಿರುತ್ತದೆ. ಕೇಂದ್ರ ಸರ್ಕಾರವು ಪ್ರತಿ ಜಿಲ್ಲೆಗೆ 2 ಲಕ್ಷಗಳಂತೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುತ್ತದೆ. ಈ ಹಿಂದೆ 2000-01ನೇ ಮತ್ತು 2001-02ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮರು ಸಮೀಕ್ಷೆಯನ್ನು ನಡೆಸಲಾಗಿದ್ದು, ತದನಂತರ 2010-11ನೇ ಸಾಲಿನವರೆಗೆ ಸಮೀಕ್ಷೆ ಕಾರ್ಯವು ನಡೆದಿರುವುದಿಲ್ಲ. 2011-12ನೇ ಸಾಲಿನಲ್ಲಿ ಕೇಂದ್ರ ಕಾರ್ಮಿಕ ಮಂತ್ರಾಲಯವು ರಾಜ್ಯದ 30 ಜಿಲ್ಲೆಗಳಿಗೆ ಒಟ್ಟು 60 ಲಕ್ಷಗಳ ಅನುದಾನವನ್ನು ದಿನಾಂಕ:28/03/2012ರಂದು ಬಿಡುಗಡೆಗೊಳಿಸಿರುತ್ತದೆ. ಈ ಅನುದಾನವನ್ನು 2012-13ನೇ ಸಾಲಿನಲ್ಲಿ ರಾಜ್ಯದ ಜಿಲ್ಲಾಧಿಕಾರಿಗಳಿಗೆ ಮರು ಬಿಡುಗಡೆಗೊಳಿಸಲಾಗುವುದು.

ಈ ಕಾರ್ಯಕ್ರಮಕ್ಕಾಗಿ ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯ ಯೋಜನೆಯಡಿ ಜಿಲ್ಲೆಗಳಿಗೆ ಬಿಡುಗಡೆಗೊಳಿಸಿರುವ ಅನುದಾನದ ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಜಿಲ್ಲೆಯ ಹೆಸರು | ಜೀತ ದಾಳುಗಳ ಸಂಖ್ಯೆ | ಕೇಂದ್ರ ಸರ್ಕಾರವು 2011-12ನೇ ಸಾಲಿನಲ್ಲಿ ಬಿಡುಗಡೆ ಗೊಳಿಸಿರುವ ತನ್ನ ಪಾಲಿನ ಪುನರ್ವಸತಿ ಅನುದಾನ | ರಾಜ್ಯ ಸರ್ಕಾರವು ಕೇಂದ್ರದ ಪಾಲಿನ ಅನುದಾನವನ್ನು ನಿರೀಕ್ಷಿಸಿ ರಾಜ್ಯದ ಆಯ್ಯವಯದಿಂದ 2010-11ನೇಸಾಲಿನಲ್ಲಿ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ಕೇಂದ್ರ ಹಾಗೂ ರಾಜ್ಯ ಪಾಲಿನ ಪುನರ್ವಸತಿ ಅನುದಾನ | ರಾಜ್ಯ ಸರ್ಕಾರವು 2011-12ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನವನ್ನು ಕಲು 4ಕ್ಕೆ ಪೂರಕವಾಗಿ ಬಿಡುಗಡೆ ಗೊಳಿಸಿರುವ ಪುನರ್ವಸತಿ ಅನುದಾನ |
|---|---|---|---|---|---|
| **1** | **2** | **3** | **4** | **5** | **6** |
| 1. | ಬೆಂಗಳೂರು (ಗ್ರಾ) | 25 | 2.50 | 5.00 | - |
| 2. | ಕೊಡಗು | 01 | 0.10 | 0.20 | - |
| 3. | ಮೈಸೂರು | 31 | 3.10 | 6.20 | - |
| 4. | ತುಮಕೂರು | 04 | 0.40 | 0.80 | - |
| 5. | ದಾವಣಗೆರೆ | 12 | 1.20 | - | 2.40 |
| | **ಒಟ್ಟು** | **73** | **7.30** | **12.20** | **2.40** |

**ರಾಜ್ಯ ಸರ್ಕಾರದ ಜೀತವಿಮುಕ್ತರ ಪುನರ್‌ವಸತಿ ಸಹಾಯಧನ ಯೋಜನೆಯಡಿ ಬಿಡುಗಡೆಗೊಳಿಸಿರುವ ಅನುದಾನ (20/03/2012 ರನ್ವಯ)**

| ಕ್ರ. ಸಂ | ಜಿಲ್ಲೆಯ ಹೆಸರು | ಜೀತ ದಾಳುಗಳ ಸಂಖ್ಯೆ | 24 ತಿಂಗಳ ಅವಧಿಗೆ ಬಿಡುಗಡೆಗೊಳಿಸಿರುವ ಅನುದಾನ (ಪ್ರತಿ ತಿಂಗಳಿಗೆ ರೂ. 300/– ರಂತೆ) | | | | | | | |
|---|---|---|---|---|---|---|---|---|---|---|
| | | | 2005–06 | 2006–07 | 2007–08 | 2008–09 | 2009–10 | 2010–11 | 2011–12 | ಒಟ್ಟು ಮೊತ್ತ |
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಗುಲ್ಬರ್ಗಾ | 10 | 3000 (1) | 6000(2) 30000 (10) | 33000 (11) | 0 | 0 | 0 | | 72000 |
| 2 | ಬೆಂಗಳೂರು (ಗ್ರಾ) | 1 | 0 | 0 | 3300 (11) | 3600 (12) | 300 (1) | 0 | | 7200 |
| 3 | ಮೈಸೂರು | 10 | 0 | 0 | 15000(5) | 36000 (12) | 21000 (7) | 0 | | 72000 |
| 4 | ದಾವಣಗೆರೆ | 12 | 0 | 0 | 0 | 36000 (10) | 43200 (12) | 7200(2) | | 86400 |
| 5 | ಬಳ್ಳಾರಿ | 1 | 0 | 0 | 0 | 0 | 3600(12) | 3600(12) | | 7200 |
| 6 | ಗದಗ | 7 | 0 | 0 | 0 | 0 | 0 | 50400 (24) | | 50400 |
| 7 | ಚಿಕ್ಕಮಗಳೂರು | 3 | 0 | 0 | 0 | 0 | 0 | 21600 (24) | | 21600 |
| 8 | ಚಿತ್ರದುರ್ಗ | 1 | 0 | 0 | 0 | 0 | 0 | 7200 (24) | | 7200 |
| 9 | ಮಂಡ್ಯ | 2 | 0 | 0 | 0 | 0 | 0 | 14400 (24) | | 14400 |
| 10 | ರಾಮನಗರ | 8+6+1 | 0 | 0 | 0 | 0 | 0 | 100800 (24) | 7200 (24) | 108000 |
| 11 | ಚಿಕ್ಕಬಳ್ಳಾಪುರ | 338 | 0 | 0 | 0 | 0 | 0 | 0 | 2433600 (24) | 2433600 |
| | **ಒಟ್ಟು** | **400** | **3000** | **36000** | **51300** | **75600** | **68100** | **205200** | **2440800** | **2880000** |

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಜೀತಪದ್ಧತಿ ಹಾಗೂ ಬಾಲಕಾರ್ಮಿಕರ ಪದ್ಧತಿಗಾಗಿ 2011ರ ಡಿಸೆಂಬರ್ 17 & 18ರಂದು ಎರಡು ದಿನಗಳ ಕಾರ್ಯಾಗಾರವನ್ನು ಕಾರ್ಮಿಕ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಯೋಗದಿಂದ ಬೆಂಗಳೂರಿನಲ್ಲಿ ನಡೆಸಲಾಗಿರುತ್ತದೆ. ಸದರಿ ಕಾರ್ಯಾಗಾರದಲ್ಲಿ ಜಿಲ್ಲಾ ದಂಡಾಧಿಕಾರಿಗಳು, ಉಪವಿಭಾಗೀಯ ದಂಡಾಧಿಕಾರಿ, ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕರ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ಸಿವಿಲ್ ನ್ಯಾಯಾಧೀಶರುಗಳು ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರುಗಳು, ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಹಾಜರಿದ್ದು ಕಾರ್ಯಗಾರವನ್ನು ಪರಿಣಾಮಕಾರಿ ಚರ್ಚೆಗಳೊಂದಿಗೆ ನಡೆಸಲಾಯಿತು.

* *

## 6.3 ಗ್ರಾಮೀಣ ಇಂಧನ ಕಾರ್ಯಕ್ರಮಗಳು

ಕರ್ನಾಟಕ ರಾಜ್ಯವು ಗ್ರಾಮೀಣ ಅಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖಾಂತರ ಗ್ರಾಮೀಣ ಇಂಧನ ಕಾರ್ಯಕ್ರಮದಡಿ ಈ ಕೆಳಕಂಡ 3 ಪ್ರಮುಖವಾದ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

1. ರಾಷ್ಟ್ರೀಯ ಜೈವಾನಿಲ ಅಭಿವೃದ್ದಿ ಕಾರ್ಯಕ್ರಮ
2. ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ – 2009
3. ಸೌರ ಬೆಳಕು

### 1. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ

ರಾಷ್ಟ್ರೀಯ ಜೈವಾನಿಲ ಅಭಿವೃಧ್ಧಿ ಕಾರ್ಯಕ್ರಮವು ಕೇಂದ್ರ ಪುರಸ್ಕೃತ ಕಾರ್ಯಕ್ರಮವಾಗಿದ್ದು, 1982–83ನೇ ಸಾಲಿನಿಂದ ಇದುವರೆವಿಗೂ ಅನುಷ್ಠಾನಗೊಳ್ಳಲಾಗುತ್ತಿದ್ದು, ಶೇ.100 ಮಹಿಳೆಯರಿಗಾಗಿಯೇ ಇರುವ ಕಾರ್ಯಕ್ರಮವಾಗಿರುತ್ತದೆ.

**ಲೆಕ್ಕ ಶೀರ್ಷಿಕೆ:**

1. 2810–00–101–0–01 ( ಯೋಜನೆ)
2. 2810–00–101–092 (ಅನಿಲ ಯೋಜನೆ)

**ಕಾರ್ಯಕ್ರಮದ ಧ್ಯೇಯೋದ್ದೇಶಗಳು**

1. ರಾಜ್ಯದಲ್ಲಿ ಗ್ರಾಮೀಣ ಇಂಧನ ಕಾರ್ಯಕ್ರಮಗಳು ನವೀಕರಿಸಬಹುದಾದ ಶಕ್ತಿ ಮೂಲಗಳ ಗುಣಾತ್ಮಕ ಮತ್ತು ಪರಿಣಾಮಕಾರಿ ಬಳಕೆಯ ಮೂಲ ಉದ್ದೇಶವನ್ನು ಹೊಂದಿದೆ.
2. ಬದಲಾದ ಪರಿಸ್ಥಿತಿಯಲ್ಲಿ ಶತಮಾನಗಳಿಂದ ಉಪಯೋಗಿಸುತ್ತ ಬಂದಿರುವ ಸಂಪ್ರದಾಯಬದ್ಧ ಇಂಧನ ಶಕ್ತಿಗಳ ಕೊರತೆಯಿಂದ ವಿಫುಲವಾಗಿ ದೊರೆಯುವ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳ ಉತ್ಪಾದನೆ ಕಡೆಗೆ ವಾಲುವುದು ಸಹಜ ಹಾಗೂ ಇದು ಗಾಳಿಯಲ್ಲಿ ಇಂಗಾಲಾಮ್ಲದ ಪ್ರಮಾಣ ಹೆಚ್ಚುವುದನ್ನು ತಡೆಗಟ್ಟುವಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತದೆ.
3. ಜೈವಾನಿಲವು ಸ್ವಚ್ಛ, ಮಾಲಿನ್ಯ ಹೊಗೆರಹಿತ ಹಾಗೂ ಸ್ಫೋಟಗೊಳ್ಳದ ಅಪಾಯರಹಿತ ಇಂಧನ ತ್ಯಾಜ್ಯ ವಸ್ತುಗಳಾದ ಸಗಣಿ, ಪ್ರಾಣಿ ಮತ್ತು ಮಾನವ ಮಲಮೂತ್ರ ಮತ್ತು ಇತರೆ ಸಸ್ಯಜನ್ಯ ಪದಾರ್ಥಗಳನ್ನು ಆಮ್ಲಜನಕ ರಹಿತ ವಾತಾವರಣದಲ್ಲಿನ ಜೈವಿಕ ಕ್ರಿಯೆಯಿಂದ ದೊರೆಯುವ ಸಂಯುಕ್ತ ಅನಿಲವೇ ಜೈವಿಕ ಅನಿಲ.
4. ಈ ಪ್ರಕ್ರಿಯೆಯಲ್ಲಿ ಜಾನುವಾರುಗಳ ಸಗಣಿ ಕ್ರೋಢೀಕರಿಸುವುದು, ಉತ್ಪಾದನೆ, ಸರಬರಾಜು ಮತ್ತು ಜೀರ್ಣವಾದ ಸಗಣಿಯ ಬಗ್ಗಡವನ್ನು ಕೃಷಿಗೆ ಉಪಯೋಗಿಸುವ ಅಂಶಗಳನ್ನು ಒಳಗೊಂಡಿರುತ್ತದೆ.

**ಸಹಾಯಧನ :**

ಕೇಂದ್ರ ಸರ್ಕಾರವು ಕೇಂದ್ರ ಸಹಾಯಧನವನ್ನು 1ನೇ ನವೆಂಬರ್ 2009 ರಿಂದ ಜಾರಿಗೆ ಬರುವಂತೆ ಸಾಮಾನ್ಯವಾಗಿ ನಿರ್ಮಿಸಲಾಗುವ 2 ಘ.ಮೀ ಅನಿಲ ಸ್ಥಾವರವೊಂದಕ್ಕೆ ಈ ಕೆಳಗಿನಂತೆ ಸಹಾಯಧನವನ್ನು ಪರಿಷ್ಕರಿಸಲಾಗಿರುತ್ತದೆ

| | ಪರಿಷ್ಕೃತ ದರ |
|---|---|
| ಕೇಂದ್ರ ಸಹಾಯಧನ | 8000/- |
| ಟರ್ನ್ ಕೀ ಫೀ | 1500/- |
| ಶೌಚಾಲಯ ಸಂಪರ್ಕಿತ ಅನಿಲ ಸ್ಥಾವರಗಳಿಗೆ ಪ್ರೋತ್ಸಾಹಧನ | 1000/- |

ರೂ.3500/- ರಂತೆ ಪ್ರತಿ ಅನಿಲ ಸ್ಥಾವರಕ್ಕೆ ರಾಜ್ಯ ಸಹಾಯಧನ ನೀಡಲಾಗುತ್ತಿದೆ.

**ಅನುಷ್ಠಾನ :**

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿನ ಜಾನುವಾರುಗಳ ಸಂಖ್ಯೆಯ ಆಧಾರದ ಮೇಲೆ 6.80 ಲಕ್ಷ ಜೈವಾನಿಲ ಸ್ಥಾವರಗಳನ್ನು ನಿರ್ಮಿಸಲು ಅವಕಾಶವಿರುತ್ತದೆ. ಈ ಪೈಕಿ 2011-12ನೇ ಸಾಲಿನ ಮಾರ್ಚ್ 2012ರ ಅಂತ್ಯಕ್ಕೆ 4.078ಲಕ್ಷ ಅನಿಲ ಸ್ಥಾವರಗಳನ್ನು ನಿರ್ಮಿಸಲಾಗಿದೆ.

ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಅನುದಾನ :**

2011-12ನೇನೇ ಸಾಲಿನಲ್ಲಿ ರಾಜ್ಯ ಆಯವ್ಯಯದಡಿ ರಾಜ್ಯ ಸಹಾಯಧನ ರೂ.120.00+292.05 ಮತ್ತು ಕೇಂದ್ರ ಸಹಾಯಧನ ರೂ.1211.15 ಲಕ್ಷಗಳನ್ನು ಒದಗಿಸಲಾಗಿದ್ದು, ಈ ಪೈಕಿ ಮಾರ್ಚ್ 2012 ಅಂತ್ಯದವರೆಗೆ ರೂ.1359.93 ಲಕ್ಷಗಳನ್ನು ಕೇಂದ್ರ ಹಾಗೂ ರಾಜ್ಯ ಸಹಾಯಧನವನ್ನಾಗಿ ಬಿಡುಗಡೆ ಮಾಡಲಾಗಿದೆ.

**ಕಾರ್ಯಕ್ರಮದ ಆರ್ಥಿಕ ಮತ್ತು ಭೌತಿಕ ಪ್ರಗತಿ ವರದಿ :**

| ವರ್ಷ | ಭೌತಿಕ ( ಸಂಖ್ಯೆಗಳಲ್ಲಿ) | | ಆರ್ಥಿಕ (ರೂ.ಲಕ್ಷಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ (ಸಂಖ್ಯೆ ಗಳಲ್ಲಿ) | ಗುರಿ (ಕೇಂದ್ರ+ರಾಜ್ಯ) | ಸಾಧನೆ (ಕೇಂದ್ರ+ರಾಜ್ಯ) |
| 2007-08 | 4000 | 4573 | 756.50 | 337.57 |
| 2008-09 | 10000 | 6579 | 645.29+120.00 | 557.90 |
| 2009-10 | 10000 | 6954 | 841.33+120.00 | 693.37 |
| 2010-11 | 16000 | 12902 | 1463.08 +120.00 | 997.79 |
| 2011-12(ಮಾರ್ಚ್ 2012ರ ಪ್ರಗತಿಯನ್ವಯ) | 15000 | 10863 | 1503.20+120.00 | 1359.93 |

**ಮೌಲ್ಯಮಾಪನ :**

ಮೌಲ್ಯಮಾಪನ ಕಾರ್ಯವನ್ನು TERI ಸಂಸ್ಥೆಯವರಿಗೆ ವಹಿಸಿಕೊಡಲಾಗಿದೆ.

**2. ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ–2009**

ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿಯನ್ನು 1ನೇ ಮಾರ್ಚ್ 2009 ರಿಂದ ಜಾರಿಗೊಳಿಸಲಾಗಿದ್ದು, ರಾಜ್ಯ ಯೋಜನೆಯಾಗಿರುತ್ತದೆ.

**ಲೆಕ್ಕ ಶೀರ್ಷಿಕೆ :**

**2501–04–105–0–03–059(ಯೋಜನೆ)**

**ಅನುಷ್ಠಾನ :**

ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿಯನ್ನು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

**ಅನುದಾನ :**

2011–12ನೇ ಸಾಲಿನಲ್ಲಿ ರೂ.1000.00 ಲಕ್ಷಗಳನ್ನು ಆಯವ್ಯಯದಡಿ ಒದಗಿಸಲಾಗಿದ್ದು, ಈ ಪೈಕಿ ರೂ.750.00 ಲಕ್ಷಗಳನ್ನು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಚಟುವಟಿಕೆಗಳಿಗಾಗಿ ಬಿಡುಗಡೆ ಮಾಡಲಾಗಿದೆ.

**ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವಿವರ :**

ಮಂಡಳಿಯು ಒಬ್ಬ ವ್ಯವಸ್ಥಾಪಕ ನಿರ್ದೇಶಕರನ್ನು ಹೊಂದಿರುತ್ತದೆ.

**3 . ಸೌರಬೆಳಕು (ಗ್ರಾಮ ಪಂಚಾಯಿತಿಗಳಲ್ಲಿ ಸೌರ ಬೀದಿ ದೀಪಗಳ ಅಳವಡಿಕೆ)**

ಸೌರ ಬೆಳಕು ಯೋಜನೆಯು ರಾಜ್ಯ ಯೋಜನೆಯಾಗಿರುತ್ತದೆ. 2009–10ನೇ ಸಾಲಿನಿಂದ ಗ್ರಾಮ ಪಂಚಾಯಿತಿಗಳಲ್ಲಿ ಸೌರ ಬೀದಿ ದೀಪಗಳ ಅಳವಡಿಕೆ ಕುರಿತ ಯೋಜನೆಗೆ **ಸೌರ ಬೆಳಕು** ಎಂಬ ಹೆಸರಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

**ಲೆಕ್ಕ ಶೀರ್ಷಿಕೆ**

**2810–01–198–1–01 (ಯೋಜನೆ)**

**ಅನುಷ್ಠಾನ :**

ರಾಜ್ಯದ ಪ್ರತಿ ಕಂದಾಯ ವಿಭಾಗಕ್ಕೆ ಒಂದು ಜಿಲ್ಲೆಯಂತೆ 4 ಕಂದಾಯ ವಿಭಾಗ ಹಾಗೂ ವಿಶೇಷವಾಗಿ ಬೆಳಗಾಂ ಜಿಲ್ಲಾ ಪಂಚಾಯತ್( ಕಿತ್ತೂರು ರಾಣಿ ಸೈನಿಕ ಶಾಲೆಯನ್ನೊಳಗೊಂಡಂತೆ) 5 ಪ್ರಾಯೋಗಿಕ ಜಿಲ್ಲೆಗಳನ್ನು ಆಯ್ಕೆ ಮಾಡಿ ಕಾರ್ಯಕ್ರಮವನ್ನು ಇ–ಪ್ರಕ್ಯೂರ್‌ಮೆಂಟ್ ಯಡಿ ಅನುಷ್ಠಾನಗೊಳಿಸಲಾಗುತ್ತಿದೆ.

**ಅನುದಾನ :**

2011–12ನೇ ಸಾಲಿನ ರಾಜ್ಯ ಆಯವ್ಯಯದಡಿ ರೂ.310.00 ಲಕ್ಷಗಳನ್ನು ಒದಗಿಸಲಾಗಿದ್ದು, ಈ ಪೈಕಿ ರೂ.310.00 ಲಕ್ಷಗಳನ್ನು ಮಾತ್ರ ಪ್ರಾಯೋಗಿಕ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

**ಸೌರಬೆಳಕು ಯೋಜನೆಯ ಭೌತಿಕ ಹಾಗೂ ಆರ್ಥಿಕ ಪ್ರಗತಿ 2009–10, 2010–11 ಮತ್ತು 2011–12 :**

**2009–2010**

| ಕ್ರ. ಸಂ | ಪ್ರಾಯೋಗಿಕ ಜಿಲ್ಲೆ | ವಾರ್ಷಿಕ ಗುರಿ | | ಸಾಧನೆ | |
|---|---|---|---|---|---|
| | | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ. ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ ಗುರಿ (ರೂ. ಲಕ್ಷಗಳಲ್ಲಿ) |
| 1 | ಬಾಗಲಕೋಟೆ | 178 | 50.00 | 178 | 50.00 |
| 2 | ಬಳ್ಳಾರಿ | 178 | 50.00 | 178 | 50.00 |
| 3 | ದಕ್ಷಿಣ ಕನ್ನಡ | 178 | 50.00 | 219 | 50.00 |
| 4 | ಶಿವಮೊಗ್ಗ | 180 | 50.00 | 204 | 50.00 |
| **ಒಟ್ಟು** | | **714** | **200.00** | **779** | **200.00** |

**2010-11**

| ಕ್ರ.ಸಂ | ಪ್ರಾಯೋಗಿಕ ಜಿಲ್ಲೆ | ನಿಗದಿ ಪಡಿಸಲಾದ ಗುರಿ | | ಸಾಧಿಸಿದ ಪ್ರಗತಿ (ತಾತ್ಕಾಲಿಕ) | |
|---|---|---|---|---|---|
| | | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ. ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ. ಲಕ್ಷಗಳಲ್ಲಿ) |
| 1 | ಚಾಮರಾಜನಗರ | 180 | 50.00 | 180 | 50.00 |
| 2 | ಧಾರವಾಡ | 180 | 50.00 | 180 | 50.00 |
| 3 | ರಾಯಚೂರು | 180 | 50.00 | 180 | 50.00 |
| 4 | ಕೋಲಾರ | 180 | 50.00 | 0 | 12.50 |
| **ಒಟ್ಟು** | | **720** | **200.00** | **540** | **162.50** |

**2011-12**

| ಕ್ರ.ಸಂ | ಪ್ರಾಯೋಗಿಕ ಜಿಲ್ಲೆ | ನಿಗದಿ ಪಡಿಸಲಾದ ಗುರಿ | | ಸಾಧಿಸಿದ ಪ್ರಗತಿ (ತಾತ್ಕಾಲಿಕ) | |
|---|---|---|---|---|---|
| | | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ. ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) |
| 1 | ಬೆಳಗಾಂ | 458 | 110.00 | 458 | 110.00 |
| 2 | ಚಿತ್ರದುರ್ಗ | 208 | 50.00 | 252 | 50.00 |
| 3 | ಧಾರವಾಡ | 208 | 50.00 | 257 | 50.00 |
| 4 | ಕೊಪ್ಪಳ | 208 | 50.00 | 208 | 50.00 |
| 5 | ಮೈಸೂರು | 208 | 50.00 | 224 | 50.00 |
| **ಒಟ್ಟು** | | **1290** | **310.00** | **1399** | **310.00** |

* * *

## 6.4 ಮಹಾತ್ಮಗಾಂಧಿ ಪ್ರಾದೇಶಿಕ ಗ್ರಾಮೀಣ ಇಂಧನ & ಅಭಿವೃದ್ಧಿ ಸಂಸ್ಥೆ, ಜಕ್ಕೂರು

**ಯೋಜನೆಯ ದೂರದೃಷ್ಟಿ, ನಿರ್ದಿಷ್ಟಪಡಿಸಿದ ಗುರಿ ಮತ್ತು ಉದ್ದೇಶಗಳು:**

ಗ್ರಾಮೀಣ ಇಂಧನ, ಅಂತರ್ಜಲ ಸಂರಕ್ಷಣೆ, ನವೀಕರಿಸಬಹುದಾದ ಇಂಧನ, ಮಳೆ ನೀರು ಕೊಯ್ಲು ಹಾಗೂ ಪರಿಸರ ಸಂರಕ್ಷಣೆ ಕ್ಷೇತ್ರದಲ್ಲಿ ಅರಿವು ಮೂಡಿಸುವುದರ ಜೊತೆಗೆ ಈ ಕ್ಷೇತ್ರದಲ್ಲಿ ಆಗುವ ಹೊಸ ಅಭಿವೃದ್ಧಿಯನ್ನು ಪ್ರಸರಣ ಮಾಡುವುದು ಈ ಸಂಸ್ಥೆಯ ದೂರದೃಷ್ಠಿಯಾಗಿರುತ್ತದೆ. ಈ ಧ್ಯೇಯೋದ್ದೇಶ ಸಾಧಿಸಲು ಕೆಳಕಂಡ ಚಟುವಟಿಕೆ ಹಮ್ಮಿಕೊಳ್ಳಲು ಸಂಸ್ಥೆಯು ಬದ್ಧವಾಗಿರುತ್ತದೆ.

- ಸಾಮರ್ಥ್ಯ ವರ್ಧನೆ
- ಗ್ರಾಮೀಣ ಹಾಗೂ ನವೀಕರಿಸುವ ಇಂಧನಗಳ/ಗ್ರಾಮೀಣ ಹಾಗೂ ನವೀಕರಿಸುವ ಇಂಧನಗಳ ತಾಂತ್ರಿಕತೆಯ ಪ್ರಾತ್ಯಕ್ಷಿಕೆ ಕೇಂದ್ರ.
- ವಿಕೇಂದ್ರೀಕೃತ ಗ್ರಾಮೀಣ ಇಂಧನ ಆಧಾರಿತ ಕೈಗಾರಿಕೆಯ ಪ್ರಾತ್ಯಕ್ಷಿಕೆ ಕೇಂದ್ರ.
- ಗ್ರಾಮೀಣ ಇಂಧನ ಅಭಿವೃದ್ಧಿ/ಮಳೆನೀರು ಕೊಯ್ಲು/ಪರಿಸರ ಸಂರಕ್ಷಣೆ ಮಾಹಿತಿಯನ್ನು ದಾಖಲಿಸುವ ಹಾಗೂ ಪ್ರಚಾರಗೊಳಿಸುವ ಕೇಂದ್ರ.
- ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ.
- ಮಾಹಿತಿ ಹಾಗೂ ಸಲಹಾ ಸೇವೆಗಳನ್ನು ಒದಗಿಸುವ ಕೇಂದ್ರ.
- ಗ್ರಾಮೀಣ ಇಂಧನ ಅಭಿವೃದ್ಧಿ ಹಾಗೂ ಸಂಬಂಧಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ದತ್ತು ಗ್ರಾಮ ಯೋಜನೆ.

**ಸಂಸ್ಥೆಯ ಆಡಳಿತಾತ್ಮಕ ಸ್ವರೂಪ :**



**ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಪಡೆದ ಅನುದಾನ, ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳು (ನಿಗದಿತ ನಮೂನೆಯಲ್ಲಿ)**

i) 2011-12ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಆಗಿರುವುದಿಲ್ಲ.

ii) ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಈ ಕೆಳಕಂಡಂತೆ ಅನುದಾನ ಬಿಡುಗಡೆ ಆಗಿರುತ್ತದೆ :

| | | |
|---|---|---|
| i) | ಆಡಳಿತ ವೆಚ್ಚಕ್ಕಾಗಿ ನಿಗದಿಪಡಿಸಲಾದ ಅನುದಾನ | 70.00 ಲಕ್ಷ |
| ii) | ಬಿಡುಗಡೆ ಮಾಡಲಾದ ಅನುದಾನ | 70.00 ಲಕ್ಷ |
| iii) | ಗ್ರಾಮ ಸ್ವರಾಜ್ ಶಾಖೆಯಿಂದ ಬಿಡುಗಡೆ ಮಾಡಲಾದ ಅನುದಾನ | 13.20 ಲಕ್ಷ |

**ಭೌತಿಕ ವಿವರ**

| ಕ್ರ.ಸಂ. | ವಿವರ | ಗುರಿ | ಸಾಧನೆ |
|---|---|---|---|
| 1) | ನವಿಕರಿಸಬಹುದಾದ ಇಂಧನ, ಮಳೆ ನೀರು ಕುಯಿಲು ಹಾಗೂ ಪರಿಸರ ರಕ್ಷಣೆ ವಿಷಯವಾಗಿ ಆಯೋಜಿಸಲಾದ ತರಬೇತಿ ಕಾರ್ಯಕ್ರಮಗಳು | 60 | 66 |
| 2) | ಭಾಗವಹಿಸಿದ ಅಭ್ಯರ್ಥಿಗಳ ಸಂಖ್ಯೆ | 2400 | 4367 |

**ಆರ್ಥಿಕ ವಿವರ**

| ಕ್ರಮ ಸಂಖ್ಯೆ | | ಬಿಡುಗಡೆ (ರೂ. ಲಕ್ಷಗಳಲ್ಲಿ) | ಖರ್ಚು (ರೂ. ಲಕ್ಷಗಳಲ್ಲಿ) |
|---|---|---|---|
| 1) | 2011-12ನೇ ಸಾಲಿಗೆ ಇಲ್ಲಿಯವರೆಗೆ ಬಿಡುಗಡೆಯಾದ ಆವರ್ತಕ ವೆಚ್ಚದ ಅನುದಾನ | 70.00 | **63.50 ಲಕ್ಷ** (ಮಾರ್ಚ್-12 ರ ವೇತನ ಮತ್ತು ಕಡ್ಡಾಯವಾಗಿ ಪಾವತಿಸಬೇಕಾಗಿರುವ ಬಿಲ್ ಹೊರತುಪಡಿಸಿ) |
| 2) | ತರಬೇತಿ ಕಾರ್ಯಕ್ರಮಗಳಿಗೆ ಮಾಡಲಾದ ವೆಚ್ಚ | | **13.95** |
| 3) | ಗ್ರಾಮ ಸ್ವರಾಜ್ ಯೋಜನೆಯಲ್ಲಿ ಬಿಡುಗಡೆ. ಪತ್ರ ಸಂ.ಗ್ರಾಅಪ/70/ಗ್ರಾಸ್ವಯೋ/2011 ದಿನಾಂಕ 29.12.2011 | 13.20 ಲಕ್ಷ | ---- |

**2011-12ನೇ ಸಾಲಿನಲ್ಲಿ ಆಯೋಜಿಸಿದ ತರಬೇತಿ ಕಾರ್ಯಕ್ರಮ ಮತ್ತು ಇತರೆ ಚಟುವಟಿಕೆಗಳು.**

ಸಂಸ್ಥೆಯಲ್ಲಿ ಈ ಸಾಲಿನಲ್ಲಿ ಪರಿಸರ ಸಂರಕ್ಷಣೆ, ಇಂಧದ ಉಳಿತಾಯ ಮತ್ತು ಪುನರುತ್ಪಾದಿಸಲ್ಪಡುವ ಇಂಧನದ ಬಗ್ಗೆ ವಿವಿಧ ವರ್ಗಗಳ ತರಬೇತಿ ಅಭ್ಯರ್ಥಿಗಳಿಗೆ ಅಂದರೆ, ಅಧಿಕಾರಿಗಳು, ಶಾಲಾ ವಿದ್ಯಾರ್ಥಿಗಳು, ಮಹಿಳಾ ಸ್ವ ಸಹಾಯ ಸಂಘಗಳು, ಸರ್ಕಾರೇತರ ಸಂಸ್ಥೆಗಳಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ನೀಡಲಾಯಿತು.

- **ಗ್ರಾಮ ಪಂಚಾಯತಿ ಪ್ರತಿನಿಧಿಗಳಿಗೆ ತರಬೇತಿ ಕಾರ್ಯಕ್ರಮ:**



ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಗದಗ, ಗುಲ್ಬರ್ಗ, ಯಾದಗಿರಿ, ಚಿತ್ರದುರ್ಗ, ಧಾರವಾಡ, ದಾವಣಗೆರೆ, ಹಾವೇರಿ, ಹಾಸನ, ತುಮಕೂರು, ಉದುಪಿ, ರಾಯೂರು, ಕೊಪ್ಪಳ ಮತ್ತು ಶಿವಮೊಗ್ಗ ಜಿಲ್ಲೆಯ ಗ್ರಾ.ಪಂ ಪ್ರತಿನಿಧಿಗಳಿಗೆ 28 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಗ್ರಾಮೀಣಾಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತು ಕಾರ್ಯದರ್ಶಿಗಳನ್ನೊಳಗೊಂಡ 699 ಅಭ್ಯರ್ಥಿಗಳು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ತರಬೇತಿಯಲ್ಲಿ ಒಳಗೊಂಡ ವಿಷಯಗಳು:**



1. ಗ್ರಾಮೀಣ ಪ್ರದೇಶಗಳಲ್ಲಿ ಪುನರುತ್ಪಾದಿಸಲ್ಪಡುವ ಇಂಧನ ಯೋಜನೆಯ ಅನುಷ್ಠಾನದಲ್ಲಿ ಗ್ರಾಮ ಪಂಚಾಯತ್ ಪಾತ್ರ.
2. ಪರಿಸರ ಸಂರಕ್ಷಣೆ
3. ಪುನರುತ್ಪಾದಿಸಲ್ಪಡುವ ಇಂಧನ ಮೂಲಗಳು ಮತ್ತು ಉಪಕರಣಗಳು.
4. ಮಳೆ ನೀರು ಕೊಯ್ಲು ಹಾಗೂ ಅಂತರ್ಜಲ ಮರುಪೂರಣ
5. ಜೈವಿಕ ಇಂಧನ
6. ಪುನರುತ್ಪಾದಿಸಲ್ಪಡುವ ಇಂಧನದ ಉಪಕರಣಗಳು ಮತ್ತು ಮಳೆ ನೀರು ಕೊಯ್ಲು ಮಾದರಿಗಳ ಪ್ರಾತ್ಯಕ್ಷಿಕೆ.
7. ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ಅಳವಡಿಸಿರುವ ಜೈವಿಕ ಇಂಧನ ಮಾಹಿತಿ ಮತ್ತು ತಂತ್ರಜ್ಞಾನ ಕೇಂದ್ರಕ್ಕೆ ಶೈಕ್ಷಣೀಕ ಭೇಟಿ.



- **ಮಹಿಳೆಯರಿಗಾಗಿ ಕಾರ್ಯಕ್ರಮಗಳು:**



ಕ್ಷೇತ್ರ ಮಟ್ಟದಲ್ಲಿ ಟೈಡ್ ಸಂಸ್ಥೆಯ ಸಹಯೋಗದೊಂದಿಗೆ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಜಯಂತಿಪುರ ಮತ್ತು ಶಿಡ್ಲೇಹಳ್ಳಿಯನ್ನು ತರಬೇತಿಗಾಗಿ ಆಯ್ಕೆ ಮಾಡಲಾಯಿತು. ಪುನರುತ್ಪಾದಿಸಲ್ಪಡುವ ಇಂಧನ ಬಗ್ಗೆ ಆಯೋಜಿಸಿಸಲಾದ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಜಯಂತಿಪುರ ಮತ್ತು ಶಿಡ್ಲಹಳ್ಳಿಯಿಂದ ಕ್ರಮವಾಗಿ 34 ಹಾಗೂ 26 ಸ್ವ ಸಹಾಯ ಗುಂಪಿನ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು. ಟೈಡ್ ಸಂಸ್ಥೆಯ ಯೋಜನಾ ಸಮನ್ವಯಾಧಿಕಾರಿ ಜೊತೆಗೂಡಿ ಸಂಸ್ಥೆಯ ಭೋಧಕರು ಮತ್ತು ಯೋಜನಾ ವ್ಯವಸ್ಥಾಪಕರು ತರಬೇತಿಯನ್ನು ಏರ್ಪಡಿಸಿದ್ದರು. ಸೌರಶಕ್ತಿಯ ವಿವಿಧ ಮಾದರಿಯ ದೀಪ, ಸೌರಶಕ್ತಿಯ ಪ್ಯಾನಲ್, ಸೌರಶಕ್ತಿಯ ಕುಕ್ಕರ, ಹೋಗೆ ರಹಿತ ಒಲೆಗಳು, ಜೈವಿಕ ಇಂಧನದ ಮಾದರಿಗಳು, ಎಣ್ಣೆ ತೆಗೆಯುವ ಯಂತ್ರ, ಸಣ್ಣ ಉದ್ಧರಣೆ ಯಂತ್ರಗಳನ್ನು ಮತ್ತು ಮಾಹಿತಿಗಳುಳ್ಳ ಫಲಕಗಳನ್ನು ಪ್ರಾತ್ಯಕ್ಷಿಕೆಗಾಗಿ ಇಡಲಾಗಿತ್ತು.



ಈ ಕೆಳಗಿನ ವಿಷಯಗಳ ಮೂಲಕ ಅರಿವು ನೀಡಲಾಯಿತು:

1. ಗೃಹೋಪಯೋಗಕ್ಕಾಗಿ ಥರ್ಮಲ್ ಮತ್ತು ಫೋಟೊವೊಲ್ಟಾಯಿಕ್ ಸೌರಶಕ್ತಿ ಉಪಕರಣದ ಅಳವಡಿಕೆ ಮತ್ತು ಉಪಯೋಗ.
2. ಅಡುಗೆ ತ್ಯಾಜ್ಯ ಅನಿಲ ಸ್ಥಾವರದಿಂದಾಗುವ ಅನುಕೂಲಕಗಳು.

3. ಹೊಗೆ ರಹಿತ ಒಲೆ ನಿರ್ಮಾಣದಿಂದ ಇಂಧನ ಉಳಿತಾಯ ಜೊತೆಗೆ ಮನೆಯಲ್ಲಿ ಉಂಟಾಗುವ ಮಾಲಿನ್ಯ ತಡೆಯುವ ಪ್ರಯೋಜನಗಳು.
4. ಗೃಹೋಪಯೋಗದಲ್ಲಿ ಜೈವಿಕ ಇಂಧನ ಬಳಕೆ.
5. ಜೈವಿಕ ಇಂಧನ ಸಸಿ ಬೆಳೆಸುವುದು, ಬೀಜ ಸಂಗ್ರಹಣೆ, ಎಣ್ಣೆ ತೆಗೆಯುವುದು ಮತ್ತು ಜೈವಿಕ ಡೀಸೆಲ್‌ಗೆ ಪರಿವರ್ತಿಸುವುದು ತನ್ಮೂಲಕ ಜೈವಿಕ ಇಂಧನವನ್ನು ಆರ್ಥಿಕ ಚಟುವಟಿಕೆಯಾಗಿ ತೆಗೆದುಕೊಳ್ಳುವುದು.
6. ಅಂತಿಮವಾಗಿ ತ್ಯಾಜ್ಯ ನಿರ್ವಹಣೆಯ ಪದ್ಧತಿಯನ್ನು ಅಳವಡಿಸಿಕೊಳ್ಳುವುದರಿಂದ ಸ್ವಚ್ಛ ಹಸಿರು ಗ್ರಾಮ ನಿರ್ಮಾಣ.



○ **ಶಾಲಾ ಮಕ್ಕಳ ಕಾರ್ಯಕ್ರಮ:** 15 ಕಾರ್ಯಕ್ರಮವನ್ನು ಬೆಂಗಳೂರಿನ ವಿವಿಧ ಶಾಲೆಗಳಿಗೆ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಬಗ್ಗೆ ಶಾಲಾ ಮಕ್ಕಳಿಂದ ಹಾಗೂ ಉಪಧ್ಯಾಯರಿಂದ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ. ಈ ಸಾಲಿನಲ್ಲಿ ಈಸ್ಟ್ ವೆಸ್ಟ್ ಪಬ್ಲಿಕ್ ಶಾಲೆ, ಸಿಲಿಕಾನ್ ವ್ಯಾಲಿ ಶಾಲೆ ಮತ್ತು ವಿವಿಧ ಸರ್ಕಾರಿ ಶಾಲೆಗಳಿಂದ 577 ಮಕ್ಕಳು ಭಾಗವಹಿಸಿರುತ್ತಾರೆ. ಮಕ್ಕಳಿಗೆ ಉಪನ್ಯಾಸ, ಕಿರುಚಿತ್ರಗಳ ಪ್ರದರ್ಶನ ಹಾಗೂ ಪ್ರಾಯೋಗಿಕ ಅನುಭವಕ್ಕಾಗಿ ಸಂಸ್ಥೆಯ ಇಂಧನ ಉದ್ಯಾನದ ಭೇಟಿ ಮಾಡಿಸಲಾಯಿತು. ತನ್ಮೂಲಕ ಅವರಿಗೆ ಪರಿಸರ ಸಂರಕ್ಷಣೆ, ಇಂಧನ ಸಂರಕ್ಷಣೆ ಹಾಗೂ ನವೀಕರಿಸಬಹುದಾದ ಇಂಧನಗಳ ಉಪಕರಣಗಳ ಬಗ್ಗೆ ಮಾಹಿತಿ ನೀಡಲಾಯಿತು.





• **ಕಾಲೇಜು ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ:** ಕಾಲೇಜು ವಿದ್ಯಾರ್ಥಿಗಳಿಗಾಗಿ 8 ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮ್ಯಾನೆಜ್‌ಮೆಂಟ್ ಶಿಕ್ಷಣ, ಅರಣ್ಯ ಶಾಸ್ತ್ರ, ವೈದ್ಯಕೀಯ ವಿದ್ಯಾಲಯ ಮತ್ತು ಪದವಿ ಪೂರ್ವ ವಿದ್ಯಾಲಯದಿಂದ ವಿದ್ಯಾರ್ಥಿಗಳು ಆಗಮಿಸಿದ್ದರು. 2011–12 ನೇ ಸಾಲಿನಲ್ಲಿ ಒಟ್ಟು 318 ವಿದ್ಯಾರ್ಥಿಗಳು ಸಂಸ್ಥೆಗೆ ಭೇಟಿ ನೀಡಿದ್ದರು. ಇವರೆಲ್ಲರಿಗೂ ಸಂಸ್ಥೆಯ ಕಾರ್ಯಚಟುವಟಿಕೆ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಲಾಯಿತು ಹಾಗೂ ನವೀಕರಿಸಬಹುದಾದ ಇಂಧನ, ಇಂಧನ ಮೂಲಗಳು, ಉಪಕರಣಗಳು ಹಾಗೂ ಇಂಧನ ಸಂರಕ್ಷಣೆಯ ಬಗ್ಗೆ ಉಪನ್ಯಾಸ ಮತ್ತು ಪಳೆಯುಳಿಕೆ ಇಂಧನದ ಅಭಾವ ಮತ್ತು ಅದರಿಂದ ಪರಿಸರಕ್ಕೆ ಉಂಟಾಗುವ ಮಾಲಿನ್ಯದ ಬಗ್ಗೆ ತಿಳುವಳಿಕೆ ನೀಡಲಾಯಿತು. ಅಲ್ಲದೆ ಸಂಸ್ಥೆಯ ಇಂಧನ





ಉದ್ಯಾನ ಹಾಗೂ ಪ್ರದರ್ಶನಾಲಯಗಳಲ್ಲಿ ಇರುವ ಉಪಕರಣ ಹಾಗೂ ಬಿತ್ತಿ ಚಿತ್ರಗಳ ಬಗ್ಗೆ ಮಾಹಿತಿ ನೀಡಲಾಯಿತು.

ಮೊದಲ ಬಾರಿಗೆ ಎಂ.ಎಸ್.ರಾಮಯ್ಯ ವೈದ್ಯಕೀಯ ವಿದ್ಯಾಲಯದಿಂದ ವೈದ್ಯ ನಾಲ್ಕು ತಂಡಗಳು ಸಂಸ್ಥೆಯ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪರಿಸರ, ತ್ಯಾಜ್ಯ ನಿರ್ವಹಣೆ ಮತ್ತು ಇಂಧನ ಅಭಾವದ ಕುರಿತು ಇವರಿಗೆ ಹೆಚ್ಚು ಒತ್ತು ನೀಡಲಾಯಿತು.

- **ಪ್ರದರ್ಶನ ಕಾರ್ಯಕ್ರಮ:** ಸಂಸ್ಥೆಯು ವಿವಿಧ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಯ ಸಹಯೋಗದೊಂದಿಗೆ 5 ಪ್ರದರ್ಶನ ಕಾರ್ಯಕ್ರಮವನ್ನು ಏರ್ಪಡಿಸಿತು. ಅವುಗಳು ಯಾವುದೆಂದರೆ:

i. ಇನ್ಸ್ಟಿಟ್ಯೂಟ್ ಫಾರ್ ಹ್ಯುಮನ್ ರಿಸೋರ್ಸ್ಸ್ ಡೆವಲಪ್‌ಮೆಂಟ್ ಇನ್ ಸೈನ್ಸ್ & ಟೆಕ್ನಾಲೋಜಿ. ಜೆ ಎನ್ ಟಾಟಾ ಆಡಿಟೋರಿಯಮ್
26 ರಿಂದ 28 ಮೇ 2011



ii. ವಿಶ್ವ ಪರಿಸರ ದಿನ ಆಚರಣೆ,
ಎಟ್ರಿ ಸಂಸ್ಥೆ, 10.06.2011

iii. ಪುನರುತ್ಪಾದಿಸಲ್ಪಡುವ ಇಂಧನ ಮೂಲಗಳು, ನೆಲಮಂಗಲ ತಾಲ್ಲೂಕು ಪಂಚಾಯತ್ ಕಛೇರಿ, 27.07.2011

iv. “ಪ್ರಯಾಸ್” ಶಾಲೆಯ ವಿಜ್ಞಾನ ಪ್ರದರ್ಶನ ಕಾರ್ಯಕ್ರಮ, ಪ್ರೆಸಿಡೆನ್ಸಿ ಶಾಲೆ, ನಂದಿನಿ ಬಡಾವಣೆ, 27.08.2011

v. ಶಾಲೆಯ ವಿಜ್ಞಾನ ಪ್ರದರ್ಶನ ಕಾರ್ಯಕ್ರಮ, 08.01.2012

ಈ ವಿಜ್ಞಾನ ಪ್ರದರ್ಶನ ಕಾರ್ಯಕ್ರಮದಲ್ಲಿ ಸೌರಶಕ್ತಿ, ಜೈವಿಕ ಇಂಧನ, ಇಂಧನದ ಉಳಿತಾಯ, ಮತ್ತು ಹೊಗೆ ರಹಿತ ಒಲೆಗಳ ವಿವಿಧ ಮಾದರಿಗಳು ಬಗ್ಗೆ ಮಾಹಿತಿ ನೀಡಲಾಯಿತು. ಈ ತರಹದ ವಿಜ್ಞಾನ ಪ್ರದರ್ಶನದ ಮೂಲಕ ಸಂಸ್ಥೆಯು ಪುನರುತ್ಪಾದಿಸಲ್ಪಡುವ ಇಂಧನ ಮತ್ತು ಇಂಧನದ ಉಳಿತಾಯದ ಬಗ್ಗೆ ಹೆಚ್ಚಿನ ಜನಸಮೂಹಕ್ಕೆ ಅಂದರೆ ಶಾಲಾ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರಿಗೆ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸಲು ಸಹಾಯವಾಗುತ್ತದೆ.

**ಸರ್ಕಾರದ ಅಧಿಕಾರಿಗಳ ತರಬೇತಿ ಕಾರ್ಯಕ್ರಮ:**

- **ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ತರಬೇತಿ:** ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ಸಂಸ್ಥೆಯು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆಯ ಮೂರು ದಿನದ ಎರಡು ಕಾರ್ಯಾಗಾರವನ್ನು ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಸಹಯೋಗದೊಂದಿಗೆ ಏರ್ಪಡಿಸಿತ್ತು. ಈ ಕಾರ್ಯಾಗಾದಲ್ಲಿ ಭಾಗವಹಿಸಿದ ಅಧಿಕಾರಿಗಳಿಗೆ ಪುನರುತ್ಪಾದಿಸಲ್ಪಡುವ ಇಂಧನ ಮತ್ತು ಇಂಧನದ ಉಳಿತಾಯದ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಸಂಸ್ಥೆಯ ಇಂಧನ ಉದ್ಯಾನವನ್ನು ಮತ್ತು ವಿವಿಧ ಪ್ರಾತ್ಯಕ್ಷಿಕೆಯನ್ನು ಪ್ರಾಯೋಗಿಕವಾಗಿ ತೋರಿಸಲಾಯಿತು.





- **ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮದ ಯೋಜನಾ ಅಭಿಯಂತರಿಗೆ ತರಬೇತಿ:** ಕರ್ನಾಟಕ ರಾಜ್ಯದ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮದ ಯೋಜನಾ ಅಭಿಯಂತರುಗಳಿಗೆ ಪುನರುತ್ಪಾದಿಸಲ್ಪಡುವ ಇಂಧನದ ಮೂಲಕ ಸಣ್ಣ ಉದ್ದಿಮೆಯ ಸ್ಥಾಪನೆಯ ಬಗ್ಗೆ ದಿ. 16 & 17 ನವಂಬರ್ 2011 ರಂದು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಮಾನ್ಯ ಶ್ರೀ ಜಗದೀಶ ಶೆಟ್ಟರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಕರ್ನಾಟಕ ಸರ್ಕಾರ ಇವರು ಸರ್ಕಾರದ ಕಾರ್ಯದರ್ಶಿಗಳು, ನಿರ್ದೇಶಕರು (ಗ್ರಾಮೀಣ ಮೂಲಭೂತ ಸೌಕರ್ಯ–2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರುಗಳ ಸಮ್ಮುಖದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮ್ಯಾಗಸ್ಸೆಸೆ ಪ್ರಶಸ್ತಿ ಪುರಸ್ಕೃತ ಶ್ರೀ ಹರೀಶ ಹಂದೆ ಇವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.





ಎರಡು ದಿನದ ಕಾರ್ಯಕ್ರಮವು ಈ ಕೆಳಗಿನ ವಿಷಯಗಳನ್ನೊಳಗೊಂಡಿತ್ತು:

- ಪುನರುತ್ಪಾದಿಸಲ್ಪಡುವ ಇಂಧನದ ಮೂಲಗಳ ಬಗ್ಗೆ ಪರಿಚಯ– ಶ್ರೀ ವಿಷ್ಣು ಚಿನಗುಂಡಿ, ಹಿರಿಯ ಭೋಧಕರು, ಮ.ಗಾ.ಗ್ರಾ.ಇಂ.ಸಂಸ್ಥೆ.
- ಜೈವಿಕ ಇಂಧನ ಕ್ಷೇತ್ರ ಮತ್ತು ಅಡುಗೆ ತ್ಯಾಜ್ಯ ಬಳಸಿ ಸಣ್ಣ ಉದ್ದಿಮೆ ಅಭಿವೃದ್ಧಿ– ಮಾನ್ಯ ಕಾರ್ಯಕಾರಿ ಅಧ್ಯಕ್ಷರು, ಮತ್ತು ಶ್ರೀಮತಿ ಶೀತಲ್ ಎನ್ ಸಿಂಗ್, ಸಂಶೋಧನಾ ಅಧಿಕಾರಿ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ
- ಗಾಳಿ, ಸೌರಶಕ್ತಿ, ಗಾಳಿ ಮತ್ತು ಸೌರಶಕ್ತಿ ಯ ಹೈಬ್ರಿಡ್, ಸೌರಶಕ್ತಿಯ ನೀರಿನ ಪಂಪುಗಳ ಕ್ಷೇತ್ರದಲ್ಲಿ ಸಣ್ಣ ಉದ್ದಿಮೆಯನ್ನು ಸ್ಥಾಪಿಸಲು ಎಂಎನ್ಆರ್ಇ ಸಹಾಯಧನದ ಮಾರ್ಗಸೂಚಿ– ಶ್ರೀ ರವೀಂದ್ರ ಕೋರಿ, ತಾಂತ್ರಿಕ ಅಧಿಕಾರಿ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ.
- ಸಾಮಾಜಿಕ ಇಂಜಿನಿಯರಿಂಗ್: ಶ್ರೀ ವಿ ಜಗನ್ನಾಥ, ಪ್ರಾಧ್ಯಾಪಕರು, ಕರ್ನಾಟಕ ನಗರಾಭಿವೃದ್ಧಿ ಸಂಸ್ಥೆ, ಎಟಿಐ ಕ್ಯಾಂಪಸ್
- ಗ್ರಾಮೀಣ ಪ್ರದೇಶಗಳೀಗೆ ಸಣ್ಣ ಉದ್ದಿಮೆಯಾಗಿ ಬಯೋಮಾಸ್ ಗ್ಯಾಸಿಫೈಯರ್ – ಶ್ರೀ ಜಿ.ಎಸ್.ಪ್ರಭು, ಭಾ.ಅ.ಸೇ., ಯೋಜನಾ ಸಮನ್ವಯಾಧಿಕಾರಿ, ಬೆರಿ.

ಕಾರ್ಯಕ್ರಮದ ಎರಡನೆ ದಿನ ಎಮ್ಕ್ಯೂ ಸೋಲಾರ್ ಉತ್ಪಾದಿಸುವ ಘಟಕಕ್ಕೆ ಭೇಟಿ ನೀಡಲಾಯಿತು.

**ವಿಶ್ವ ಪರಿಸರ ದಿನ :**



ಜೂನ್ 10, 2011 ರಂದು ಸಂಸ್ಥೆಯಲ್ಲಿ ಈ ದಿನದ ಆಚರಣೆಯ ಅಂಗವಾಗಿ ಸಂಸ್ಥೆಯು ಎಟ್ರಿ ಸಂಸ್ಥೆಯ ಸಹಯೋಗದೊಂದಿಗೆ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಪ್ರೆಸಿಡೆನ್ಸಿ ಶಾಲೆ, ನಂದಿನಿ ಬಡಾವಣೆ, ಬೆಂಗಳೂರಿನ 89 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಎಟ್ರಿ ಸಂಸ್ಥೆಯಲ್ಲಿ

ಪುನರುತ್ಪಾದಿಸಲ್ಪಡುವ ಇಂಧನ ಮೂಲಗಳು ಮತ್ತು ಉಪಕರಣಗಳ ಮಳಿಗೆಯನ್ನು ಸಂಸ್ಥೆಯು ಏರ್ಪಡಿಸಿತ್ತು.




**ವಿಶ್ವ ಜೈವಿಕ ಇಂಧನ ದಿನಾಚರಣೆ :**



ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆವರಣದಲ್ಲಿ ದಿನಾಂಕ 10.08.2011 ರಂದು 'ಅಂತರ ರಾಷ್ಟ್ರೀಯ ಜೈವಿಕ–ಡೀಸಲ್ ದಿನವನ್ನು ಆಚರಿಸಲಾಯಿತು. ಸಂಸ್ಥೆಯಲ್ಲಿ ಕಾರ್ಯಕ್ರಮದ ಅಂಗವಾಗಿ ಮಕ್ಕಳಲ್ಲಿ ಜೈವಿಕ ಇಂಧನದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಜೈವಿಕ ಇಂಧನದ ಬಗ್ಗೆ ಕಿರು ಚಿತ್ರವನ್ನು ಪ್ರದರ್ಶಿಸಲಾಯಿತು ಮತ್ತು ಮಕ್ಕಳಿಂದಲೇ ಜೈವಿಕ ಇಂಧನ ಸಸಿಗಳನ್ನು ನೆಡೆಸಲಾಯಿತು.



**ಅಂತರಾಷ್ಟ್ರೀಯ ಕಾರ್ಯಕ್ರಮಗಳು**



- ನ್ಯಾಷನಲ್ ಇನಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್ (ಎನ್ ಐ ಆರ್‌ಡಿ)ಯ ಮೂಲಕ ಸಂಸ್ಥೆಗೆ ಭೇಟಿ ನೀಡಿದ ವಿದೇಶಿ ಪ್ರತಿನಿಧಿಗಳಿಗೆ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಸ್ಥೆಯ ಚಟುವಟಿಕೆಗಳ ಬಗ್ಗೆ, ಪುನರುತ್ಪಾದಿಸಲ್ಪಡುವ ಇಂಧನ ಹಾಗೂ
- ಇಂಧನ ಉಳಿತಾಯದಿಂದ ಗ್ರಾಮ ಪಂಚಾಯತಿಯು ಗ್ರಾಮೀಣ ಮಟ್ಟದಲ್ಲಿ ಇಂಧನ ಉತ್ಪಾದಿಸುವ ದಿಸೆಯಲ್ಲಿ ಹೇಗೆ ಸ್ವಾವಲಂಬನೆ ಸಾಧಿಸಬಹುದೆಂದು ತಿಳಿಸಲಾಯಿತು.



- ದಿನಾಂಕ 27.02.2012 ರಂದು ಜಿಂಬಾಬ್ವೆ ದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಸಚಿವರು ಸಂಸ್ಥೆಗೆ ಭೇಟಿ ನೀಡಿದ್ದರು. ಸಂಸ್ಥೆಯಲ್ಲಿ ಸ್ಥಾಪಿಸಿರುವ ಇಂಧನ ಉದ್ಯಾನ ಮತ್ತು ಪ್ರದರ್ಶನಾಲಯವನ್ನು ವೀಕ್ಷಿಸಿದರು ಹಾಗೂ ಸಂಸ್ಥೆಯ ಕಾರ್ಯಚಟುವಟಿಕೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.



- ದಿನಾಂಕ 18.01.2011 ರಂದು ಟೆರಿ ಸಂಸ್ಥೆಯು ಆಯೋಜಿಸಿದ ಐ.ಟಿ.ಇ.ಸಿ ತರಬೇತಿ 31 ವಿದೇಶಿ ಅಭ್ಯರ್ಥಿಗಳು ಸಂಸ್ಥೆಗೆ ಭೇಟಿ ನೀಡಿದ್ದರು ಅವರಿಗೆ ಸಂಸ್ಥೆಯ ಚಟುವಟಿಕೆಗಳ ಬಗ್ಗೆ, ನವೀಕರಿಬಹುದಾದ

ಇಂಧನ ಹಾಗೂ ಜೈವಿಕ ಇಂಧನದ ಕ್ಷೇತ್ರದ ಅಭಿವೃದ್ಧಿ ಮತ್ತು ಇಂಧನ ಸಂರಕ್ಷಣೆ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು. 22 ದೇಶಗಳ ಪ್ರತಿನಿಧಿಗಳು ಈ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

- ದಿನಾಂಕ 9.03.2012 ರಂದು ದಕ್ಷಿಣ ಆಫ್ರಿಕಾ ದೇಶದ ಕೊಟೆವೈಇಡೆನ್ ತರಬೇತಿ ಸಂಸ್ಥೆಯಿಂದ ಮೂರು ಜನ ಭೋದಕರು ಸಂಸ್ಥೆಯಲ್ಲಿ ಗ್ರಾಮೀಣ ಇಂಧನ ಕ್ಷೇತ್ರದಲ್ಲಿ ತೆಗೆದುಕೊಳ್ಳಲಾದ ಕಾರ್ಯಚಟುವಟಿಕೆ ಬಗ್ಗೆ ತಿಳಿದುಕೊಳ್ಳಲು ಭೇಟಿ ನೀಡಿದ್ದರು.




**ಸಂಸ್ಥೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಆಯೋಜಿಸಲಾದ ತರಬೇತಿ ಕಾರ್ಯಕ್ರಮಗಳ ಮಾಹಿತಿ ಈ ಕೆಳಗಿನಂತಿರುತ್ತವೆ.**

| ವರ್ಷ | ತರಬೇತಿಗಳ ಸಂಖ್ಯೆ | | ಭಾಗವಹಿಸಿದ ಅಭ್ಯರ್ಥಿಗಳ ಸಂಖ್ಯೆ | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2006-07 | 60 | 72 | 2400 | 2824 |
| 2007-08 | 60 | 64 | 2400 | 2995 |
| 2008-09 | 60 | 56 | 2400 | 2593 |
| 2009-10 | 60 | 72 | 2400 | 3169 |
| 2010-11 | 60 | 75 | 2400 | 3579 |
| 2011-12 | 60 | 66 | 2400 | 4367 |

**ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ**
**2011-12ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ / ಸಿಬ್ಬಂದಿಗಳ ವಿವರ**

| ಕ್ರಮ ಸಂಖ್ಯೆ | ವರ್ಗ | ಒಟ್ಟು ಅಧಿಕಾರಿ / ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ. ಜಾ. | ಪ. ಪಂ. |
|---|---|---|---|---|---|---|
| 1) | ಎ | 2 | 1 | 1 | – | – |
| 2) | ಬಿ | 1 | – | 1 | 1 | – |
| 3) | ಸಿ | 2 | 1 | 1 | – | – |
| 4) | ಡಿ | – | – | – | – | – |
| | **ಒಟ್ಟು** | **5** | **2** | **3** | **1** | **–** |

**2011-12ನೇ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರ**

| ಕ್ರಮ ಸಂಖ್ಯೆ | ಹುದ್ದೆ | ಸಂಖ್ಯೆ |
|---|---|---|
| 1) | ಆಪ್ತ ಸಹಾಯಕರು | 1 |
| 2) | ಗ್ರೂಪ್ ಡಿ | 1 |
| 3) | ವಾಹನ ಚಾಲಕರು | 2 |
| 4) | ಸಲಹೆಗಾರರು / ಪ್ರೋಗ್ರಾಂ ಮ್ಯಾನೇಜರ್ | 3 |
| 5) | ಇತರೆ (ಡಾಟಾ ಎಂಟ್ರಿ ಆಪರೇಟರ್ಸ್) | 2 |
| **ಒಟ್ಟು** | | 9 |

* *

## 6.5 ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ

### ಅಧ್ಯಾಯ-1

### (ಎ) ನಿಗಮದ ಕಿರು ಪರಿಚಯ

ಕರ್ನಾಟಕ ಭೂಸೇನಾ ನಿಗಮವು ಕರ್ನಾಟಕ ಸರ್ಕಾರದ ಅಂಗಸಂಸ್ಥೆಯಾಗಿ 9ನೇ ಆಗಸ್ಟ್ 1974 ರಂದು ಪ್ರಾರಂಭಗೊಂಡಿತು. ನಿಗಮದ ಆಡಳಿತ ಮಂಡಳಿಯು ನಿಗಮದ ಹೆಸರು ನಿರ್ವಹಿಸುವ ಕೆಲಸಕ್ಕೆ ವ್ಯತಿರಿಕ್ತವಾಗಿರುವುದರಿಂದ ಭಾರತ ಸರ್ಕಾರದ ಕಾರ್ಪೋರೇಟ್ ಅಫೇರ್ಸ್ ಸಚಿವಾಲಯ, ಕರ್ನಾಟಕ ಸರ್ಕಾರ ಹಾಗೂ ನಿಗಮದ ಷೇರುದಾರರ ಅನುಮತಿಯೊಂದಿಗೆ ನಿಗಮದ ಹೆಸರನ್ನು ಕರ್ನಾಟಕ ಭೂಸೇನಾ ನಿಗಮ ನಿಯಮಿತದಿಂದ **ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಎಂದು ದಿನಾಂಕ: 06-08-2009ರಂದು ಬದಲಿಸಲಾಗಿದೆ.** ಕಂಪನಿಯ ಹೆಸರನ್ನು ಬದಲಾಯಿಸಲಾಗಿದೆಯೇ ಹೊರೆತು ನಿಗಮದ ಎಲ್ಲಾ ಚಟುವಟಿಕೆಗಳು ಈ ಹಿಂದಿನಂತೆ ಮುಂದುವರೆದು ಬದಲಾವಣೆ ಇರುವುದಿಲ್ಲ. ಪ್ರಾರಂಭದಲ್ಲಿ ರೂ.1.00 ಕೋಟಿ ಅಧಿಕೃತ ಬಂಡವಾಳ ಮತ್ತು ರೂ.25.00 ಲಕ್ಷಗಳ ವಂತಿಗೆ ಬಂಡವಾಳ ಮತ್ತು 2001-02ರಲ್ಲಿ ರೂ.12.00 ಕೋಟಿಗಳಷ್ಟು ಹೆಚ್ಚಿಸಿದ ವಂತಿಗೆ ಬಂಡವಾಳ ಹಾಗೂ ಮತ್ತು 15 ಜನ ಇಂಜಿನಿಯರುಗಳೊಂದಿಗೆ, ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಕಡಿಮೆ ವೆಚ್ಚದ ಮನೆಗಳ ನಿರ್ಮಾಣ, ರಸ್ತೆಗಳ ನಿರ್ಮಾಣ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಕಾಮಗಾರಿಗಳನ್ನು ಸ್ಥಳೀಯ ನಿರುದ್ಯೋಗಿ ಜನತೆಯನ್ನು ಬಳಸಿಕೊಂಡು ನಿರ್ವಹಣೆ ಮಾಡಲಾಗುತ್ತಿದ್ದು ಇಂತಹ ಉತ್ತಮ ಧ್ಯೇಯದೊಂದಿಗೆ ರೂಪುಗೊಂಡ ಕರ್ನಾಟಕ ಭೂಸೇನಾ ನಿಗಮದಂತಹ ಸಫಲ ಪ್ರಯೋಗವು ದೇಶದ ಯಾವುದೇ ರಾಜ್ಯದಲ್ಲಿಯೂ ಈ ಮುಂಚೆ

ಅಸ್ತಿತ್ವದಲ್ಲಿರಲಿಲ್ಲ. ನಿಗಮವನ್ನು ರೂಪುಗೊಳಿಸಲು ಪ್ರಾಥಮಿಕ ಹಂತದಲ್ಲಿ ಶ್ರಮಿಸಿದ ಅನೇಕ ಮಹನೀಯರ ಅವಿರತ ಶ್ರಮ ಹಾಗೂ ಸೂಕ್ತ ಮುಂದಾಲೋಚನೆಯ ಫಲವಾಗಿ ನಿಗಮವು ರೂ.500.00 ಕೋಟಿ ವಾರ್ಷಿಕ ವಹಿವಾಟನ್ನು ನಿರ್ವಹಿಸುವ ಹಂತವನ್ನು ತಲುಪಿದ್ದು, ಇಂದು ಸುಮಾರು 965 ಸಿಬ್ಬಂದಿಗಳನ್ನು ಹೊಂದಿದ್ದು, ಇದರಲ್ಲಿ 341 ಮಂದಿ ನುರಿತ, ಪರಿಣಿತ ಹಾಗೂ ಅನುಭವಿ ತಾಂತ್ರಿಕ ಅಧಿಕಾರಿ / ಸಿಬ್ಬಂದಿ ರಾಜ್ಯಾದ್ಯಂತ ಯಾವುದೇ ಕಾಮಗಾರಿಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದುವ ಮೂಲಕ ನಿಗಮದ ಯಶಸ್ವಿಗೆ ಕಾರಣರಾಗಿರುತ್ತಾರೆ.

ನಿಗಮವು (ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಡಳಿತಾತ್ಮಕ ನಿರ್ವಹಣೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವ್ಯವಸ್ಥಾಪಕ ನಿರ್ದೇಶಕರು ನಿಗಮದ ಕಾರ್ಯಭಾರವನ್ನು ಹೊತ್ತಿರುತ್ತಾರೆ. ನಿಗಮದ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸರ್ಕಾರದಿಂದ ನಾಮಕರಣಗೊಂಡ ಆಡಳಿತ ಮಂಡಳಿಯು ನಿಯಂತ್ರಿಸುತ್ತದೆ. ಮುಖ್ಯ ಕಛೇರಿಯು ಚಿನ್ನಸ್ವಾಮಿ ಕ್ರೀಡಾಂಗಣ, ರಾಜಭವನ ರಸ್ತೆ, ಬೆಂಗಳೂರಿನಲ್ಲಿದ್ದು, 6 ವಲಯ ಕಛೇರಿಗಳು 32 ವಿಭಾಗೀಯ ಕಛೇರಿಗಳು (ಜಬ್ಬಲ್‌ಪುರ ಸೇರಿದಂತೆ) ಹಾಗೂ 75 ಉಪ ವಿಭಾಗೀಯ ಕಛೇರಿಗಳನ್ನು ಹೊಂದಿ, ರಾಜ್ಯಾದ್ಯಂತ ತನ್ನ ಕಾರ್ಯಜಾಲವನ್ನು ವಿಸ್ತರಿಸಿಕೊಂಡಿರುತ್ತದೆ. ರಾಜ್ಯದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿ ವಹಿಸುವ ಕಾಮಗಾರಿಗಳನ್ನು ಕೆಆರ್‌ಐಡಿಎಲ್ ನಿರ್ವಹಿಸುತ್ತಿದೆ.

ಈ ರೀತಿಯ ಕಾಮಗಾರಿಗಳನ್ನು ನಿಗಮವು ನೇರವಾಗಿ ನಿರ್ವಹಿಸುತ್ತಿದ್ದು, ಗುತ್ತಿಗೆದಾರರ ಅಥವಾ ಮಧ್ಯವರ್ತಿಗಳ ಪ್ರವೇಶವನ್ನು ತಡೆಗಟ್ಟಿದೆ.

ನಿಗಮವು ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ಆಧಾರದ ಮೇಲೆ ನಿರ್ವಹಿಸುತ್ತದೆ. ತನ್ನ ವಿಸ್ತೃತ ಕಾರ್ಯಜಾಲ ಹಾಗೂ ತಾಂತ್ರಿಕ ನೈಪುಣ್ಯತೆಯನ್ನು ಹೊಂದಿರುವ ಕಾರಣ ರಾಜ್ಯಾದ್ಯಂತ ಯಾವುದೇ ರೀತಿಯಾದಂತಹ ಹಾಗೂ ಯಾವುದೇ ಪ್ರಮಾಣದ ಕಾಮಗಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಮೂಲಸೌಕರ್ಯಗಳನ್ನು ಹೊಂದಿದೆ. ರಾಜ್ಯ ಸರ್ಕಾರವು ತನ್ನ ವಿವಿಧ ಇಲಾಖಾ ಕಾಮಗಾರಿಗಳನ್ನು ನಿರ್ವಹಿಸಲು ಕೆಆರ್‌ಐಡಿಎಲ್‌ನ್ನು ಸರ್ಕಾರದ ಅಂಗೀಕೃತ ಸಂಸ್ಥೆಯೆಂದು ಘೋಷಿಸಿರುತ್ತದೆ.

ನಿಗಮವು 2010-11ನೇ ಸಾಲಿನಲ್ಲಿ ಅತಿ ಹೆಚ್ಚಿನ ಗರಿಷ್ಟ ರೂ.601.09 ಕೋಟಿ ವಹಿವಾಟನ್ನು ನಿರ್ವಹಿಸಿರುತ್ತದೆ. ನಿಗಮವು ಆದಾಯ ತೆರಿಗೆಗೆ ಅನುವು ಮಾಡಿ, ಒಟ್ಟು ರೂ.16.61 ಕೋಟಿಗಳಷ್ಟು ನಿವ್ವಳ ಲಾಭ ಗಳಿಸಿರುತ್ತದೆ. ಹಾಗೂ ಸರ್ಕಾರಕ್ಕೆ ರೂ.1.22 ಕೋಟಿ ಡಿವಿಡೆಂಡ್ ನೀಡಿರುತ್ತದೆ. 2011-12ನೇ ಸಾಲಿನಲ್ಲಿ ರೂ.817.35 ಕೋಟಿ ವಹಿವಾಟು ನಿರ್ವಹಿಸಿದ್ದು, ಸುಮಾರು ರೂ.42.77 ಕೋಟಿಗಳಷ್ಟು ನಿವ್ವಳ ಲಾಭ ಗಳಿಸಿದೆ. ನಿಗಮವು ಸರ್ಕಾರದ ಎಲ್ಲಾ ಇಲಾಖೆಗಳೊಂದಿಗೆ ಸಂಪರ್ಕ ಬೆಳೆಸಿ ವಹಿವಾಟನ್ನು ಹೆಚ್ಚಿಸಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ.

**ಅಧ್ಯಾಯ–1 (ಬಿ)**

**ನಿಗಮದ ಆಸ್ತಿ ವಿವರಗಳು**

ನಿಗಮದ ಒಟ್ಟು ಆಸ್ತಿಯ ನಿವ್ವಳ ಮೊತ್ತ 2010–11ನೇ ಸಾಲಿನ ರೂ.66.48 ಕೋಟಿಯಿಂದ ಶೇ.35% ರಷ್ಟು ಹೆಚ್ಚಾಗಿ ರೂ.90.00 ಕೋಟಿಗಳಾಗಿರುತ್ತದೆ.

**ಧ್ಯೇಯೋದ್ದೇಶಗಳು**

**ಅಧ್ಯಾಯ–1(ಸಿ)**

ಗ್ರಾಮೀಣಾಭಿವೃದ್ಧಿ ಹಾಗೂ ಉದ್ಯೋಗಾಧಾರಿತ ಕಾಮಗಾರಿಗಳನ್ನು ನಿರ್ವಹಿಸುವ ಮೂಲಕ ಸ್ಥಳೀಯ ನಿರುದ್ಯೋಗಿ ಅರೆ ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸುವ ಮೂಲಕ ಗ್ರಾಮೀಣ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಬಲಗೊಳಿಸುವುದು.

ಗ್ರಾಮೀಣಾಭಿವೃದ್ಧಿ ಕಾಮಗಾರಿಗಳನ್ನು ನಿಗಮವು ನೇರವಾಗಿಯೇ ನಿರ್ವಹಿಸುವುದರಿಂದ ಮಧ್ಯವರ್ತಿಗಳು ಹಾಗೂ ಗುತ್ತಿಗೆದಾರರನ್ನು ದೂರವಿಟ್ಟು ಯೋಜನೆಗಳಿಗೆಂದು ಮೀಸಲಿಟ್ಟ ಹಣದ ಪೂರ್ಣ ಫಲವನ್ನು ಗ್ರಾಮೀಣ ಜನರಿಗೆ ತಲುಪಿಸುವುದು.

ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯಕವಾಗಿರುವಂತಹ ಮೂಲಭೂತ ಸೌಕರ್ಯಗಳನ್ನು ಕೊಡುವ ನಿಟ್ಟಿನಲ್ಲಿ ಪ್ರದೇಶಾಭಿವೃದ್ಧಿ ಕಾಮಗಾರಿಗಳು, ಜಲಸಂವರ್ಧನಾ ಕಾಮಗಾರಿಗಳು, ಪಶು ಸಂಗೋಪನೆ, ಮೀನುಗಾರಿಕೆ, ಗ್ರಾಮೀಣ ಸಂಪರ್ಕ, ಶಾಲಾ ಕಟ್ಟಡ, ವಸತಿ ಆಸ್ಪತ್ರೆಗಳು, ಸೇತುವೆಗಳ ನಿರ್ಮಾಣ ಮುಂತಾದ ಕಾಮಗಾರಿಗಳ ನಿರ್ವಹಣೆಯಲ್ಲಿ ತೊಡಗಿಸಿಕೊಳ್ಳುವುದು.

**ಅಧ್ಯಾಯ–1(ಡಿ)**

**ಪ್ರಸಕ್ತ ಕಾರ್ಯ ಯೋಜನೆಗಳು**

ನಿಗಮವು ದಿನಾಂಕ: 01–04–2012 ರಿಂದ ದಿನಾಂಕ: 31–03–2013 ರವರೆಗೆ ಜಾರಿಗೆ ಬರುವಂತೆ ಕರ್ನಾಟಕ ಪಾರದರ್ಶಕತೆ ಕಾಯ್ದೆ 1999–2000 ದಿಂದ ಸರ್ಕಾರವು ವಿನಾಯಿತಿ ನೀಡಿ, ರೂ.100.00 ಲಕ್ಷವರೆಗಿನ ಮೊತ್ತದ ಕಾಮಗಾರಿಗಳನ್ನು ನಿಗಮಕ್ಕೆ ನೇರವಾಗಿ ಪಡೆಯಲು ಅನುವು ಮಾಡಿಕೊಟ್ಟಿದ್ದು, ಪ್ರಸ್ತುತ ಅವಧಿಗೆ ನಿಗಮಕ್ಕೆ ರೂ.600.00 ಕೋಟಿ ಮೊತ್ತದ ಕಾಮಗಾರಿಗಳನ್ನು ಸಂಸ್ಥೆಯು ಪಡೆದಿರುತ್ತದೆ.

**ಅಧ್ಯಾಯ–1(ಇ)** ಮುಂದಿನ ದೃಷ್ಟಿಕೋನ

ಮುಂಬರುವ ವರ್ಷಗಳಲ್ಲಿ ಪ್ರಮುಖ ಕಾಮಗಾರಿಗಳನ್ನು ನಿರ್ವಹಿಸಿರುವ ನಿಟ್ಟಿನಲ್ಲಿ ನಿಗಮವು ಗಣನೀಯ ಸಾಧನೆ ಮಾಡಲಿದೆ. ಮುಂದಿನ ವರ್ಷಗಳಲ್ಲಿ ಒಟ್ಟಾರೆ ಕಂಪನಿಯ ಕಾರ್ಯ ನಿರ್ವಹಣೆ ಮತ್ತು ಲಾಭ ಸಾಧ್ಯತೆಯನ್ನು ಉತ್ತಮ ಪಡಿಸಲು ಸವಿವರ ಧ್ಯೇಯೋದ್ದೇಶ ಮತ್ತು ಕಾರ್ಯತಂತ್ರಗಳ ಮೂಲಕ ಭವಿಷ್ಯದ ಸವಾಲುಗಳನ್ನು ಎದುರಿಸುವ ಸ್ಥಿತಿಯಲ್ಲಿ ಕಂಪನಿ ಇದೆ. ಸರ್ಕಾರವು ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವುದರಿಂದ ಹಾಗೂ ನಿಗಮವು ಗ್ರಾಮೀಣಾಭಿವೃದ್ಧಿ ಇಲಾಖೆ ಅಡಿಯಲ್ಲಿ ಹೆಚ್ಚಿನ ಕೆಲಸಗಳನ್ನು ನಿರ್ವಹಿಸುತ್ತಿದೆ. ಸರ್ಕಾರವು ಸೆಕ್ಷನ್ 4(ಜಿ) ಕೆ.ಟಿ.ಪಿ.ಪಿ ಕಾಯಿದೆ 1999ರ ಅಡಿ

ವಿನಾಯಿತಿಯನ್ನು ನೀಡಿರುತ್ತದೆ ಇದರಿಂದ ನಿಗಮವು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ, ತೋಟಗಾರಿಕೆ, ಕೃಷಿ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಬಿಬಿಎಂಪಿ, ಬಿಎಂಆರ್‌ಸಿಎಲ್, ಇತ್ಯಾದಿ ಕಾಮಗಾರಿಗಳನ್ನು ಮುಂದಿನ 4–5 ವರ್ಷಗಳವರೆಗೆ ಪಡೆಯಲು ಸರ್ಕಾರದ ಸಹಾಯ ಬೇಕಾಗಿರುತ್ತದೆ.

**ಅಧ್ಯಾಯ–2(ಅ)**

**2011–12 ನೇ ಸಾಲಿನ ಗುರಿ ಮತ್ತು ಸಾಧನೆ (ಮಾರ್ಚ್–2012 ವರೆಗೆ)**

**(ರೂ.ಲಕ್ಷಗಳಲ್ಲಿ)**

| ಕ್ರ ಸಂ | ವಲಯ/ವಿಭಾಗ | ನಿಗಧಿಪಡಿಸಿದ ಗುರಿ (2011–12) | ಸಾಧಿಸಿದ ಪ್ರಗತಿ (2011–12 ಮಾರ್ಚ್–2012 ವರೆಗೆ) | ಗುರಿ ಮತ್ತು ಸಾಧನೆಯ ಶೇ.ವಾರು |
|---|---|---|---|---|
| 1 | **ಬೆಂಗಳೂರು ವಲಯ** (ಬೆಂಗಳೂರು,ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು) | 6000.00 | 6689.00 | 111.48% |
| 2 | ಬಿಬಿಎಂಪಿ ವಲಯ (ಬಿಬಿಎಂಪಿ (ಪೂರ್ವ), ಬಿಬಿಎಂಪಿ (ಪಶ್ಚಿಮ), | 8000.00 | 22420.00 | 280.25% |
| 3 | ಮೈಸೂರು ವಲಯ (ಮಂಡ್ಯ, ಹಾಸನ, ಮೈಸೂರು, ಮಂಗಳೂರು, ಚಿಕ್ಕಮಗಳೂರು, ಮಡಿಕೇರಿ, ಚಾಮರಾಜನಗರ) | 5900.00 | 8205.00 | 139.06% |
| 4 | ಚಿತ್ರದುರ್ಗ ವಲಯ (ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಹೂವಿನ ಹಡಗಲಿ, ಶಿವಮೊಗ್ಗ) | 9300.00 | 10920.00 | 117.41% |
| 5 | ಬೆಳಗಾಂ ವಲಯ (ಬಾಗಲಕೋಟೆ, ಕಾರವಾರ ಗೋಕಾಕ್, ಬೆಳಗಾಂ, ಚಿಕ್ಕೋಡಿ, ಕಿತ್ತೂರು, ಬಿಜಾಪುರ, ಧಾರವಾಡ) | 13300.00 | 18660.00 | 140.30% |
| 6 | ಗುಲ್ಬರ್ಗಾ ವಲಯ (ಬೀದರ್, ಗುಲ್ಬರ್ಗಾ, ಕೊಪ್ಪಳ, ರಾಯಚೂರು, ಯಾದಗಿರಿ) | 12500.00 | 14841.00 | 118.72% |
| **ಎಲ್ಲಾ ವಲಯಗಳ ಮೊತ್ತ** | | **55000.00** | **81735.00** | **148.60%** |

## ಅಧ್ಯಾಯ-2(ಬಿ)

## 2011-12ನೇ ಸಾಲಿನ ಯೋಜನಾವಾರಿ ಕಾಮಗಾರಿಗಳ ಪ್ರಗತಿ ವಿವರಗಳು

| ಕ್ರ. ಸಂ. | ಕಾಮಗಾರಿ ವಹಿಸಿದ ಇಲಾಖೆ | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ (ಲಕ್ಷ ರೂ.) | ಬಿಡುಗಡೆಯಾದ ಅನುದಾನ (2011-12) ಮಾರ್ಚ್-2012 ವರೆಗೆ | ಖರ್ಚಾದ ವೆಚ್ಚ (2011-12) ಮಾರ್ಚ್ 2012 ವರೆಗೆ | ಭೌತಿಕ ಪ್ರಗತಿ | | | ಷರಾ |
|---|---|---|---|---|---|---|---|---|---|
| | | | | | | ಪ್ರಾರಂಭಿಸಿದ ಕಾಮಗಾರಿ ಸಂಖ್ಯೆ | ಪೂರ್ಣಗೊಳಿಸಿದ ಕಾಮಗಾರಿ ಸಂಖ್ಯೆ | ಪ್ರಗತಿಯಲ್ಲಿರುವ ಕಾಮಗಾರಿಯ ಸಂಖ್ಯೆ | |
| 1 | 2 | 3 | 4 | 5 | 6 | 7 | 8 | 9 | 10 |
| 1 | ಸುವರ್ಣಗ್ರಾಮ ಹಂತ-1 | 385 | 32830.00 | 2156.08 | 2150.00 | 385 | 378 | 7 | |
| 2 | ಸುವರ್ಣಗ್ರಾಮ ಹಂತ-2 | 164 | 12985.00 | 3543.00 | 3574.00 | 164 | 16 | 148 | |
| 3 | ಸುವರ್ಣಗ್ರಾಮ ಹಂತ-3 | 587 | 36839.00 | 12342.00 | 14283.00 | 376 | 58 | 318 | |
| 4 | ಗ್ರಾಮ ಪಂಚಾಯಿತಿ ಹಂತ-1 | 269 | 4444.79 | 4317.61 | 752.00 | 246 | 167 | 79 | |
| 6 | ಗ್ರಾಮ ಪಂಚಾಯಿತಿ ಹಂತ-3 | 84 | 1389.00 | 0.00 | 247.00 | 28 | 8 | 20 | |
| 7 | ಗ್ರಾಮ ಸ್ವರಾಜ ಯೋಜನೆ | 11 | 405.95 | 120.98 | 192.00 | 11 | 6 | 5 | |
| 8 | ಯೋಜನಾ ಸೇವಾ ಮತ್ತು ಕ್ರೀಡಾ ಇಲಾಖೆ | 98 | 4553.86 | 771.34 | 726.00 | 98 | 62 | 36 | |
| 9 | ಪ್ರವಾಸೋದ್ಯಮ ಇಲಾಖೆಯ ಯಾತ್ರಿ ನಿವಾಸ | 44 | 2174.61 | 469.29 | 614.34 | 36 | 18 | 18 | ನಿವೇಶನ ಹಸ್ತಾಂತರಿಸದ ಕಾರಣ 8 ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. |

| ಕ್ರ. ಸಂ | ಕಾಮಗಾರಿ ವಹಿಸಿದ ಇಲಾಖೆ | ಕಾಮ ಗಾರಿ ಗಳ ಸಂಖ್ಯೆ | ಅಂದಾಜು ವೆಚ್ಚ | ಬಿಡುಗಡೆ ಯಾದ ಅನುದಾನ (2011–12) ಮಾರ್ಚ್–2012 ವರೆಗೆ | ಖರ್ಚಾದ ವೆಚ್ಚ (2011–12) ಮಾರ್ಚ್ 2012 ವರೆಗೆ | ಭೌತಿಕ ಪ್ರಗತಿ | | |
|---|---|---|---|---|---|---|---|---|
| | | | | | | ಪ್ರಾರಂಭಿಸಿದ ಕಾಮಗಾರಿ ಸಂಖ್ಯೆ | ಪೂರ್ಣಗೊಳಿಸಿದ ಕಾಮಗಾರಿ ಸಂಖ್ಯೆ | ಪ್ರಗತಿಯಲ್ಲಿರುವ ಕಾಮಗಾರಿಯ ಸಂಖ್ಯೆ |
| 10 | ಶೌಚಾಲಯ ಹಾಗೂ ಕುಡಿಯುವ ನೀರು | 41 | 596.00 | 93.02 | 291.00 | 37 | 30 | 7 |
| 11 | ಮೀನುಗಾರಿಕೆ ಇಲಾಖೆ | 75 | 1371.26 | 992.17 | 449.41 | 64 | 17 | 47 |
| 12 | ಪ.ಜಾ/ಪ.ಪಂ ಇಲಾಖೆ | 112 | 9462.00 | 6298.00 | 4975.00 | 112 | 13 | 99 |
| 13 | ಪಶು ಸಂಗೋಪನಾ ಇಲಾಖೆ | 70 | 604.40 | 501.94 | 422.00 | 66 | 40 | 26 |
| 14 | ವಸತಿ ಇಲಾಖೆಯ ಆಸರೆ ಮನೆಗಳು | 97 ಹಳ್ಳಿ (9847 ಮನೆಗಳು) | 6555.00 | 4000.00 | 6315.00 | 97 | 83 | 14 |
| 15 | ಬಿಬಿಎಂಪಿ ಕಾಮಗಾರಿಗಳು | 1145 | 35544.00 | 21010.00 | 22420.00 | 1145 | 518 | 627 |
| 16 | ಗಡಿನಾಡು ಪ್ರದೇಶಾಭಿವೃದ್ಧಿ ಕಾಮಗಾರಿಗಳು | 46 | 702.74 | 47.15 | 50.00 | 12 | 0 | 12 |
| 17 | ಇತರೆ ಕಾಮಗಾರಿಗಳು | 6547 | 20698.26 | 24100.00 | 23915.15 | 6547 | 1428 | 5119 |

## ಅಧ್ಯಾಯ–3
## ಸಂಸ್ಥೆಯ ನಿರ್ವಹಣೆ

ಪ್ರಗತಿಯ ವರದಿ ಪ್ರಕಾರ ಸಂಸ್ಥೆಯು ಕಳೆದ ಎಂಟು ವರ್ಷಗಳಿಂದ ಅಂದರೆ, 2004–05 ರಿಂದ 2010–11 ಮತ್ತು 2011–12 ಸಾಲಿನಲ್ಲಿ ಸಾಧಿಸಿರುವ ಪ್ರಗತಿಗಳ ವಿವರಗಳು ಈ ಕೆಳಗಿನಂತಿವೆ.

**(ರೂ. ಲಕ್ಷಗಳಲ್ಲಿ)**

| ಕ್ರ.ಸಂ | ಆರ್ಥಿಕ ವರ್ಷ | ಪ್ರಗತಿಯ ವರದಿ | ತೆರಿಗೆ ನಂತರದ ಲಾಭ ಮತ್ತು ನಷ್ಟ |
|---|---|---|---|
| 1 | 2004–05 | 24354.15 | (–) 440.09 |
| 2 | 2005–06 | 21241.18 | (–) 933.51 |
| 3 | 2006–07 | 21850.62 | (–) 597.81 |
| 4 | 2007–08 | 20506.00 | (–) 923.20 |

| | | | |
|---|---|---|---|
| 5 | 2008-09 | 34486.00 | (+)2110.00 |
| 6 | 2009-10 | 38005.00 | (+) 1678.00 |
| 7 | 2010-11 | 60121.19 | (+) 1661.00 |
| 8 | 2011-12(ಸದ್ಯದ) | 81735.00 | (+) 4277.00 (ತಾತ್ಕಾಲಿಕ) |

## ಅಧ್ಯಾಯ-5
## ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ

- ಕೆಆರ್‌ಐಡಿಎಲ್ ಸಂಸ್ಥೆಯ ಕಛೇರಿಗಳಲ್ಲಿನ ಒಟ್ಟು ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಸಂಖ್ಯೆಯನ್ನು (ಗ್ರೂಪ್ ಎ, ಬಿ, ಸಿ, ಡಿ), ಪುರುಷ ಹಾಗೂ ಮಹಿಳಾ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಸಂಖ್ಯೆಯ ತಃಖ್ತೆಯನ್ನು ಲಗತ್ತಿಸಿದೆ. ಸದರಿ ತಃಖ್ತೆಯಲ್ಲಿಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆಗಳನ್ನು ಸಹ ನೀಡಿದೆ.
- ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಖಾಲಿ ಸ್ಥಾನಗಳ ಮತ್ತು 2012 ರ ಸಾಲಿನಲ್ಲಿ ನಿವೃತ್ತಿ ಹೊಂದುವ/ ಹೊಂದಿರುವ ಸಿಬ್ಬಂದಿಗಳ ವಿವರಗಳನ್ನು ಕೂಡಾ ತಃಖ್ತೆಯಲ್ಲಿ ನೀಡಿದೆ.
- ಹೊರಗುತ್ತಿಗೆ ಮೇಲೆ 80 ಸಹಾಯಕ/ ಕಿರಿಯ ಅಭಿಯಂತರರುಗಳನ್ನು ಮತ್ತು 105 ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹಾಗೂ 12 ವಾಹನ ಚಾಲಕರನ್ನು ರಾಜ್ಯಾದ್ಯಂತ ಸಂಸ್ಥೆಯಲ್ಲಿ ನೇಮಿಸಿಕೊಳ್ಳಲಾಗಿದೆ.
- ಕೆಆರ್‌ಐಡಿಎಲ್ ಸಂಸ್ಥೆಯ ಅಧಿಕಾರಿಗಳನ್ನು / ಇಂಜಿನಿಯರುಗಳು ಹಾಗೂ ಇನ್ನಿತರೆ ಸಿಬ್ಬಂದಿಗಳನ್ನು ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸುವ ಮುಖೇನ ತಾಂತ್ರಿಕ ಹಾಗೂ ಆಡಳಿತಾತ್ಮಕ ವಿಷಯದಲ್ಲಿ ಹೆಚ್ಚಿನ ಸಾಮರ್ಥ್ಯ ಬೆಳೆಸಿಕೊಳ್ಳಲು ಸಹಕಾರ ನೀಡಲಾಗುತ್ತಿದೆ. ರಾಜ್ಯದ ಹೊರಭಾಗದಲ್ಲಿ ನಡೆದ ವಿವಿಧ ತರಬೇತಿ ಕಾರ್ಯಕ್ರಮಗಳಿಗೆ 11 ಅಧಿಕಾರಿ/ ಸಿಬ್ಬಂದಿಗಳು ಈ ವರ್ಷದಲ್ಲಿ ಹಾಜರಾಗಿರುತ್ತಾರೆ. ಹಾಗೆಯೇ ರಾಜ್ಯದಲ್ಲಿ ನಡೆದ ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ಸುಮಾರು 90ಕ್ಕೂ ಹೆಚ್ಚಿನ ಇಂಜಿನಿಯರ್/ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು.
- ಸಂಸ್ಥೆಯು ಮುಖ್ಯವಾಗಿ ಸಿವಿಲ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಏಜೆನ್ಸಿಯಾಗಿದ್ದು, ಕಾರ್ಯನಿರ್ವಹಿಸುತ್ತಿರುವ ಬಹುತೇಕ ಇಂಜಿನಿಯರುಗಳು ಬಿ.ಇ. (ಸಿವಿಲ್) ಅಥವಾ ಡಿಪ್ಲೋಮಾ ಇನ್ ಸಿವಿಲ್ ವಿದ್ಯಾರ್ಹತೆ ಹೊಂದಿದವರಾಗಿರುತ್ತಾರೆ. ಸದರಿ ಇಂಜಿನಿಯರುಗಳ ಪೈಕಿ ಎಂ.ಟೆಕ್‌ನಲ್ಲಿ ಸ್ನಾತಕೋತ್ತರ ಪದವಿ ಹೊಂದಲು ಇಚ್ಛೆ ಇರುವಂತಹ ಇಂಜಿನಿಯರುಗಳಿಗೆ ಪೂರ್ತಿ ಸಂಬಳ ನೀಡಿ ವಿದ್ಯಾರ್ಹತೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯದಡಿ ಈವರೆವಿಗೂ 05 ಇಂಜಿನಿಯರುಗಳು ಸದರಿ ಅವಕಾಶವನ್ನು ಉಪಯೋಗಿಸಿಕೊಂಡಿರುತ್ತಾರೆ. ಈ ಮುಖೇನ ಹೆಚ್ಚಿನ ವ್ಯಾಸಂಗದಿಂದಾಗಿ ಸದರಿಯವರುಗಳು ತಾಂತ್ರಿಕ ಕೌಶಲ್ಯದಲ್ಲಿ ಹೆಚ್ಚಿನ ಸಾಮರ್ಥ್ಯವನ್ನು ಬೆಳೆಸಿಕೊಂಡಿರುತ್ತಾರೆ.
- ಸಂಸ್ಥೆಗೆ ವಹಿಸಿರುವ ಕಾಮಗಾರಿಗಳ ಅನುಷ್ಠಾನಕ್ಕೆ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ರಾಜ್ಯಾದ್ಯಂತ ಪ್ರಾಜೆಕ್ಟ್ ಕಛೇರಿಗಳನ್ನು ಹೊಂದಿದ್ದು, ಕಾಮಗಾರಿಗಳ ಪರಿವೀಕ್ಷಣೆಗೆ 5 ಜಂಟಿ ನಿರ್ದೇಶಕರುಗಳು ಮತ್ತು 3 ಪ್ರಧಾನ ವ್ಯವಸ್ಥಾಪಕರುಗಳಿದ್ದು, ರಾಜ್ಯಾದ್ಯಂತ ನಿರಂತರ ಪ್ರವಾಸ

ಕೈಗೊಂಡು ಕಾಮಗಾರಿ ಪರಿವೀಕ್ಷಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಸದರಿ ಅಧಿಕಾರಿಗಳು ಅವರ ವ್ಯಾಪ್ತಿಯಲ್ಲಿ ಬರುವಂತಹ ಉಪ/ ಸಹಾಯಕ ನಿರ್ದೇಶಕರುಗಳಿಗೆ ಕಾಮಗಾರಿ ಗುಣಮಟ್ಟ ಕಾಯ್ದುಕೊಳ್ಳಲು ತಾಂತ್ರಿಕವಾಗಿ ಸಲಹೆ ನೀಡುತ್ತಿದ್ದು, ಯಾವುದೇ ಲೋಪದೋಷ ಕಂಡುಬಂದಲ್ಲಿ ತಕ್ಷಣ ಸಂಬಂಧಿಸಿದ ಇಂಜಿನಿಯರುಗಳಿಂದಲೇ ಸರಿಪಡಿಸುವ ಪದ್ಧತಿ ರೂಢಿಯಲ್ಲಿರುತ್ತದೆ.

**ಅಧ್ಯಾಯ-5(ಅ)**

**ನಿಗಮದ ಸಲಹಾ ಸೇವೆಗಳು**

ನಿಗಮವು ಆರ್ಥಿಕ ವರ್ಷ 2006-07ರಲ್ಲಿ "KLAC TECS" ಎಂಬ ಹೆಸರಿನಲ್ಲಿ ತಾಂತ್ರಿಕ ಸಲಹಾ ಸೇವೆಯನ್ನು ಪ್ರಾರಂಭಿಸಿದ್ದು (ಈಗ "KRIDL TECS") ಇದರಿಂದ ವಿವಿಧ ಇಲಾಖೆಗಳಿಗೆ ತಾಂತ್ರಿಕ ವಿನ್ಯಾಸ, ವಾಸ್ತು ಶಿಲ್ಪ, ಅಂದಾಜು ಪತ್ರಿಕೆಗಳನ್ನು ತಯಾರಿಸುವುದು, ಟೆಂಡರ್‌ಗಳಿಗಾಗಿ ತಾಂತ್ರಿಕ ಮತ್ತು ಆರ್ಥಿಕ ಬಿಡ್ ತಯಾರಿಸುವುದು, ಇ-ಟೆಂಡರಿಂಗ್ ನಲ್ಲಿ ಭಾಗವಹಿಸುವುದು ಮತ್ತು ಇಲಾಖೆಗಳು ಇ-ಟೆಂಡರಿಂಗ್ ನಲ್ಲಿ ಭಾಗವಹಿಸಲು ಸಹಕರಿಸುವುದು, ಇನ್ನಿತರೆ ಕೆಲಸಗಳನ್ನು ನಿರ್ವಹಿಸಿ ಸೇವಾ ಶುಲ್ಕವಾಗಿ ಇಲ್ಲಿಯವರೆಗೆ ರೂ.689.52 ಲಕ್ಷಗಳನ್ನು ಗಳಿಸಿರುತ್ತದೆ.

**ಅಧ್ಯಾಯ-5(ಆ)**

**ಗುಣ ನಿಯಂತ್ರಣ**

ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯು ನಿರ್ವಹಿಸುವ ಎಲ್ಲಾ ಕಾಮಗಾರಿಗಳನ್ನು ಸಂಸ್ಥೆಯ ಹಿರಿಯ ಅಧಿಕಾರಿಗಳು ಕಡ್ಡಾಯವಾಗಿ ಪರಿವೀಕ್ಷಿಸುವ ಪರಿಪಾಠವನ್ನು ಜಾರಿಗೊಳಿಸಲಾಗಿದೆ. ಅದರಂತೆ 6 ಜನ ಜಂಟಿ ನಿರ್ದೇಶಕರು ಮತ್ತು 35 ಜನ ಉಪ ನಿರ್ದೇಶಕರು ಅವರುಗಳಿಗೆ ನಿಗಧಿಪಡಿಸಿದ ಜಿಲ್ಲೆಗಳಲ್ಲಿನ ಕಾಮಗಾರಿಗಳನ್ನು ಪ್ರತಿ ಮಾಸವು ಕಡ್ಡಾಯವಾಗಿ ಪರಿವೀಕ್ಷಣೆ ಮಾಡುವುದರ ಜೊತೆಗೆ ಕಾಮಗಾರಿಯ ಮೇಲ್ವಿಚಾರಣೆಯನ್ನು ಸಹ ಮಾಡಬೇಕಾಗಿರುತ್ತದೆ. ಇದರ ಜೊತೆ ಸ್ಥಳೀಯ ತಾಂತ್ರಿಕ ಕಾಲೇಜುಗಳಿಂದಲೂ ಸಹ ಕಾಮಗಾರಿಗಳ ಪರಿವೀಕ್ಷಣೆ ಮಾಡಿಸುವ ಮೂಲಕ Third party inspection ಗೆ ಅವಕಾಶವನ್ನು ಕಲ್ಪಿಸಲಾಗಿದೆ. ಅದಲ್ಲದೇ ನಮ್ಮ ನಿಗಮದಿಂದಲೇ ವಲಯವಾರು ಕಾಮಗಾರಿಗಳ ತಪಾಸಣೆ ಮಾಡಲು ವಿವಿಧ ಪರಿಣಿತ ಸಂಸ್ಥೆಗಳನ್ನು Third party inspection ಗೆ ನೇಮಿಸಿದ್ದು, ಅವರು ಸಲ್ಲಿಸುವ ವರದಿಗಳ ಪ್ರಕಾರ ಕ್ರಮಕೈಗೊಳ್ಳಲಾಗುತ್ತದೆ. ಇದರಿಂದ ಸಂಸ್ಥೆಯ ಕಾಮಗಾರಿಗಳ ಗುಣಮಟ್ಟದ ಪ್ರಮಾಣವು ಗಣನೀಯವಾಗಿ ಹೆಚ್ಚಿರುತ್ತದೆ.

ನಿಗಮವು ಉತ್ತಮ ಗುಣಮಟ್ಟದಲ್ಲಿ ಕಾರ್ಯನಿರ್ವಹಿಸಿ ನಿಗಧಿತ ಅವಧಿಯೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದಕ್ಕಾಗಿ ಮೊದಲನೇ ಸಲ ಧಾರವಾಡದಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆಗೆ (ನೆದರ್ ಲ್ಯಾಂಡ್ ಸಹಯೋಗದೊಂದಿಗೆ) ಹಾಗೂ ಎರಡನೇ ಸಲ ಗುಲ್ಬರ್ಗಾದಲ್ಲಿ ಪೋಲಿಸ್ ಅಕಾಡೆಮಿ ಕಾಮಗಾರಿ ನಿರ್ವಹಿಸಿದ್ದಕ್ಕಾಗಿ ಪ್ರತಿಷ್ಠಿತ **"ಸರ್ವ ಮಂಗಳ"** ಪ್ರಶಸ್ತಿಯನ್ನು ಪಡೆದಿರುತ್ತದೆ.

## ಅಧ್ಯಾಯ-5(ಇ)

### ಈ-ಆಡಳಿತ

ಸರ್ಕಾರದಿಂದ ಹೊರಡಿಸಿದ ಕೆ.ಪಿ.ಟಿ.ಸಿ ಕಾಯ್ದೆ 1999 ಹಾಗೂ ಮಾಹಿತಿ ಹಕ್ಕು ಕಾಯ್ದೆ 2000ಅನ್ನು ಈ ಕಂಪನಿಯಲ್ಲಿ ಎಲ್ಲಾ ಹಂತದ ಚಟುವಟಿಕೆಗಳಲ್ಲಿ ಅನುಸರಿಸಲಾಗುತ್ತಿದೆ. ಇದಕ್ಕಾಗಿ ಕೆಆರ್‌ಐಡಿಎಲ್ ಸಂಸ್ಥೆಯಲ್ಲಿ ಎಲ್ಲಾ ವಿಭಾಗ ಮಟ್ಟದಲ್ಲಿ ಗಣಕೀಕರಣಗೊಳಿಸಲಾಗಿದ್ದು, 2009-10ನೇ ಸಾಲಿನಿಂದಲೇ ಎಲ್ಲಾ ಲೆಕ್ಕಪತ್ರಗಳನ್ನು Tally Accounting System ನಲ್ಲಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಹಾಗೆಯೇ ಎಲ್ಲಾ ವಿಭಾಗಗಳಲ್ಲಿ ಇಂಟರ್ ನೆಟ್ ಸೌಲಭ್ಯಗಳನ್ನು ಕೂಡ ಒದಗಿಸಲಾಗಿದೆ ಹಾಗೂ ಎಲ್ಲಾ ಲೆಕ್ಕಪತ್ರ ಸಿಬ್ಬಂದಿಗಳಿಗೆ Tally 9.00 ರಲ್ಲಿ ತರಬೇತಿ ನೀಡಲಾಗಿದೆ.

## ಅಧ್ಯಾಯ-5(ಈ)

### ಆಂತರಿಕ ತರಬೇತಿ

ಕೆಆರ್‌ಐಡಿಎಲ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಹೆಚ್ಚಿನ ಪರಿಜ್ಞಾನ ಹೊಂದಲು ಅನುಕೂಲವಾಗುವುದಕ್ಕೆ ಹಾಗೂ ಕಟ್ಟಡ ನಿರ್ಮಾಣ ತಂತ್ರಜ್ಞಾನ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಸಂಸ್ಥೆಯಲ್ಲಿಯೇ ಹಮ್ಮಿಕೊಳ್ಳಲಾಗಿರುತ್ತದೆ. ಸುಮಾರು 120 ಸಿಬ್ಬಂದಿಗಳಿಗೆ ಟ್ಯಾಲಿ ಅಕೌಂಟಿಂಗ್ ಸಿಸ್ಟಮ್‌ನ ತರಬೇತಿಯನ್ನು ನೀಡಲಾಗಿದೆ. ಅದೇರೀತಿ ತಾಂತ್ರಿಕ ಹಾಗೂ ಇತರೆ ಸಿಬ್ಬಂದಿಗಳಿಗೆ ಹೆಚ್ಚಿನ ಸಾಮರ್ಥ್ಯ ವೃದ್ಧಿಸಿಕೊಳ್ಳಲು ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗಿರುತ್ತದೆ.

**ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ.**
**2011-12ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರ**

| ಕ್ರ. ಸಂ. | ವರ್ಗ | ಒಟ್ಟು ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾ. | ಪ.ಪಂ. |
|---|---|---|---|---|---|---|
| 1 | ಎ | 135 | 132 | 3 | 20 | 9 |
| 2 | ಬಿ | 176 | 171 | 5 | 20 | 8 |
| 3 | ಸಿ | 269 | 243 | 26 | 30 | 9 |
| 4 | ಡಿ | 386 | 360 | 26 | 60 | 24 |

**2011-12ನೇ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರ**

| ಕ್ರ.ಸಂ. | ಹುದ್ದೆ | ಸಂಖ್ಯೆ |
|---|---|---|
| 1 | ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರು | 80 |
| 2 | ಡಾಟಾ ಎಂಟ್ರಿ ಆಪರೇಟರ್ಸ್ ಮತ್ತು ಗ್ರೂಪ್ ಡಿ | 105 |
| 3 | ವಾಹನ ಚಾಲಕರು | 12 |
| 4 | ಆಪ್ತ ಸಹಾಯಕರು | 0 |
| 5 | ಸಲಹೆಗಾರರು | 0 |
| 6 | ಇತರೆ | 0 |
| | **ಒಟ್ಟು** | **197** |

**2012ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದುವ ಸಿಬ್ಬಂದಿಗಳ ವಿವರ**

| ಕ್ರ.ಸಂ. | ವರ್ಗ | ಒಟ್ಟು ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ |
|---|---|---|
| 1 | ಎ | 5 |
| 2 | ಬಿ | 1 |
| 3 | ಸಿ | 13 |
| 4 | ಡಿ | 15 |
| | **ಒಟ್ಟು** | **34** |

* * *

## 6.6 ಸುವರ್ಣ ಗ್ರಾಮೋದಯ ಯೋಜನೆ

ಘನತೆವೆತ್ತ ಭಾರತದ ರಾಷ್ಟ್ರಪತಿಗಳು ದಿನಾಂಕ 25.02.2007 ರಂದು ಸುವರ್ಣ ಗ್ರಾಮೋದಯ ಯೋಜನೆಗೆ ಚಾಲನೆ ನೀಡಿರುತ್ತಾರೆ.

ಲೆಕ್ಕ ಶೀರ್ಷಿಕೆ:

1 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು

2 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ

3 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ

ಸುವರ್ಣ ಗ್ರಾಮೋದಯ ಯೋಜನೆಯು ರಾಜ್ಯ ವಲಯ ಯೋಜನೆಯಾಗಿರುತ್ತದೆ.

ಸುವರ್ಣ ಗ್ರಾಮೋದಯ ಯೋಜನೆಯು ಕರ್ನಾಟಕ ಸರ್ಕಾರದ ಒಂದು ವಿನೂತನ ಯೋಜನೆಯಾಗಿದ್ದು, ಗ್ರಾಮೀಣ ಅಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಟಿತ್ವವನ್ನು ಹೊಂದುವ ಮೂಲಕ ಬಲಿಷ್ಠ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿಪಡಿಸುವುದಾಗಿದೆ. ವಿಶಾಲ ಕರ್ನಾಟಕವು ರಚನೆಯಾದ ನಂತರ ರಾಜ್ಯವು ಸುವರ್ಣ ಮಹೋತ್ಸವ ಆಚರಣೆಯ ಸುಸಂದರ್ಭದಲ್ಲಿ ಈ ಒಂದು ಹೊಸ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಖಾಸಗಿ ವಲಯದ ಭಾಗೀದಾರರು ಮತ್ತು ಗ್ರಾಮ ಸಮುದಾಯಗಳ ಸಹಭಾಗಿತ್ವದ ಒಟ್ಟುಗೂಡಿದ ಪ್ರಯತ್ನಗೊಂದಿಗೆ ಪ್ರತಿ ವರ್ಷ 1000 ಗ್ರಾಮಗಳನ್ನು ಅಭಿವೃದ್ಧಿಪಡಿಸುವುದು.

**ಯೋಜನೆಯ ಧ್ಯೇಯೋದ್ದೇಶಗಳು:**

1. ಆಯ್ಕೆಯಾದ ಗ್ರಾಮಗಳ ಜನಜೀವನ ಗುಣಮಟ್ಟವನ್ನು ಉತ್ತಮಗೊಳಿಸಲು ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು.
2. ಭೂ ಆಧಾರಿತ ಚಟುವಟಿಕೆಗಳಲ್ಲಿ ಆದಾಯವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವುದು.

3. ಶಿಕ್ಷಣ, ಆರೋಗ್ಯ ಸೇವೆಗಳು, ಮಕ್ಕಳ ಯೋಗಕ್ಷೇಮ ಸೌಲಭ್ಯ ಇತ್ಯಾದಿಗಳನ್ನೊಳಗೊಂಡಂತೆ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸಾಕಷ್ಟು ಹಾಗೂ ಪೂರ್ಣ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
4. ವಿಶೇಷವಾಗಿ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಸೃಜಿಸುವುದು.
5. ಸ್ವಸಹಾಯ ಗುಂಪುಗಳು, ಸಾಂಸ್ಕೃತಿಕ ಸಂಘಗಳು ಮುಂತಾದುವುಗಳ ಮೂಲಕ ಸಮುದಾಯ ಜಾಗೃತಿ ಮತ್ತು ಅಭಿವೃದ್ಧಿಗೆ ನೆರವಾಗುವುದು.

### ಗ್ರಾಮಗಳ ಆಯ್ಕೆ:

ಪ್ರತಿ ವ್ಯಕ್ತಿಗೆ ಅಂದಾಜು ರೂ. 2500 ರಿಂದ 3000ದ ವರೆಗೆ ಹೆಚ್ಚುವರಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗನುಗುಣವಾಗಿ ತಾಲ್ಲೂಕಿನ ಜನಸಂಖ್ಯೆಯನ್ನು ನಿಗದಿಪಡಿಸಲಾಗಿದೆ.

ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳ ಗ್ರಾಮೀಣ ಜನಸಂಖ್ಯೆ/ಮತದಾರರ ಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ತಾಲ್ಲೂಕಿಗೆ ನಿಗದಿಪಡಿಸಿದ ಜನಸಂಖ್ಯೆ ಮಿತಿಯೊಳಗೆ ಸಾಮಾನ್ಯವಾಗಿ 2500 ರಿಂದ 8000 ಜನಸಂಖ್ಯೆಯಿರುವ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸಿ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಆದರೆ ಪಶ್ಚಿಮಘಟ್ಟ ಮತ್ತು ಬೆಟ್ಟಗುಡ್ಡಗಾಡು ಪ್ರದೇಶಗಳ ಜನಸಂಖ್ಯೆ ಮಿತಿಯಲ್ಲಿ ಸ್ವಲ್ಪಮಟ್ಟಿಗೆ ಸಡಿಲಗೊಳಿಸಿದೆ.

### ಯೋಜನಾ ಅನುದಾನ ವಿವರ:

ಸರಾಸರಿ 700 ರಿಂದ 750 ಕುಟುಂಬಗಳಿರುವ ಮಧ್ಯಮ ಗಾತ್ರದ ಗ್ರಾಮದಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ ನಿಧಿಯಿಂದ ಸುಮಾರು 1.00 ಕೋಟಿ ಅಂದಾಜಿನಲ್ಲಿ ಅಭಿವೃದ್ಧಿ ಚಟುವಟಿಕೆಯನ್ನು ಹಮ್ಮಿಕೊಳ್ಳಲಾಗಿದೆ.

### 1ನೇ ಹಂತದ ಅನುಷ್ಠಾನ ವಿವರ:

- ಆಯ್ಕೆಯಾದ ಗ್ರಾಮಗಳ ಸಂಖ್ಯೆ: 1204
- ರಸ್ತೆ ಮತ್ತು ಚರಂಡಿ ಕಾಮಗಾರಿ ಪೂರ್ಣಗೊಂಡ ಗ್ರಾಮಗಳು: 1139
- ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿ ಪೂರ್ಣಗೊಂಡ ಗ್ರಾಮಗಳು: 1113
- ರಸ್ತೆ ಕಾಮಗಾರಿ ಪೂರ್ಣಗೊಂಡ ಉದ್ದ(ಕಿ.ಮೀ): 2876 ಕಿ,ಮೀ
- ಚರಂಡಿ ಕಾಮಗಾರಿ ಪೂರ್ಣಗೊಂಡ ಉದ್ದ(ಕಿ.ಮೀ): 2324 ಕಿ.ಮೀ
- ಅಂಗನವಾಡಿ ಮತ್ತು ಸಮುದಾಯ ಭವನ ಪೂರ್ಣಗೊಂಡ ಕಟ್ಟಡಗಳು: 2263

## 2ನೇ ಹಂತದ ಅನುಷ್ಠಾನ ವಿವರ:

- ಆಯ್ಕೆಯಾದ ಗ್ರಾಮಗಳ ಸಂಖ್ಯೆ: 222
- ರಸ್ತೆ ಮತ್ತು ಚರಂಡಿ ಕಾಮಗಾರಿ ಪೂರ್ಣಗೊಂಡ ಗ್ರಾಮಗಳು: 109
- ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿ ಪೂರ್ಣಗೊಂಡ ಗ್ರಾಮಗಳು: 29
- ರಸ್ತೆ ಕಾಮಗಾರಿ ಪೂರ್ಣಗೊಂಡ ಉದ್ದ(ಕಿ.ಮೀ): 318 ಕಿ,ಮೀ
- ಚರಂಡಿ ಕಾಮಗಾರಿ ಪೂರ್ಣಗೊಂಡ ಉದ್ದ(ಕಿ.ಮೀ): 192 ಕಿ.ಮೀ
- ಅಂಗನವಾಡಿ ಮತ್ತು ಸಮುದಾಯ ಭವನ ಪೂರ್ಣಗೊಂಡ ಕಟ್ಟಡಗಳು: 144

## 3ನೇ ಹಂತದ ಅನುಷ್ಠಾನ ವಿವರ:

- ಆಯ್ಕೆಯಾದ ಗ್ರಾಮಗಳ ಸಂಖ್ಯೆ: 1574
- ರಸ್ತೆ ಮತ್ತು ಚರಂಡಿ ಕಾಮಗಾರಿ ಪೂರ್ಣಗೊಂಡ ಗ್ರಾಮಗಳು: 256
- ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿ ಪೂರ್ಣಗೊಂಡ ಗ್ರಾಮಗಳು: 63
- ರಸ್ತೆ ಕಾಮಗಾರಿ ಪೂರ್ಣಗೊಂಡ ಉದ್ದ(ಕಿ.ಮೀ): 1500 ಕಿ,ಮೀ
- ಚರಂಡಿ ಕಾಮಗಾರಿ ಪೂರ್ಣಗೊಂಡ ಉದ್ದ(ಕಿ.ಮೀ): 667 ಕಿ.ಮೀ
- ಅಂಗನವಾಡಿ ಮತ್ತು ಸಮುದಾಯ ಭವನ ಪೂರ್ಣಗೊಂಡ ಕಟ್ಟಡಗಳು: 439

4ನೇ ಹಂತದಡಿ ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳಲ್ಲಿ 381 ಗ್ರಾಮಗಳನ್ನು ಆಯ್ಕೆ ಮಾಡಿ, ಆಯ್ಕೆಯಾದ ಗ್ರಾಮಗಳ ಗ್ರಾಮಾಭಿವೃದ್ಧಿ ಯೋಜನೆಗಳನ್ನು ತಯಾರಿಸಿ, ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.

ಕಾರ್ಯಕ್ರಮದ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರ: (ರೂ. ಕೋಟಿಗಳಲ್ಲಿ)
ಜಿಲ್ಲಾವಾರು ವಿವರವನ್ನು ಅನುಬಂಧ–6.1(ಅ) ಮತ್ತು 6.1(ಆ) ರಲ್ಲಿ ನೀಡಲಾಗಿದೆ.

| ವರ್ಷ | ಆಯವ್ಯಯ (ಬಂಡವಾಳ) | ಪ್ರಾರಂಭಿಕ ಶಿಲ್ಕು | ಬಿಡುಗಡೆ | ವ್ಯಪಗತ (ಜಿಲ್ಲೆಯಲ್ಲಿ) | ಲಭ್ಯವಿರುವ ಅನುದಾನ | ವೆಚ್ಚ | ರಸ್ತೆ ಮತ್ತು ಚರಂಡಿ ಕಾಮಗಾರಿ ಪೂರ್ಣಗೊಂಡ ಗ್ರಾಮಗಳು |
|---|---|---|---|---|---|---|---|
| 2006–07 | 200.00 | – | 164.70 | 1.47 | 163.24 | – | – |
| 2007–08 | 350.00 | 163.24 | 188.67 | 8.11 | 343.80 | 213.09 | – |
| 2008–09 | 300.00 | 130.70 | 297.99 | 2.77 | 425.92 | 364.64 | 566 |
| 2009–10 | 302.00 | 61.28 | 300.25 | – | 361.53 | 251.41 | 471 |
| 2010–11 | 402.79 | 110.13 | 402.79 | – | 512.92 | 431.07 | 95 |
| 2011–12 | 750.00 | 81.85 | 700.00 | – | 781.85 | 445.31 | 372 |

## ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳ ವಿವರ (ಸಂಖ್ಯೆ)

| ಕ್ರ.ಸಂ | ಜಿಲ್ಲೆ | 1ನೇ ಹಂತ: | 2ನೇ ಹಂತ: | ನೇ ಹಂತ: | 4ನೇ ಹಂತ: | ಒಟ್ಟು |
|---|---|---|---|---|---|---|
| 1 | ಬಾಗಲಕೋಟೆ | 45 | | 42 | | **87** |
| 2 | ಬೆಂಗಳೂರು-ನ | 24 | | 32 | | **56** |
| 3 | ಬೆಂಗಳೂರು-ಗ್ರಾ | 31 | | 40 | | **71** |
| 4 | ಬೆಳಗಾವಿ | 97 | | 88 | | **185** |
| 5 | ಬಳ್ಳಾರಿ | 32 | 38 | 38 | **48** | **156** |
| 6 | ಬೀದರ್ | 49 | 35 | 46 | **68** | **198** |
| 7 | ಬಿಜಾಪುರ | 34 | | 47 | | **81** |
| 8 | ಚಿಕ್ಕಬಳ್ಳಾಪುರ | 34 | | 56 | | **90** |
| 9 | ಚಾಮರಾಜನಗರ | 24 | | 25 | | **49** |
| 10 | ಚಿಕ್ಕಮಗಳೂರು | 30 | | 72 | | **102** |
| 11 | ಚಿತ್ರದುರ್ಗ | 32 | | 52 | | **84** |
| 12 | ದಕ್ಷಿಣ ಕನ್ನಡ | 32 | | 33 | | **65** |
| 13 | ದಾವಣಗೆರೆ | 35 | | 48 | | **83** |
| 14 | ಧಾರವಾಡ | 16 | | 16 | | **32** |
| 15 | ಗದಗ | 19 | | 21 | | **40** |
| 16 | ಗುಲ್ಬರ್ಗಾ | 43 | 44 | 68 | **82** | **237** |
| 17 | ಹಾಸನ | 102 | | 118 | | **220** |
| 18 | ಹಾವೇರಿ | 29 | | 40 | | **69** |
| 19 | ಕೊಡಗು | 21 | | 16 | | **37** |
| 20 | ಕೋಲಾರ | 46 | | 85 | | **131** |
| 21 | ಕೊಪ್ಪಳ | 31 | 25 | 32 | **61** | **149** |
| 22 | ಮಂಡ್ಯ | 61 | | 83 | | **144** |
| 23 | ಮೈಸೂರು | 46 | | 78 | | **124** |
| 24 | ರಾಮನಗರ | 34 | | 54 | | **88** |
| 25 | ರಾಯಚೂರು | 47 | 50 | 59 | **63** | **219** |
| 26 | ಶಿವಮೊಗ್ಗ | 45 | | 57 | | **102** |
| 27 | ತುಮಕೂರು | 67 | | 98 | | **165** |
| 28 | ಉತ್ತರ ಕನ್ನಡ | 48 | | 66 | | **114** |
| 29 | ಉಡುಪಿ | 26 | | 26 | | **52** |
| 30 | ಯಾದಗೀರ | 24 | 30 | 38 | **59** | **151** |
| | **ಒಟ್ಟು** | 1204 | 222 | 1574 | **381** | **3381** |

**ಟಿಪ್ಪಣಿ:** 2ನೇ ಮತ್ತು 4ನೇ ಹಂತದ ಯೋಜನೆಯು ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳಲ್ಲಿ ಜಾರಿಯಲ್ಲಿರುತ್ತದೆ.

**ಇಲಾಖೆಯ ಹಾಗೂ ಅಧೀನ ಕಾರ್ಯಾಲಯಗಳು ನಡೆಸಿರುವ ಮೌಲ್ಯಮಾಪನ ವರದಿಗಳು:**

| ವರ್ಷ | ಯೋಜನೆಯ ಹೆಸರು | ಮೌಲ್ಯ ಮಾಪನ ಅಧ್ಯಯನ ಕೈಗೊಂಡಿರುವುದು (ಸಂ.) | ಅಧ್ಯಯನ ವರದಿಗಳು ಸ್ವೀಕೃತಿ |
|---|---|---|---|
| 2008-09 | - | - | - |
| 2009-10 | ಸುವರ್ಣ ಗ್ರಾಮೋದಯ ಯೋಜನೆ | 2 | 1 |
| 2010-11 | - | - | - |
| 2011-12 | - | - | - |

**ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ:**

**2011-12ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ/ ಸಿಬ್ಬಂದಿಗಳ ವಿವರ:**

| ಕ್ರ.ಸಂ. | ವರ್ಗ | ಒಟ್ಟು ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಪುರುಷರು ಸಂಖ್ಯೆ | ಮಹಿಳೆಯರು ಸಂಖ್ಯೆ | ಪ.ಜಾ | ಪ.ಪಂ. |
|---|---|---|---|---|---|---|
| 1 | A | 1 | 1 | - | - | - |
| 2 | B | - | - | - | - | - |
| 3 | C | 2 | 1 | 1 | - | - |
| 4 | D | 1 | 1 | - | - | - |

**2011-12ನೇ ಸಾಲಿನಲ್ಲಿ ಖಾಲಿ ಇರುವ, ನಿವೃತ್ತಿಯಾದ/ನಿವೃತ್ತಿಯಾಗಲಿರುವವರ ವಿವರ:**

| ಕ್ರ.ಸಂ. | ವರ್ಗ | ಖಾಲಿ ಹುದ್ದೆಗಳು | ನಿವೃತ್ತಿಯಾದವರು | ನಿವೃತ್ತಿಯಾಗಲಿರುವವರು |
|---|---|---|---|---|
| 1 | A | 1 | - | - |
| 2 | B | 1 | - | - |
| 3 | C | 2 | - | - |
| 4 | D | - | - | - |

**ವಿಧಾನ ಸಭಾ/ವಿಧಾನ ಪರಿಷತ್ ಪ್ರಶ್ನೆಗಳು:**

| ವಿವರ | ವರ್ಷ | | | |
|---|---|---|---|---|
| | 2008-09 | 2009-10 | 2010-11 | 2011-12 |
| ಸ್ವೀಕೃತವಾದ ಪ್ರಶ್ನೆಗಳ ಸಂಖ್ಯೆ | 5 | 11 | 19 | 32 |
| ಉತ್ತರಿಸಿದ ಪ್ರಶ್ನೆಗಳ ಸಂಖ್ಯೆ | 5 | 11 | 19 | 32 |
| ಲೋಕಸಭಾ ಪ್ರಶ್ನೆಗಳಿಗೆ ಸಂಬಂಧವಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ ಮಾಹಿತಿಗಳು | - | - | - | - |

**2011-12ನೇ ಸಾಲಿನಲ್ಲಿ ಮಾಹಿತಿ ಹಕ್ಕು ನಿಯಮ ಅನುಷ್ಠಾನ:**
**ಯೋಜನೆ/ಶಾಖೆಯ ಹೆಸರು: ಸುವರ್ಣ ಗ್ರಾಮೋದಯ ಯೋಜನೆ**

| ಮಾಹಿತಿ ಹಕ್ಕು ಕಾಯ್ದೆಯಡಿಯ ಪ್ರಕರಣಗಳು | | | | |
|---|---|---|---|---|
| ಸ್ವೀಕೃತವಾದ ಅರ್ಜಿಗಳು | ಉತ್ತರಿಸಿದ ಅರ್ಜಿಗಳು | ತಿರಸ್ಕರಿಸಿದ ಅರ್ಜಿಗಳು | ಅಪೀಲು ಪ್ರಕರಣಗಳಲ್ಲಿ ಬಾಕಿ ಇರುವ ಸಂಖ್ಯೆ | ಷರಾ |
| 5 | 5 | – | – | – |

* *

## 6.7 ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ

**ಯೋಜನೆಯ ದೂರದೃಷ್ಟಿ, ನಿರ್ದಿಷ್ಟ ಪಡಿಸಿದ ಗುರಿ ಮತ್ತು ಉದ್ದೇಶಗಳು:**

- ಗುಡ್ಡಗಾಡು ಪ್ರದೇಶಗಳ ಅಭಿವೃದ್ಧಿ
- ಅರಣ್ಯ ಸಂರಕ್ಷಣೆ ಮತ್ತು ಪರಿಸರ ನಿರ್ವಹಣೆ
- ಗುಡ್ಡಗಾಡು ಪ್ರದೇಶಗಳಲ್ಲಿನ ಕೃಷಿಕರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು
- ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವವರಿಗೆ ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಚಟುವಟಿಕೆಗಳನ್ನು ಒದಗಿಸುವುದು
- ಈ ಪ್ರದೇಶಗಳಲ್ಲಿನ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವುದು
- ಗುಡ್ಡಗಾಡು ಪ್ರದೇಶಗಳಲ್ಲಿ ಎರಡನೇ ಬೆಳೆಯನ್ನು ಬೆಳೆಯಲು ಅನುಕೂಲವಾಗುವಂತೆ ಕಿಂಡಿ ಅಣೆಕಟ್ಟು ಮತ್ತು ಕಾಲುಸಂಕಗಳ ನಿರ್ಮಾಣವನ್ನು ಕೈಗೊಳ್ಳುವುದು.

**ನಿರ್ದಿಷ್ಟ ಪಡಿಸಿದ ಗುರಿ:**

- ಜಲಾನಯನ ಕಾಮಗಾರಿಗಳನ್ನು ಹಮ್ಮಿಕೊಂಡು ನೀರು ಸರಬರಾಜನ್ನು ಕಲ್ಪಿಸಿ ಸವಕಳಿಯನ್ನು ತಡೆಗಟ್ಟುವುದು ಮತ್ತು ಪರಿಸರವನ್ನು ಕಾಪಾಡುವುದು
- ಈ ಪ್ರದೇಶಗಳಲ್ಲಿರುವ ನೀರಾವರಿ ಕಾಲುವೆಗಳ ಅಭಿವೃದ್ಧಿ ಮತ್ತು ದುರಸ್ತಿಗೊಳಿಸುವುದು
- ಪರಿಸರ ಸಂರಕ್ಷಣೆಗೆ ಅರಣ್ಯೀಕರಣವನ್ನು ಅರಣ್ಯ ಇಲಾಖೆಯ ವತಿಯಿಂದ ಹಮ್ಮಿಕೊಂಡು ಔಷದೀಯ ಗುಣಗಳ ಸಸ್ಯಗಳನ್ನು, ಬಿದಿರು, ಹಣ್ಣಿನ ಮರಗಳನ್ನು ಹಾಗೂ ಜತ್ರೋಪ ಸಸ್ಯಗಳನ್ನು ಬೆಳೆಸುವುದು
- ಗುಡ್ಡಗಾಡು ಪ್ರದೇಶಗಳಲ್ಲಿ ಎರಡನೇ ಬೆಳೆಯನ್ನು ಬೆಳೆಯಲು ಅನುಕೂಲವಾಗುವಂತೆ ಕಿಂಡಿ ಅಣೆಕಟ್ಟು ಮತ್ತು ಕಾಲುಸಂಕಗಳ ನಿರ್ಮಾಣವನ್ನು ಕೈಗೊಳ್ಳುವುದು.
- ವರಮಾನ ಬೆಳೆಗಳಾದ ಔಷದೀಯ ಸಸ್ಯಗಳು, ಬಿದಿರು, ಜತ್ರೋಪ ಮತ್ತು agro forestry ಬೆಳೆಗಳನ್ನು ಬೆಳೆಯಲು ಯೋಜನೆಗಳನ್ನು ಹಮ್ಮಿಕೊಳ್ಳುವುದು

- ಮೀನು ಕೊಳಗಳ ಅಭಿವೃದ್ಧಿ, ಗಿರಿರಾಜ ಕೋಳಿಗಳನ್ನು ಸಾಕುವುದು ಮತ್ತು ಜೇನು ಸಾಕಾಣಿಕೆ ಕಾರ್ಯಗಳನ್ನು ಅಭಿವೃದ್ಧಿಗೊಳಿಸುವುದು
- ಹೊಲಿಗೆ ಯಂತ್ರ, ಕೂಲಿ ಸಾಮಗ್ರಿಗಳು, ಹುಲ್ಲು ಮತ್ತು ಬಡಗಿ ಕೆಲಸದ ಸಾಮಗ್ರಿಗಳು ಹಾಗೂ ಕೈತೋಟ ನಿರ್ವಹಿಸಲು ಬೇಕಾದ ಸಾಮಗ್ರಿಗಳನ್ನು ಒದಗಿಸುವುದು

**ಉದ್ದೇಶ:**

- ಗುಡ್ಡಗಾಡು ಪ್ರದೇಶಗಳ ಮತ್ತು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಸಾಮರ್ಥ್ಯ ಹೆಚ್ಚಿಸುವ ಮತ್ತು ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು
- ಪರಿಸರ ಸಂರಕ್ಷಣೆಗೆ ಅವಶ್ಯವಿರುವ ಕಾಮಗಾರಿಗಳನ್ನು ಹಮ್ಮಿಕೊಳ್ಳುವುದು
- ಭೂಸಾರ ಮತ್ತು ನೀರಿನ ಸಂರಕ್ಷಣೆಗಾಗಿ ಜಮೀನಿನ ಸಮತಟ್ಟು, ಬೆಂಚ್ ಟೆರೇಸಿಂಗ್, ಜಮೀನುಗಳ ಆಕೃತಿಯನ್ನು ಬದಲಾಯಿಸುವುದು, ಭತ್ತ ಬೆಳೆಯುವ ಪ್ರದೇಶಗಳನ್ನು ಒಗ್ಗೂಡಿಸುವುದು ಮತ್ತು ಬದುಗಳ ನಿರ್ಮಾಣ ನಿರ್ವಹಿಸುವುದು
- ನೀರಿನ ಕೊಯಿಲು ಮಾಡುವ ಸಲುವಾಗಿ ತಡೆ ಅಣೆಕಟ್ಟು, ಕಿಂಡಿ ಅಣೆಕಟ್ಟು, ಕಾಲುವೆಗಳ ಬದು ನಿರ್ಮಾಣ, ದಪ್ಪ ಕಲ್ಲಿನ ಬದು ನಿರ್ಮಾಣ, gully checks ಮುಂತಾದವುಗಳ ನಿರ್ಮಾಣ
- ಹರಿಯುವ ನೀರನ್ನು ತಡೆಗಟ್ಟಲು farm ponds, diversion channels, ನೀರು ಹರಿಯುವ ದಾರಿಗಳನ್ನು ಮತ್ತು ನೀರು ಪೂರ್ಣವಾಗಿ ಇಂಗದಿರುವಂತೆ ಹುಲ್ಲಿನ ಬದುಗಳ ನಿರ್ಮಾಣ
- ಭೂಸಾರ ಸಂರಕ್ಷಣೆ, ಪರಿಸರ ರಕ್ಷಣೆ ಮತ್ತು ಜೀವನ ನಿರ್ವಹಣೆಗೆ ಅವಶ್ಯವಿರುವ ಕ್ರಮಗಳನ್ನು ಸಮುದಾಯದ ವತಿಯಿಂದ ನಿರ್ವಹಿಸುವುದು
- ಜಲಾನಯನ ಸಂಬಂಧಿತ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು
- ನೈಸರ್ಗಿಕ ಗೊಬ್ಬರ, ಬೀಜ, ಇತರೆ ಅಳವಡಿಕೆಗಳನ್ನು ಈ ಪ್ರದೇಶಗಳಲ್ಲಿ ಉಪಯೋಗಿಸಲು ಅವಶ್ಯವಿರುವ ತಾಂತ್ರಿಕ, ಸಲಕರಣೆಗಳು, ಸಾಮಗ್ರಿಗಳನ್ನು ಒದಗಿಸುವುದು
- ವರಮಾನ ಸೃಷ್ಠಿಸುವ ಸಲುವಾಗಿ ಔಷದೀಯ ಗುಣಗಳ ಸಸ್ಯಗಳನ್ನು, ಬಿದಿರು, ಹಣ್ಣಿನ ಮರಗಳನ್ನು ಹಾಗೂ ಜತ್ರೋಪ ಸಸ್ಯಗಳನ್ನು ಬೆಳೆಸುವುದು
- ನೀರಿನ ಕೊಳವೆಗಳ ಅಳವಡಿಕೆ, ಕಾಲುಸಂಕಗಳ ನಿರ್ಮಾಣ ಮತ್ತು ಅಂತರಗಳನ್ನು ಮುಚ್ಚಲು ಮೂಲಸೌಕರ್ಯಗಳನ್ನು ಒದಗಿಸುವುದು
- ಕೃತಕ ವೀರ್ಯ ಒದಗಿಸುವುದು, ತಳಿಗಳ ಅಭಿವೃದ್ಧಿ, ಮೇವಿನ ಬೆಳೆ ಬೆಳೆಯುವ ಜಮೀನು ಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಪಶುಸಂಗೋಪನೆ ಕಾರ್ಯಕ್ರಮಗಳನ್ನು ಸರ್ಕಾರಿ ಫಾರಂಗಳಲ್ಲಿ ಹಮ್ಮಿಕೊಳ್ಳುವುದು. ಜೊತೆಗೆ ಹಂದಿ, ಮೊಲ, ಕೋಳಿ ಸಾಕಾಣಿಕೆ ಮಾಡುವುದು/ಅಭಿವೃದ್ಧಿ ಪಡಿಸುವುದು. ಈ ಪ್ರದೇಶಗಳಲ್ಲಿ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳುವುದು, ಔಷದಿ ಮತ್ತು ಪೌಷ್ಟಿಕಾಂಶಗಳ ವಿತರಣೆ ಮಾಡುವುದು
- ಸಾಂಬಾರು ಬೆಳೆಗಳ ಅಭಿವೃದ್ಧಿ/ಉತ್ಪತ್ತಿಗಾಗಿ ಸಾಂಬಾರು ಮಂಡಳಿಯ ಕಾರ್ಯವ್ಯಾಪ್ತಿಯ ನಿಯಂತ್ರಣ ಮತ್ತು ಅನುದಾನವನ್ನು ನಿರಂತರವಾಗಿ ನೀಡುವುದು.

**ಶಾಖೆಯ ರಚನೆ:**




**ಅಧ್ಯಾಯ–2**

ಈ ಸಾಲಿಗೆ ರೂ.3230.00 ಲಕ್ಷಗಳ ಅನುದಾನವನ್ನು ಕೇಂದ್ರ ಸರ್ಕಾರದ ಯೋಜನಾ ಇಲಾಖೆಯು ನಿಗದಿ ಪಡಿಸಿದ್ದು, ಈ ಮೊತ್ತದ 90:10ರ ಅನುಪಾತದಲ್ಲಿ ಕೇಂದ್ರ ಸರ್ಕಾರವು ರೂ.2907.00 ಲಕ್ಷಗಳನ್ನು ಹಾಗೂ ರಾಜ್ಯ ಸರ್ಕಾರವು ರೂ.323.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತವೆ.

**ಕಳೆದ ಐದು ವರ್ಷಗಳಲ್ಲಿ ಸಾಧಿಸಿದ ಆರ್ಥಿಕ ಪ್ರಗತಿಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.**

**(ಕೋಟಿ ರೂ.ಗಳಲ್ಲಿ)**

| ವರ್ಷ | ಗುರಿ | ಸಾಧನೆ |
|---|---|---|
| 2007–08 | 24.18 | 18.43 |
| 2008–09 | 29.24 | 25.64 |
| 2009–10 | 29.24 | 21.97 |
| 2010–11 | 29.24 | 20.06 |
| 2011–12 | 32.30 | 23.53 |

ಜಿಲ್ಲಾವಾರು ವಿವರಗಳನ್ನು **ಅನುಬಂಧ –6.7(ಅ)** ರಲ್ಲಿ ಲಗತ್ತಿಸಿದೆ

**ಅಧ್ಯಾಯ-4**

**ನಿರ್ವಹಿಸಿದ ಕಾರ್ಯಕ್ರಮಗಳು:**

- ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಸಾರ್ವಜನಿಕರಿಗೆ ಅನುಕೂಲವಾಗುವ ಮತ್ತು ಅವಶ್ಯಕವಾಗಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಜಿಲ್ಲಾ ಮಟ್ಟದಲ್ಲಿ ಕ್ರಿಯಾಯೋಜನೆ ತಯಾರಿಸುವುದು
- ರಾಜ್ಯ ಸರ್ಕಾರದ ಶಿಫಾರಸ್ಸಿನೊಂದಿಗೆ ಕೇಂದ್ರ ಸರ್ಕಾರದ ಯೋಜನಾ ಆಯೋಗದಿಂದ ಕ್ರಿಯಾ ಯೋಜನೆಗೆ ಅಂಗೀಕಾರ ಪಡೆಯುವುದು
- ಕೇಂದ್ರ ಸರ್ಕಾರದ ಯೋಜನಾ ಆಯೋಗದಿಂದ ಅನುದಾನ ಪಡೆಯುವುದು ಮತ್ತು ಸದರಿ ಅನುದಾನವನ್ನು ಕ್ರಿಯಾಯೋಜನೆಗೆ ಅನುಗುಣವಾಗಿ ಸಂಬಂಧಿಸಿದ ಜಿಲ್ಲೆಗಳಿಗೆ ಬಿಡುಗಡೆ ಮಾಡುವುದು
- ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳ ಸೆಕ್ಟರ್‌ವಾರು ಅನುಷ್ಠಾನ ಮತ್ತು ನಿಯಂತ್ರಣವನ್ನು ಉಸ್ತುವಾರಿ ಮಾಡುವುದು
- ಸಕಾಲದಲ್ಲಿ ಮಾಸಿಕ ವರದಿ, ವಾರ್ಷಿಕ ವರದಿ, ಹಣಬಳಕೆ ಹಾಗೂ ಲೆಕ್ಕ ತಪಾಸಣಾ ವರದಿಗಳನ್ನು ಸಂಬಂಧಿಸಿದ ಜಿಲ್ಲೆಗಳಿಂದ ಪಡೆದು ಸಲ್ಲಿಸುವುದು

ಪಶ್ಚಿಮ ಘಟ್ಟ ಅಭಿವೃದ್ಧಿ ಕಾರ್ಯಕ್ರಮವು ಅದರ ನಾಜೂಕು ಪರಿಸರ ಸಂರಕ್ಷಣೆ ಮತ್ತು ಪರಿಸರದ ಸಾಮರಸ್ಯದೊಂದಿಗೆ ಪಶ್ಚಿಮ ಘಟ್ಟಗಳ ಪ್ರದೇಶದ ಅಭಿವೃದ್ಧಿಯ ಮುಖ್ಯ ಉದ್ದೇಶವನ್ನು ಹೊಂದಿದೆ. ಈ ಕಾರ್ಯಕ್ರಮವನ್ನು ಭೂ ಮತ್ತು ಜಲ ನಿರ್ವಹಣೆ ಅಭಿವೃದ್ಧಿಗೊಳಿಸುವ ಸಲುವಾಗಿ ಸಮಗ್ರ ಜಲಾನಯನ ಮೂಲಕ ವಿವಿಧ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಪಶುಸಂಗೋಪನಾ, ಅರಣ್ಯ, ಮೀನುಗಾರಿಕೆ, ಸಣ್ಣ ನೀರಾವರಿ, ಇಂಜಿನಿಯರಿಂಗ್, ರೇಷ್ಮೆ ಮತ್ತು ಕೈಗಾರಿಕೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮವು ರಾಜ್ಯದ 11 ಜಿಲ್ಲೆಗಳ 40 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ.

**ಮೌಲ್ಯಮಾಪನ ಅಧ್ಯಯನ ಮತ್ತು ವರದಿ ಸಲ್ಲಿಕೆ:**

**ಕರ್ನಾಟಕ ರಾಜ್ಯದಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಬಗ್ಗೆ:**

2011-12ನೇ ಸಾಲಿನಲ್ಲಿ ಈ ಯೋಜನೆಯ ಮೌಲ್ಯಮಾಪನದ ಅಧ್ಯಯನ ಮತ್ತು ವರದಿ ಸಲ್ಲಿಕೆಗೆ ಸರ್ಕಾರ ನಿಗದಿಪಡಿಸಿರುವ ಮೂರು ಏಜೆನ್ಸಿಗಳಿಗೆ ದರಪಟ್ಟಿ ನೀಡಲು ಕೋರಲಾಗಿರುತ್ತದೆ. ದರಪಟ್ಟಿಗಳ ವಿವರಗಳನ್ನು ನಿರೀಕ್ಷಿಸಲಾಗಿದೆ.

**2011-12ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರ**

| ಕ್ರ. ಸಂ. | ವರ್ಗ | ಒಟ್ಟು ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾ. | ಪ.ಪಂ. |
|---|---|---|---|---|---|---|
| 1 | ಎ | 1 | 1 | 0 | 0 | 0 |
| 2 | ಬಿ | 3 | 1 | 2 | 1 | 0 |
| 3 | ಸಿ | 7 | 3 | 4 | 0 | 0 |
| 4 | ಡಿ | 1 | 1 | 0 | 1 | 0 |

**2011-12ನೇ ಸಾಲಿನಲ್ಲಿ ಖಾಲಿ ಇರುವ, ನಿವೃತ್ತಿಯಾದ/ನಿವೃತ್ತಿಯಾಗಲಿರುವ ವಿವರ**

| ಕ್ರ. ಸಂ. | ವರ್ಗ | ಖಾಲಿ ಹುದ್ದೆಗಳು | ನಿವೃತ್ತಿಯಾದವರು | ನಿವೃತ್ತಿಯಾಗಲಿರುವವರು |
|---|---|---|---|---|
| 1 | ಎ | 1 | 1 | 0 |
| 2 | ಬಿ | 0 | 0 | 0 |
| 3 | ಸಿ | 0 | 0 | 0 |
| 4 | ಡಿ | 1 | 0 | 0 |

**2010-11 & 2011-12ನೇ ಸಾಲಿನಲ್ಲಿ ಕೈಗೊಂಡ ಆಡಳಿತಾತ್ಮಕ ಪರಿವೀಕ್ಷಣಾ ವಿವರ:**

| ಕ್ರ. ಸಂ. | ವರ್ಷ | ಆಡಳಿತಾತ್ಮಕ ಪರಿವೀಕ್ಷಣೆ ಕೈಗೊಂಡ ಸಂಖ್ಯೆ | | ಶಿಸ್ತು ಕ್ರಮ ತೆಗೆದುಕೊಂಡಿರುವ ಅಧಿಕಾರಿ/ಸಿಬ್ಬಂದಿ ಸಂಖ್ಯೆ |
|---|---|---|---|---|
| | | ಕೇಂದ್ರ ಮಟ್ಟ | ರಾಜ್ಯ ಮಟ್ಟ | |
| 1 | 2010-11 | **0** | **0** | **-** |
| 2 | 2011-12 | **1** | **0** | **-** |

* *

## 6.8 ಹಿಂದುಳಿದ ಪ್ರದೇಶಗಳ ಅನುದಾನ ಅಭಿವೃದ್ಧಿ ನಿಧಿ(ಬಿ.ಆರ್.ಜಿ.ಎಫ್):

ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ಭಾರತ ಸರ್ಕಾರವು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಅನುದಾನ ನಿಧಿಯನ್ನು (BRGF) ಸ್ಥಾಪಿಸಿದ್ದು, ಈ ಯೋಜನೆಯ ಉದ್ದೇಶವು, ಗುರುತಿಸಲ್ಪಟಿರುವ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣಕಾಸಿನ ನೆರವನ್ನು ನೀಡುವುದಾಗಿರುತ್ತದೆ. ಮೂಲಭೂತವಾಗಿ ಈ ಅನುದಾನವನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ಮಾರ್ಗಸೂಚಿಗಳನ್ನು ನೀಡಲಾಗಿದೆ.

- ಸ್ಥಳೀಯ ಮೂಲಭೂತ ಸೌಲಭ್ಯ ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮಗಳ ನಡುವಿನ ಅಂತರವನ್ನು ತುಂಬುವುದು.

- ಪಂಚಾಯತ್ ರಾಜ್ ಸಂಸ್ಥೆಗಳು ಈ ಕಾರ್ಯವನ್ನು ನಿರ್ವಹಿಸಲು ಕ್ರಿಯಾತ್ಮಕವಾಗಿ ಭಾಗವಹಿಸುವಂತೆ ಕಾರ್ಯಕ್ರಮ ರೂಪಿಸುವುದು ಹಾಗೂ ಅದಕ್ಕೆ ಪೂರಕವಾಗಿ ಅನುಷ್ಠಾನ ಮತ್ತು ನಿರ್ವಹಣೆಯ ಬಗ್ಗೆ ಪರಿಣತಿಯನ್ನು ನೀಡುವುದು.

ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕದಲ್ಲಿ ಗುಲ್ಬರ್ಗಾ, ಬೀದರ್, ಚಿತ್ರದುರ್ಗ, ದಾವಣಗೆರೆ ಮತ್ತು ರಾಯಚೂರು ಜಿಲ್ಲೆಗಳನ್ನು ಗುರುತಿಸಲಾಗಿದೆ. ಸದರಿ ಯೋಜನೆಯ ಅವಧಿಯು 5 ವರ್ಷಗಳಾಗಿದ್ದು, ಒಟ್ಟಾರೆ ಯೋಜನೆಯು ರೂ.55000.00 ಲಕ್ಷಗಳದ್ದಾಗಿರುತ್ತದೆ ಮತ್ತು ವಾರ್ಷಿಕ ರೂ.11000.00 ಲಕ್ಷಗಳಂತೆ ನಿಗದಿಪಡಿಸಲಾಗಿದೆ.

ಸದರಿ ಯೋಜನೆಯು 2006–07ನೇ ಸಾಲಿನಿಂದ ಪ್ರಾರಂಭಗೊಂಡಿದ್ದು, ಈ ಕೆಳಗಿನಂತೆ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿರುತ್ತದೆ.

ಈ ಯೋಜನೆಗೆ 2011–12ನೇ ಸಾಲಿಗೆ ನಿಗದಿ ಮಾಡಲಾದ ಅನುದಾನ ರೂ. 11895.00 ಲಕ್ಷಗಳು.

**(ರೂ.ಲಕ್ಷಗಳಲ್ಲಿ)**

| **ಕ್ರ. ಸಂ** | **ಜಿಲ್ಲೆಗಳ ಹೆಸರು** | **ನಿಗದಿಪಡಿಸಿರುವ ಅನುದಾನ** | **2007–08ನೇ ಸಾಲಿಗೆ ಬಿಡುಗಡೆ ಯಾದ ಅನುದಾನ** | **2009–10ನೇ ಸಾಲಿಗೆ ಬಿಡುಗಡೆ ಯಾದ ಅನುದಾನ** | **2010–11ನೇ ಸಾಲಿಗೆ ಬಿಡುಗಡೆ ಯಾದ ಅನುದಾನ** | **2011–12ನೇ ಸಾಲಿಗೆ ಬಿಡುಗಡೆ ಯಾದ ಅನುದಾನ** |
|---|---|---|---|---|---|---|
| 1 | ರಾಯಚೂರು | 1956.00 | 750.00 | 1760.00<br>196.00 | 1361.00<br>595.00 | 1358.00<br>791.00 |
| 2 | ಬೀದರ್ | 1714.00 | 1711.00 | 1540.00<br>171.00 | 938.00<br>773.00 | 1581.00 |
| 3 | ಚಿತ್ರದುರ್ಗ | 2021.00 | 1819.00<br>202.00 | 1819.00<br>202.00 | 1105.00<br>916.00 | 1745.00 |
| 4 | ದಾವಣಗೆರೆ | 1818.00 | 1633.00 | 1633.00<br>181.00 | 974.00<br>84.00 | 1774.00 |
| 5 | ಗುಲ್ಬರ್ಗಾ/ ಯಾದಗಿರಿ | 2825.00 | 2534.00 | 2534.00<br>281.00 | 1542.00<br>1273.00 | 1756.00 |
| 6 | ಅ.ನ.ಸಾ.ರಾ.ಗ್ರಾ.ಅ. ಸಂಸ್ಥೆ, ಮೈಸೂರು | 500.00 | 500.00<br>500.00 | 839.00 | 397.00<br>103.00 | 269.00 |
| | **ಒಟ್ಟು** | **10834.00** | **9649.00** | **11156.00** | **10061.00** | **9275.00** |

# 7. ಕರ್ನಾಟಕ ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಸಂಸ್ಥೆ

## 7.1 ಗ್ರಾಮೀಣ ನೀರು ಸರಬರಾಜು

ರಾಜ್ಯದ 59,575 ಗ್ರಾಮೀಣ ಜನವಸತಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸಲು ಸರ್ಕಾರ ಹೆಚ್ಚಿನ ಮಹತ್ವವನ್ನು ನೀಡಿದೆ. ಪ್ರತಿ ದಿನ ಪ್ರತಿ ವ್ಯಕ್ತಿಗೆ ತಲಾ 40–55 ಲೀಟರ್ ಕುಡಿಯುವ ನೀರು ಒದಗಿಸುವ ಉದ್ದೇಶವನ್ನು ಸರ್ಕಾರ ತಳೆದಿದೆ. ಗ್ರಾಮೀಣ ಪ್ರದೇಶಗಳಿಗೆ ಕೆಳಕಂಡ ಕಾರ್ಯಕ್ರಮಗಳ ಮೂಲಕ ಸುರಕ್ಷಿತ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ.

1. ಕೊಳವೆ ನೀರು ಸರಬರಾಜು ಯೋಜನೆ
2. ಕಿರು ನೀರು ಸರಬರಾಜು ಯೋಜನೆ
3. ಕೈಪಂಪು ಕೊಳವೆ ಬಾವಿ ಯೋಜನೆ
4. ಬಹುಗ್ರಾಮ ಪೂರೈಕೆ ಯೋಜನೆಗಳು

ಗ್ರಾಮೀಣ ನೀರು ಸರಬರಾಜು ಯೋಜನೆಗಳನ್ನು ಚಾಲ್ತಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ಮತ್ತು ನಿಯಮಗಳನ್ವಯ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ನಿಗಧಿತ ಪ್ರಮಾಣಕ್ಕಿಂತಲೂ ಕಡಿಮೆ ನೀರು ಪೂರೈಕೆಯಾಗುತ್ತಿರುವ ಹಾಗೂ ರಾಸಾಯನಿಕವಾಗಿ ಕಲುಷಿತಗೊಂಡ ಜನವಸತಿಗಳನ್ನು ಸಮಸ್ಯಾತ್ಮಕವಾದುವೆಂದು ಗುರುತಿಸಿ, ಆ ಜನವಸತಿಗಳಿಗೆ ಸಮರ್ಪಕ ಹಾಗು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಆದ್ಯತೆ ನೀಡಲಾಗುತ್ತಿದೆ. ಗ್ರಾಮದ ಒಟ್ಟು ಜನಸಂಖ್ಯೆಗೆ ಅನುಗುಣವಾಗಿ ಕುಡಿಯುವ ನೀರಿನ ಯೋಜನೆಗಳನ್ನು ಅಳವಡಿಸಲಾಗುವುದು. 1000ಕ್ಕೂ ಮೇಲ್ಪಟ್ಟು ಜನಸಂಖ್ಯೆಯುಳ್ಳ ಗ್ರಾಮ/ಜನವಸತಿಗಳಿಗೆ ಕೊಳವೆ ನೀರು ಸರಬರಾಜು ಯೋಜನೆಗಳನ್ನು, 500 ರಿಂದ 1000 ಜನಸಂಖ್ಯೆಯುಳ್ಳ ಗ್ರಾಮ/ಜನವಸತಿಗಳಿಗೆ ಕಿರು ನೀರು ಸರಬರಾಜು ಹಾಗೂ 500 ಕ್ಕಿಂತಲೂ ಕಡಿಮೆ ಜನಸಂಖ್ಯೆಯುಳ್ಳ ಗ್ರಾಮಗಳಿಗೆ ಕೈಪಂಪು ಅಳವಡಿಸಿದ ಕೊಳವೆ ಬಾವಿಗಳನ್ನು ಮತ್ತು ಸರಳ ಜಲ ಯೋಜನೆಗಳನ್ನು ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಮೇಲಿನ ನಿಬಂಧನೆಯನ್ನು ಮಲೆನಾಡು ಪ್ರದೇಶಗಳಿಗೆ ಮತ್ತು ನೀರಿನಲ್ಲಿ ಫ್ಲೋರೈಡ್ ಮುಂತಾದ ನೀರಿನ ಗುಣಮಟ್ಟದ ಸಮಸ್ಯೆಗಳಿರುವ ಗ್ರಾಮಗಳಲ್ಲಿ ಸಡಿಲಿಸಿದೆ. ಸ್ಲಿಪಡ್ ಬ್ಯಾಕ್ ಜನವಸತಿಗಳು ಹಾಗೂ ನೀರಿನ ಗುಣಮಟ್ಟದ ಸಮಸ್ಯೆಯಿರುವ ಜನವಸತಿಗಳಿಗೆ ಭೂಮಿಯ ಮೇಲ್ಮೈ ಜಲಮೂಲ ಆಧಾರಿತ ಬಹುಗ್ರಾಮ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಭಾರತ ಸರ್ಕಾರದ ಪರಿಷ್ಕೃತ ಮಾರ್ಗಸೂಚಿಗಳು:**

2009–10ನೇ ಸಾಲಿನಿಂದ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮಗಳನ್ನು ಭಾರತ ಸರ್ಕಾರದ NRDWP (National Rural Drinking Water Programme) ಪರಿಷ್ಕೃತ

ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. NRDWP ಕಾರ್ಯಕ್ರಮವು ಗ್ರಾಮೀಣ ಜನವಸತಿಗಳ ಪ್ರತಿಯೊಬ್ಬರಿಗೆ ಸರ್ವಕಾಲದಲ್ಲೂ ನಿಗಧಿತ ಪ್ರಮಾಣದಲ್ಲಿ ಶುದ್ಧ ಕುಡಿಯುವ ನೀರನ್ನು ನಿರಂತರವಾಗಿ ಒದಗಿಸುವ ಉದ್ದೇಶ ಹೊಂದಿದೆ. ಇದಕ್ಕಾಗಿ ಕೇಂದ್ರ ಸರ್ಕಾರವು ನಿರಂತರತೆ ಘಟಕದಡಿ (Sustainability), ಕುಡಿಯುವ ನೀರು ಯೋಜನೆ ಜಲಮೂಲಗಳ ನಿರಂತರತೆ ಕಾಪಾಡಲು ಜಲಸಂರಕ್ಷಣೆ ಮತ್ತು ಅಂತರ್ಜಲ ಸಂವರ್ಧನೆಗಾಗಿ, ವಾರ್ಷಿಕ ಅನುದಾನದ ಶೇ.10–20 ರಷ್ಟು ಅನುದಾನವನ್ನು ಸಂಪೂರ್ಣವಾಗಿ ಭರಿಸುತ್ತಿದೆ.

ಪರಿಷ್ಕೃತ ಮಾರ್ಗದರ್ಶಿಗಳನ್ವಯ ರಾಜ್ಯ ಮಟ್ಟದಲ್ಲಿ SWSM (State Water & Sanitation Mission) ಮತ್ತು State level Scheme Sanctioning Committee SLSSC ಅನ್ನು ರಚಿಸಿದೆ ಹಾಗು SWSM ಗೆ ಪ್ರತ್ಯೇಕ ನಿರ್ದೇಶಕರನ್ನು ನೇಮಿಸಲಾಗಿದೆ. ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಹಾಗೂ ರಾಜ್ಯ ಸರ್ಕಾರದ ಪಾಲಿನ ಅನುದಾನ ಎರಡನ್ನೂ SWSM ಬ್ಯಾಂಕ್ ಖಾತೆಯಿಂದಲೇ ನಿರ್ವಹಿಸಲಾಗುತ್ತಿದ್ದು, ಈ ಖಾತೆಯಿಂದಲೇ ಜಿಲ್ಲಾ ಪಂಚಾಯತ್‌ಗಳಿಗೆ ನೇರವಾಗಿ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. SLSSC ವಾರ್ಷಿಕ ಕುಡಿಯುವ ನೀರಿನ ಯೋಜನೆಗಳಿಗೆ ಮಂಜೂರಾತಿ ನೀಡುವುದಲ್ಲದೆ, ಕಾಲಕಾಲಕ್ಕೆ ಯೋಜನೆಗಳ ಉಸ್ತುವಾರಿ ಮತ್ತು ನೀತಿ ನಿಯಮಗಳನ್ನು GoI ಮಾರ್ಗಸೂಚಿಗಳನ್ವಯ ಜಾರಿಗೊಳಿಸಲಿದೆ. HRD/IEC ಚಟುವಟಿಕೆ ನಿರಂತರವಾಗಿ ನಡೆಸಲು ಭಾರತ ಸರ್ಕಾರದ Support Activity ಕಾರ್ಯಕ್ರಮದಡಿ ಅವಕಾಶ ಕಲ್ಪಿಸಲಾಗಿದೆ.

ಈ ಕಾರ್ಯಕ್ರಮದಡಿಯಲ್ಲಿ ಬರುವ ಪ್ರಮುಖ ಘಟಕಗಳು (Components) ಮತ್ತು ಅವುಗಳಿಗೆ ಒದಗಿಸಲಾಗುವ ಶೇಕಡಾವಾರು ಅನುದಾನದ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ | ಯೋಜನೆಗಳು (Components) | ಶೇಕಡಾವಾರು ವಾರ್ಷಿಕ ಅನುದಾನ | ಕೇಂದ್ರ ಮತ್ತು ರಾಜ್ಯದ ಪಾಲಿನ ಅನುಪಾತ |
|---|---|---|---|
| 1 | NRDWP- Coverage & Quality | 65% | 50 : 50 |
| 2 | Sustainability (ನಿರಂತರತೆ) | 20% | 100 : 0 |
| 3 | O & M | 10% | 50 : 50 |
| 4 | Support Activities | 5% | 100 : 0 |

NRDWP ಮಾರ್ಗಸೂಚಿಯನ್ವಯ ಜನವಸತಿಗಳ ವರ್ಗೀಕರಣ ಕುರಿತು ಹಿಂದೆ ನಿಗಧಿಪಡಿಸಲಾಗಿದ್ದ ಸಾಂಪ್ರದಾಯಿಕ LPCD (Liters per capita per day) ಬದಲಿಗೆ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ ಆವರಿಸಲ್ಪಟ್ಟ ಶೇಕಡಾವಾರು ಜನಸಂಖ್ಯೆ ಆಧಾರದ ಮೇಲೆ ವರ್ಗೀಕರವಣನ್ನು ಪರಿಗಣಿಸಬೇಕಾಗುತ್ತದೆ.

ದಿನಾಂಕ 01-04-2012 ರ ವಸ್ತು ಸ್ಥಿತಿಯಂತೆ ಕುಡಿಯುವ ನೀರಿನ ವ್ಯವಸ್ಥೆಯಿಂದ ಆವರಿಸಲ್ಪಟ್ಟ ಜನವಸತಿಗಳ ವಿವರ ಕೆಳಕಂಡಂತಿರುತ್ತದೆ.

| **ಆವರಿಸಲ್ಪಟ್ಟ ಜನಸಂಖ್ಯೆ ವರ್ಗೀಕರಣ** | **0%** ಆವರಿಸಿದ್ದು | **> 0% < 25%** | **≥ 25% < 50%** | **≥ 50% < 75%** | **≥ 75% < 100%** | **100%** | **ಒಟ್ಟು** |
|---|---|---|---|---|---|---|---|
| ಜನವಸತಿಗಳ ಸಂಖ್ಯೆ | 0 | 3365 | 15483 | 11941 | 7316 | 21470 | 59575 |

ಜಿಲ್ಲಾವಾರು ವಿವರಗಳನ್ನು ಅನುಬಂಧ-7.1.(ಅ) ರಲ್ಲಿ ಕೊಡಲಾಗಿದೆ.

## 2011-12 ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದಡಿ (NRDWP) ಸಾಧಿಸಲಾದ ಜನವಸತಿಗಳ ಜನಸಂಖ್ಯೆವಾರು ಪ್ರಗತಿ ವಿವರ

| **ಕ್ರ ಸಂ** | **ಜನವಸತಿ ವರ್ಗೀಕರಣ** | **1/4/2011 ರಂತೆ ವಸ್ತುಸ್ಥಿತಿ** | **ಗುರಿ** | **ಸಾಧನೆ (ಮಾರ್ಚ್ 2012ರ ತಹಲ್)** |
|---|---|---|---|---|
| **1** | **2** | **3** | **4** | **5** |
| 1 | 0 ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 0 | 0 | 0 |
| 2 | 0-25% ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 2956 | 1779 | 1186 |
| 3 | 25-50% ಜನಸಂಖ್ಯೆ ಆವರಿಸಲ್ಪಟ್ಟಜನವಸತಿಗಳು | 9391 | 3919 | 2830 |
| 4 | 50-75% ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 11886 | 680 | 1067 |
| 5 | 75-100% ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 10789 | 626 | 832 |
| 6 | 100% ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 24510 | 2691 | 2842 |
| **7** | **IMIS ತಂತ್ರಾಂಶದಲ್ಲಿ ದಾಖಲಿಸಿರುವಂತೆ ಒಟ್ಟು** | **59532** | **9695** | **8757** |

ಜಿಲ್ಲಾವಾರು ವಿವರಗಳನ್ನು ಅನುಬಂಧ-7.1.(ಆ) ರಲ್ಲಿ ಕೊಡಲಾಗಿದೆ.

## 2011–12 ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದಡಿ (NRDWP) ಸಾಧಿಸಲಾದ ಭೌತಿಕ ವಿವರ (ನೀರಿನ ಗುಣಮಟ್ಟದ ಭಾದೆಗೊಳಗಾದ ಜನವಸತಿಗಳು)

| ಕ್ರ ಸಂ. | ಜನವಸತಿ ವರ್ಗೀಕರಣ | 1/4/2011 ರಂತೆ ವಸ್ತುಸ್ಥಿತಿ | 2011–12 ರ ಭೌತಿಕ ಗುರಿ | ಸಾಧನೆ (ಮಾರ್ಚ್ 2012ರ ಅಂತ್ಯಕ್ಕೆ) |
|---|---|---|---|---|
| 1 | 2 | 3 | 4 | 5 |
| 1 | ಆರ್ಸೆನಿಕ್‌ನಿಂದ ಬಾಧಿತ ಜನವಸತಿಗಳು | 42 | 9 | 6 |
| 2 | ಫ್ಲೋರೈಡ್‌ನಿಂದ ಬಾಧಿತ ಜನವಸತಿಗಳು | 3114 | 723 | 644 |
| 3 | ಕಬ್ಬಿಣಾಂಶದಿಂದ ಬಾಧಿತ ಜನವಸತಿಗಳು | 1813 | 292 | 239 |
| 4 | ಸವಳು ನೀರಿನಿಂದ ಬಾಧಿತ ಜನವಸತಿಗಳು | 861 | 213 | 203 |
| 5 | ನೈಟ್ರೇಟ್‌ನಿಂದ ಬಾಧಿತ ಜನವಸತಿಗಳು | 1769 | 452 | 403 |
| **ಒಟ್ಟು** | | **7599** | **1689** | **1495** |

ಜಿಲ್ಲಾವಾರು ವಿವರಗಳನ್ನು ಅನುಬಂಧ–**7.1.(ಇ)** ರಲ್ಲಿ ಕೊಡಲಾಗಿದೆ.

## 2011–12 ನೇ ಸಾಲಿನಲ್ಲಿ ರಾ.ಗ್ರಾ.ಕು.ನೀ.ಕಾರ್ಯಕ್ರಮದಡಿಯಲ್ಲಿನ (NRDWP) ಆರ್ಥಿಕ ಗುರಿ ಮತ್ತು ಸಾಧನೆ

| ಕ್ರ ಸಂ. | ವಲಯ / ಘಟಕ | ಆರಂಭಿಕ ಶುಲ್ಕ | ಹಂಚಿಕೆ | ಬಿಡುಗಡೆ | ಮಾರ್ಚ್ 2012ರ ವರೆಗಿನ ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|---|---|
| **I. ಕೇಂದ್ರ ವಲಯ** | | | | | |
| 1 | NRDWP-Coverage & WaterQuality, O&M ಮತ್ತು ನಿರಂತರತೆ | 20453.48 | 49190.00 | 48382.93 | 55641.30 |
| 2 | Desert Development Programme (ಮರು ಭೂಮಿ ಅಭಿವೃದ್ಧಿ) | 10446.76 | 15644.00 | 15388.00 | 19982.13 |
| 3 | Calamities / ವಿಪತ್ತುಪರಿಹಾರ | 0 | 0 | 866.00 | 866.00 |
| 4 | **ಜಲಮಣಿ** | 10.17 | - | - | - |
| 5 | Support Activity (ಕೇಂದ್ರ ವಲಯ) | 1299.79 | 2054.00 | 1138.00 | 1293.95 |
| 6 | Water Quality Monitoring & Survilance Programme | - | 1823.00 | 1002.87 | 501.45 |
| **Total:** | | 32200.00 | 68711.00 | 66777.80 | 78284.83 |
| **II. ರಾಜ್ಯ ವಲಯ** | | | | | |
| 1 | NRDWP–. ರಾಜ್ಯ ವಲಯ | 14855.18 | 51841.98 | 51841.98 | 39867.92 |
| **Grand Total** | | **47055.18** | **120553.00** | **118619.80** | **118152.75** |

ಜಿಲ್ಲಾವಾರು ವಿವರಗಳನ್ನು ಅನುಬಂಧ-7.1.**(ಈ)** ರಲ್ಲಿ ಕೊಡಲಾಗಿದೆ.

2011-12ನೇ ಸಾಲಿನ **ಮಾರ್ಚ್ 2012ರ** ಅಂತ್ಯಕ್ಕೆ ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳು ಈ ಕೆಳಗಿನಂತಿವೆ:

| | |
|---|---|
| ಕೈಪಂಪು ಕೊಳವೆ ಬಾವಿಗಳು (HPBW) | 2,15,073 |
| ಕಿರು ನೀರು ಸರಬರಾಜು ಯೋಜನೆಗಳು (MWS) | 36,370 |
| ಕೊಳವೆ ನೀರು ಸರಬರಾಜು ಯೋಜನೆಗಳು (PWS) | 26,498 |
| **ಒಟ್ಟು** | **2,77,941** |

### ಅ) ಕೈಪಂಪು ಕೊಳವೆ ಬಾವಿ ಕಾರ್ಯಕ್ರಮ

ಕೈಪಂಪು ಅಳವಡಿಸಿದ ಕೊಳವೆ ಬಾವಿಗಳು ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಪ್ರಧಾನ ಮೂಲಗಳಾಗಿವೆ. ಪ್ರಾರಂಭದಿಂದ ಮಾರ್ಚ್ 2012ರ ಅಂತ್ಯಕ್ಕೆ ಸುಮಾರು 2,15,073 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಕೈಪಂಪು ಕೊಳವೆ ಬಾವಿಗಳ ನಿರ್ವಹಣೆಯನ್ನು ಗ್ರಾಮ ಪಂಚಾಯತಿಗಳು ನಿರ್ವಹಿಸುತ್ತಿವೆ. ಇದಕ್ಕಾಗಿ ಪ್ರತಿ ಕೈಪಂಪು ಕೊಳವೆ ಬಾವಿ ನಿರ್ವಹಣೆಗೆ ಸಾಲಿಯಾನ ರೂ.600/- ನ್ನು ಸರ್ಕಾರ ಒದಗಿಸುತ್ತಿದೆ.

ಈ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಕೆಳಗಿನ ತಃಖ್ತೆಯಲ್ಲಿ ನೀಡಲಾಗಿದೆ.

| **ವರ್ಷ** | **ಆರ್ಥಿಕ (ಕೋಟಿ ರೂ.ಗಳಲ್ಲಿ)** | | **ಭೌತಿಕ (ಸಂಖ್ಯೆ)** | |
|---|---|---|---|---|
| | **ಗುರಿ** | **ಸಾಧನೆ** | **ಗುರಿ** | **ಸಾಧನೆ** |
| 2007-2008 | 37.74 | 56.93 | 4,026 | 5,993 |
| 2008-2009 | 68.52 | 57.76 | 4,457 | 6,011 |
| 2009-2010 | 101.68 | 41.90 | 3,038 | 3,782 |
| 2010-2011 | 7.04 | 5.00 | 938 | 667 |
| 2011-2012 | 11.24 | 9.25 | 1,014 | 900 |

ಮೇಲ್ಕಂಡ ಅಂಕಿಅಂಶಗಳಲ್ಲಿ, ಟಾಸ್ಕ್‌ಫೋರ್ಸ್ ಬೋರ್‌ವೆಲ್‌ಗಳು ಸೇರಿರುವುದಿಲ್ಲ.

### ಆ) ಕಿರು ನೀರು ಸರಬರಾಜು ಯೋಜನೆ

ಈ ಯೋಜನೆಯಲ್ಲಿ 3-4 ನಲ್ಲಿಗಳನ್ನು ಅಳವಡಿಸಿರುವ ಸಣ್ಣ ಟ್ಯಾಂಕಿಗೆ (ಆರ್.ಸಿ.ಸಿ ಹ್ಯೂಂ ಪೈಪ್ ಸಿಸ್ಟನ್) ಕೊಳವೆ ಬಾವಿಯಿಂದ ವಿದ್ಯುತ್ ಪಂಪಿನ ಸಹಾಯದಿಂದ ನೀರನ್ನು ತುಂಬಿ ಗ್ರಾಮೀಣ ಜನರು ಕುಡಿಯುವ ನೀರು ಪಡೆಯಲು ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ. ಪ್ರಾರಂಭದಿಂದ ಮಾರ್ಚ್ 2012ರವರೆಗೆ 36,370 ಕಿರು ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಕಿರು ನೀರು ಸರಬರಾಜು ಯೋಜನೆಗಳ ನಿರ್ವಹಣೆಯನ್ನು ಗ್ರಾಮಪಂಚಾಯತಿಗಳು ನಿರ್ವಹಿಸುತ್ತಿವೆ. ಇದಕ್ಕಾಗಿ ಪ್ರತಿ

ಕಿರು ನೀರು ಸರಬರಾಜು ಯೋಜನೆಯ ನಿರ್ವಹಣೆಗೆ ಸಾಲಿಯಾನ 3,500/– ರೂ.ಗಳನ್ನು ಸರ್ಕಾರ ಒದಗಿಸುತ್ತಿದೆ.

ಈ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಕೆಳಗಿನ ತಃಖ್ತೆಯಲ್ಲಿ ನೀಡಲಾಗಿದೆ.

| ವರ್ಷ | ಆರ್ಥಿಕ (ಕೋಟಿ ರೂ.ಗಳಲ್ಲಿ) | | ಭೌತಿಕ (ಸಂಖ್ಯೆ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2007–2008 | 65.27 | 112.42 | 1,248 | 2,044 |
| 2008–2009 | 182.73 | 91.38 | 1,748 | 1,786 |
| 2009–2010 | 88.97 | 94.11 | 2,661 | 3,227 |
| 2010–2011 | 77.28 | 39.84 | 1,288 | 664 |
| 2011–2012 | 140.70 | 84.40 | 2,814 | 1,970 |

**ಇ) ಕೊಳವೆ ನೀರು ಸರಬರಾಜು ಯೋಜನೆ:**

ಈ ಕಾರ್ಯಕ್ರಮದಲ್ಲಿ ಪ್ರಾರಂಭದಿಂದ ಕೇಂದ್ರ ಮತ್ತು ರಾಜ್ಯ ವಲಯದಡಿ ಮಾರ್ಚ್ 2012 ರವರೆಗೆ 26,498 ಕೊಳವೆ ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಈ ಯೋಜನೆಗಳನ್ನು ಗ್ರಾಮಪಂಚಾಯತಿಗಳು ನಿರ್ವಹಿಸುತ್ತಿದ್ದು, ಇದಕ್ಕೆ ಪ್ರತಿ ಕೊಳವೆ ನೀರು ಸರಬರಾಜು ಯೋಜನೆಗೆ ಸಾಲಿಯಾನ 8,000/– ರೂ.ಗಳನ್ನು ಸರ್ಕಾರ ನಿರ್ವಹಣೆಗಾಗಿ ಒದಗಿಸುತ್ತಿದೆ.

ಈ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಕೆಳಗಿನ ತಃಖ್ತೆಯಲ್ಲಿ ನೀಡಲಾಗಿದೆ.

| *ವರ್ಷ* | ಆರ್ಥಿಕ (ಕೋಟಿ ರೂ.ಗಳಲ್ಲಿ) | | ಭೌತಿಕ (ಸಂಖ್ಯೆ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 2007–2008 | 130.69 | 144.45 | 1,087 | 963 |
| 2008–2009 | 205.58 | 144.59 | 1,691 | 1,032 |
| 2009–2010 | 63.55 | 141.16 | 1,905 | 1,943 |
| 2010–2011 | 233.35 | 94.05 | 1,489 | 627 |
| 2011–2012 | 498.60 | 316.00 | 3,324 | 1,980 |

**ಈ) ಮರುಭೂಮಿ ಅಭಿವೃದ್ಧಿ ಯೋಜನೆ (ಡಿ.ಡಿ.ಪಿ):**

ರಾಜ್ಯದ ಬಾಗಲಕೋಟೆ, ವಿಜಾಪುರ, ದಾವಣಗೆರೆ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು ಸತತ ಬರ ಎದುರಿಸುತ್ತಿರುವ ಜಿಲ್ಲೆಗಳಾಗಿದ್ದು, ಈ ಜಿಲ್ಲೆಗಳಲ್ಲಿ ಜನ ಹಾಗೂ ಜಾನುವಾರುಗಳಿಗೆ ಸಮರ್ಪಕ ಕುಡಿಯುವ ನೀರಿನ (70 ಎಲ್.ಪಿ.ಸಿ.ಡಿ ಪ್ರಮಾಣದಲ್ಲಿ) ಪೂರೈಕೆ ಸಲುವಾಗಿ 1997–98ನೇ ಸಾಲಿನಿಂದ ಹೆಚ್ಚುವರಿಯಾಗಿ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಮರುಭೂಮಿ ಅಭಿವೃದ್ಧಿ ಯೋಜನೆ (ಡಿ.ಡಿ.ಪಿ) ಯಡಿ ಅನುಷ್ಠಾನಗೊಳಿಸಲಾಗುತ್ತಿದೆ. ಈ

ಯೋಜನೆಯಡಿ ಕೈಪಂಪು ಕೊಳವೆ ಬಾವಿ, ಕೊಳವೆ ನೀರು ಸರಬರಾಜು ಮತ್ತು ಕಿರು ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳನ್ನು ಕೆಳಕಂಡ ತಃಖ್ತೆಯಲ್ಲಿ ನೀಡಲಾಗಿದೆ.

| ವರ್ಷ | ಆರ್ಥಿಕ (ಕೋಟಿರೂ.ಗಳಲ್ಲಿ) | | ಭೌತಿಕ (ಸಂಖ್ಯೆ) | | | | | |
|---|---|---|---|---|---|---|---|---|
| | | | ಗುರಿ | | | ಸಾಧನೆ | | |
| | ಗುರಿ | ಸಾಧನೆ | ಕೊನೀಸ ಯೋ | ಕಿನೀಸ ಯೋ | ಕೊಳವೆ ಬಾವಿ | ಕೊನೀಸ ಯೋ | ಕಿನೀಸ ಯೋ | ಕೊಳವೆ ಬಾವಿ |
| 2007-2008 | 32.79 | 31.77 | 276 | 259 | 425 | 181 | 167 | 422 |
| 2008-2009 | 28.61 | 23.81 | 245 | 310 | 323 | 117 | 188 | 165 |
| 2009-2010 | 38.21 | 25.33 | 202 | 260 | 300 | 173 | 243 | 296 |
| 2010-2011 | 68.60 | 48.60 | 272 | 212 | 78 | 156 | 120 | 78 |
| 2011-2012 | 137.80 | 103.30 | 628 | 286 | 48 | 440 | 215 | 48 |

**ವಿವಿಧ ಯೋಜನೆಗಳಡಿ ಜಿಲ್ಲಾವಾರು ಅನುಷ್ಠಾನಗೊಳಿಸಿರುವ 2011-12ರ ಭೌತಿಕ ಚಿತ್ರಣವನ್ನು ಅನುಬಂಧ 7.1.(ಉ) ರಲ್ಲಿ ನೀಡಿದೆ. ಡಿ.ಡಿ.ಪಿ. ಯೋಜನೆ ಅನುಷ್ಠಾನದಲ್ಲಿರುವ ಜಿಲ್ಲೆಗಳಲ್ಲಿ ಡಿ.ಡಿ.ಪಿ. ಪ್ರಗತಿಯನ್ನೂ ಒಳಗೊಂಡಿರುತ್ತದೆ.**

**ಉ) ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು:**

ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ರಾಸಾಯನಿಕ ಕಲುಷಿತೆ ಹೊಂದಿರುವ ಜನವಸತಿಗಳಲ್ಲಿ ಭೂಮಿಯ ಮೇಲ್ಮೈ ನೀರಿನ ಜಲಮೂಲ ಆಧಾರಿತ ಯೋಜನೆಗಳನ್ನು ರಾಜೀವಗಾಂಧಿ ರಾಷ್ಟ್ರೀಯ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಕೈಗೊಳ್ಳಲಾಗುತ್ತಿದೆ. ಇದರಲ್ಲಿ ಭೂಮಿಯ ಮೇಲ್ಮೈ ನೀರನ್ನು ವಿವಿಧ ಜಲಮೂಲಗಳಿಂದ ಪಡೆದು ಶುದ್ಧೀಕರಿಸಿ ಅಧಿಕ ಫ್ಲೋರೈಡ್, ಸವಳು ಅಂಶ(ಟಿ.ಡಿ.ಎಸ್), ನೈಟ್ರೇಟ್, ಕಬ್ಬಿಣ ಹಾಗೂ ಆರ್ಸೆನಿಕ್ ಅಂಶಗಳ ಭಾದೆಗಳಿಂದ ಒಳಗಾಗಿರುವ ಜನವಸತಿಗಳಿಗೆ ಸುರಕ್ಷಿತ ನೀರು ಪೂರೈಕೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ಈ ಕಾರ್ಯಕ್ರಮದಡಿ ಯೋಜನೆಯ ಅಂದಾಜು ವೆಚ್ಚದ ಶೇ.50 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರದಿಂದ ಹಾಗೂ ಉಳಿದ ಶೇ.50ರಷ್ಟು ಅನುದಾನವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುವುದು. ಸಬ್‌ಮಿಷನ್ ಕಾರ್ಯಕ್ರಮದಡಿ ಕುಡಿಯುವ ನೀರಿನ ಶಾಶ್ವತ ಪರಿಹಾರದ ಸಲುವಾಗಿ ನದಿ, ಕೆರೆ, ಕಾಲುವೆಯಂತಹ ಭೂಮಿಯ ಮೇಲ್ಮೈ ಜಲಮೂಲಗಳನ್ನು ಆಧರಿಸಿ ಯೋಜನೆಗಳನ್ನು ರೂಪಿಸಲಾಗಿದೆ.

- 2004-05ರ ಮೊದಲು ಸಬ್‌ಮಿಷನ್ ಯೋಜನೆಯಡಿ 244 ಜನವಸತಿಗಳನ್ನು ಆವರಿಸಿರುವ ಒಟ್ಟು 49 ಕಾಮಗಾರಿಗಳನ್ನು ರೂ.141.49 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು, ಅದರಲ್ಲಿ, 44 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಈ ಪೂರ್ಣಗೊಂಡ ಯೋಜನೆಗಳಿಂದ, 176 ರಾಸಾಯನಿಕ ಕಲುಷಿತ ಹೊಂದಿರುವ ಗ್ರಾಮಗಳಿಗೆ ಶುದ್ಧ ಕುಡಿಯುವ

ನೀರನ್ನು ಒದಗಿಸಲಾಗುತ್ತಿದೆ. ಉಳಿದ 5 ಯೋಜನೆಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ ಮತ್ತು ಡಿಸೆಂಬರ್ 2012 ರೊಳಗೆ ಈ ಯೋಜನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ **[ಅನುಬಂಧ-7.1(ಊ)].**

- 2004-05ನೇ ಸಾಲಿನ ನಂತರ ರಾಜ್ಯದಲ್ಲಿ ಭಾರತ ನಿರ್ಮಾಣ ಯೋಜನೆಯಡಿಯಲ್ಲಿ, ರಾಜೀವಗಾಂಧಿ ಸಬ್-ಮಿಷನ್ ಯೋಜನೆಯಲ್ಲಿ ರಾಸಾಯನಿಕ ಕಲುಷಿತತೆ ಹೊಂದಿರುವ ಜನವಸತಿಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.
- 2005-06 ರಿಂದ 2007-08ನೇ ಸಾಲಿನವರೆಗೆ 1383 ಜನವಸತಿಗಳನ್ನು ಆವರಿಸಿರುವ 144 ಯೋಜನೆಗಳನ್ನು ರೂ.877.25 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಎಲ್ಲಾ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಎಲ್ಲಾ ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿಯನ್ನು, ನೀಡಲಾಗಿದೆ. ಎಲ್ಲಾ 144 ಕಾಮಗಾರಿಗಳನ್ನೂ ಟೆಂಡರ್ ಮೂಲಕ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದು, ಎಲ್ಲಾ ಕಾಮಗಾರಿಗಳ ಕೆಲಸ ಪ್ರಾರಂಭವಾಗಿದೆ. 57 ಯೋಜನೆಗಳನ್ನು ಮಾರ್ಚ್ 2012 ರ ಅಂತ್ಯಕ್ಕೆ ಭೌತಿಕವಾಗಿ ಪೂರ್ಣಗೊಳಿಸಲಾಗಿದೆ ಹಾಗೂ ಬಾಕಿ ಯೋಜನೆಗಳನ್ನು ಮಾರ್ಚ್ 2013ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ **[ಅನುಬಂಧ-7.1(ಋ)].**
- 2009-10 ಮತ್ತು 2010-11ನೇ ಸಾಲಿನಲ್ಲಿ 112 ಹೊಸ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಈ ಯೋಜನೆಗಳಿಂದ 1219 ಜನವಸತಿಗಳನ್ನು ಆವರಿಸಲು ಉದ್ದೇಶಿಸಲಾಗಿದೆ. ಇವುಗಳಲ್ಲಿ 79 ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಮಾರ್ಚ್ 2012ರ ಅಂತ್ಯಕ್ಕೆ ನೀಡಿದ್ದು, 44 ಕಾಮಗಾರಿಗಳನ್ನು ಟೆಂಡರ್ ಮೂಲಕ ಗುತ್ತಿಗೆದಾರಿರಗೆ ವಹಿಸಲಾಗಿದೆ. ಬಾಕಿ ಉಳಿದ ಯೋಜನೆಗಳ ಅಂದಾಜುಗಳ ತಯಾರಿಕೆ ಹಾಗೂ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಯೋಜನೆಗಳಿಗಾಗಿ ರೂ. 55.54 ಕೋಟಿಗಳನ್ನು ಮಾರ್ಚ್ 2012 ರ ಅಂತ್ಯಕ್ಕೆ ವೆಚ್ಚ ಮಾಡಲಾಗಿದೆ.
- 13ನೇ ಹಣಕಾಸು ಆಯೋಗದಡಿಯಲ್ಲಿ 4 ವರ್ಷಗಳಲ್ಲಿ ರೂ.300.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಉದ್ದೇಶಿಸಿದ್ದು, ಇದರಲ್ಲಿ 33 ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಹಾಗೂ 387 R.O ಘಟಕಗಳನ್ನು ಅಳವಡಿಸಿಲು ಕ್ರಿಯಾ ಯೋಜನೆಗೆ ಅನುಮೋದನೆ ದೊರೆತಿದೆ.

### 7.1.2. ನೀರಿನ ಗುಣಮಟ್ಟ ಪರೀಕ್ಷೆ-ಪರ್ಯಾಯ ಯೋಜನೆಗಳು:

ಕುಡಿಯುವ ನೀರಿನಲ್ಲಿ ಗುಣಮಟ್ಟದ ಸಮಸ್ಯೆ ಇರುವಂತಹ ಜನವಸತಿಗಳಿಗಾಗಿ ಸುರಕ್ಷಿತ ಕುಡಿಯುವ ನೀರಿನ ಯೋಜನೆಗಳನ್ನು ಎನ್.ಆರ್.ಡಿ.ಡಬ್ಲ್ಯೂ.ಪಿ. ಬಹು ಗ್ರಾಮ ಕಾರ್ಯಕ್ರಮದಡಿ ಭೂಮಿಯ ಮೇಲ್ಮೈ ಜಲಮೂಲ ಆಧರಿಸಿ ಯೋಜನೆಗಳನ್ನು ರೂಪಿಸುವುದಲ್ಲದೆ, ಪರ್ಯಾಯವಾಗಿ ರೂ.10.20ಕೋಟಿಗಳ ಅಂದಾಜು ವೆಚ್ಚದಲ್ಲಿ ರಿವರ್ಸ್ ಅಸ್ಮೋಸಿಸ್ ತಂತ್ರಜ್ಞಾನದ 100

ಡಿಫ್ಲೋರಿಡೇಷನ್ ಘಟಕಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗಿದೆ. ಇವಲ್ಲದೇ, Adsorption ತಂತ್ರಜ್ಞಾನದ 25 ಘಟಕಗಳನ್ನು ಅಳವಡಿಸಲಾಗಿದೆ ಹಾಗೂ ಸಮಸ್ಯಾತ್ಮಕ ಗ್ರಾಮಗಳ ಮನೆಗಳಿಗೆ 50,000 ಆಈ ಫಿಲ್ಟರ್‌ಗಳನ್ನು ಪೂರೈಸಲು ಉದ್ದೇಶಿಸಲಾಗಿದ್ದು, ಈ ಪೈಕಿ ಈಗಾಗಲೇ 28,207 ಫಿಲ್ಟರ್‌ಗಳನ್ನು ಒದಗಿಸಲಾಗಿದೆ. ಈಗಾಗಲೇ ಅಳವಡಿಸಿರುವ ರಿಸರ್ವ್ ಆಸ್ಮೋಸಿಸ್ R.O ಮತ್ತು Adsorption ತಂತ್ರಜ್ಞಾನದ 25 ಘಟಕಗಳು ಹಾಗೂ ಕೌಟುಂಬಿಕ ಆಈ ಫಿಲ್ಟರ್‌ಗಳ ಸಮರ್ಪಕ ನಿರ್ವಹಣೆಗಾಗಿ ವಾರ್ಷಿಕ ನಿರ್ವಹಣಾ ವ್ಯವಸ್ಥೆ (AMC) ಕಲ್ಪಿಸಲು ಕ್ರಮವಹಿಸಲಾಗಿದೆ.

### 7.1.3 ಸುವರ್ಣ ಜಲ:

ರಾಜ್ಯದಲ್ಲಿರುವ ಒಟ್ಟು 49,618 ಗ್ರಾಮೀಣ ಶಾಲೆಗಳ ಪೈಕಿ, 23,683 ಶಾಲೆಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು **'ಮಳೆ ನೀರು ಕೊಯ್ಲು ಆಂದೋಲನ'**ದಡಿ ರೂ.73.66 ಕೋಟಿ ಅನುದಾನವನ್ನು ಬಿಡುಗಡೆ ಮಾಡಿದೆ. ಇದುವರೆಗೆ ಈ ಯೋಜನೆಯಡಿಯಲ್ಲಿ 41,197 ಶಾಲೆಗಳನ್ನು ಆವರಿಸಲಾಗಿದೆ. ಸದರಿ ಯೋಜನೆಯ ಉತ್ತೇಜನಕ್ಕಾಗಿ ಗ್ರಾಮ ಪಂಚಾಯತಿಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು, ಎಸ್.ಡಿ.ಎಂ.ಸಿ. ಗಳು, ನಿರ್ಮಿತಿ ಕೇಂದ್ರಗಳ ನೆರವನ್ನು ಪಡೆಯಲಾಗಿದೆ. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮಳೆ ನೀರಿನ ಸಂಪನ್ಮೂಲ ಕೇಂದ್ರಗಳನ್ನು ಹಾಗೂ ಎಲ್ಲಾ ತಾಲ್ಲೂಕಿನಲ್ಲಿನ ನವಗ್ರಾಮಗಳಲ್ಲಿ ಮಳೆ ನೀರಿನ ಸಂಗ್ರಹಣೆಯ ಪ್ರಾತ್ಯಕ್ಷತೆಗಳನ್ನು ಸಹ ಸ್ಥಾಪಿಸಲಾಗಿದೆ. ಸದರಿ ಯೋಜನೆಗೆ ಉತ್ತೇಜನ ನೀಡಲು ಸರ್ಕಾರವು ಕ್ರಮ ವಹಿಸಿದೆ. ಗ್ರಾಮ ಪಂಚಾಯತಿಗಳು ಮನೆ ನಿರ್ಮಾಣ ವೇಳೆ ಅಗತ್ಯ ಪರವಾನಗಿ ನೀಡುವಾಗ ಕಡ್ಡಾಯವಾಗಿ Roof Top Rain Water Harvesting ವಿಧಾನ ಅಳವಡಿಸಿಕೊಳ್ಳಲು ಷರತ್ತು ವಿಧಿಸಲು ತಿಳಿಸಿದೆ. ಹೊಸ ಮನೆ ಹಾಗೂ ಹಾಲಿ ಇರುವ ಗ್ರಾಮೀಣ ಪ್ರದೇಶಗಳ ಜನವಸತಿಗಳಲ್ಲಿ ಈ ವಿಧಾನವನ್ನು ಅಳವಡಿಸಿಕೊಳ್ಳುವವರಿಗೆ ಪ್ರೋತ್ಸಾಹ ಧನ ನೀಡಲು ವಾರ್ಷಿಕ ಆಸ್ತಿ ತೆರಿಗೆ ಪಾವತಿಯಲ್ಲಿ 20% ರಿಯಾಯಿತಿಯನ್ನು ಆಗಸ್ಟ್ 2005 ರಿಂದ 5 ವರ್ಷಗಳ ಅವಧಿಯವರೆಗೆ ಘೋಷಿಸಲಾಗಿತ್ತು. ಮೆ॥ BAIF ಸಂಸ್ಥೆಯ ಮೂಲಕ ತುಮಕೂರು, ಗದಗ ಹಾಗೂ ಕೋಲಾರ ಜಿಲ್ಲೆಯ 5 ತಾಲ್ಲೂಕುಗಳ 115 ಗ್ರಾಮಗಳಲ್ಲಿ ಮಾದರಿ ತಂತ್ರಜ್ಞಾನ ಅಳವಡಿಸಿ ವೈಜ್ಞಾನಿಕ ತಳಹದಿಯಲ್ಲಿ ಸಮುದಾಯ ಸಹಭಾಗಿತ್ವದೊಂದಿಗೆ ಅಂತರ್ಜಲಮಟ್ಟ ಸುಧಾರಣೆ ಹಾಗೂ ಜಲಮೂಲದಲ್ಲಿನ ಫ್ಲೋರೈಡ್ ಅಂಶವನ್ನು ತಗ್ಗಿಸಲು, Roof Top ಮತ್ತು Surface Rain Water Harvesting ಮಾಡಲು, ಗ್ರಾಮೀಣ ಪ್ರದೇಶಗಳಲ್ಲಿನ ವ್ಯವಸಾಯೋತ್ಪನ್ನಗಳ ಉತ್ಪಾದನೆ ಹೆಚ್ಚಿಸಲು ಮತ್ತು ವರ್ಷವಿಡಿ ಉದ್ಯೋಗಾವಕಾಶವನ್ನು ಕಲ್ಪಿಸಲು ರೂ.14.34 ಕೋಟಿ ಅಂದಾಜಿನ ವಿಶೇಷ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ 115 ಸಮಸ್ಯಾತ್ಮಕ ಜನವಸತಿಗಳಲ್ಲಿ 5603 ಮಳೆ ನೀರು ಕೊಯ್ಲು ಪರಿಕರಗಳನ್ನು ಅಳವಡಿಸಿದೆ, 28–ಜಲಮರುಪೂರಣ ರಚನೆಗಳು ಮತ್ತು 2177 ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಲಾಗಿದೆ.

### 7.1.4 ಜಲಮಣಿ:–

ಈ ಯೋಜನೆ ಎಲ್ಲಾ ಶಾಲೆಗಳಿಗೆ ಕುಡಿಯುವ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಿ ಶುದ್ಧ ನೀರನ್ನು ಒದಗಿಸಲು ಹಮ್ಮಿಕೊಂಡಿರುವ ವಿನೂತನ ಯೋಜನೆ. ಇದರಡಿಯಲ್ಲಿ ರಾಜ್ಯದಲ್ಲಿ ಒಟ್ಟು 49,618 ಶಾಲೆಗಳನ್ನು ಗುರುತಿಸಲಾಗಿದ್ದು, 2009–10 ರಿಂದ 2011–12 ರವರೆಗೆ ಒಟ್ಟು 10,869 ಶಾಲೆಗಳಿಗೆ ಶುದ್ಧೀಕರಣ ಘಟಕಗಳನ್ನು ಅಳವಡಿಸಲಾಗಿದೆ. ಇದಕ್ಕೆ ಒಟ್ಟು ರೂ.12.28 ಕೋಟಿಗಳ ವೆಚ್ಚ ತಗುಲಿದೆ.

### 7.1.5 ಹೈಡ್ರೋಫ್ರಾಕ್ಚರಿಂಗ್ ಕಾರ್ಯಕ್ರಮಗಳು:

ರಾಜ್ಯದಲ್ಲಿ ಅತೀ ಕಡಿಮೆ ಮಳೆ ಮತ್ತು ವಿವಿಧ ಕಾರಣಗಳಿಂದ ಅಂತರ್ಜಲ ಶೋಷಣೆ ಯಾಗುತ್ತಿದ್ದು, ಅಂತರ್ಜಲ ಮಟ್ಟ ಕ್ಷೀಣಿಸುತ್ತಿದೆ. ಆದುದರಿಂದ ಕುಡಿಯುವ ನೀರಿನ ಜಲಮೂಲಗಳಲ್ಲಿ ಇಳುವರಿ ಕಡಿಮೆಯಾಗದಂತೆ ಕೃತಕ ಅಂತರ್ಜಲ ಮರು ಪ್ರವಹಿಸುವ ಕಾರ್ಯಕ್ರಮಗಳ ಜೊತೆಗೆ ಹಾಲಿ ಜಲಮೂಲಗಳ ಇಕ್ಕೆಲಗಳ ಆಳದಲ್ಲಿ ಭೇದಿಸಿ, ಇಳುವರಿ ಕಡಿಮೆಯಿರುವ ಬೋರ್‌ವೆಲ್‌ಗಳಲ್ಲಿ ನೀರಿನ ಇಳುವರಿ ಉತ್ತಮ ಪಡಿಸಲು ಹೈಡ್ರೋಫ್ರಾಕ್ಚರಿಂಗ್ ಯುನಿಟ್‌ಗಳಿಂದ ಕೊಳವೆ ಬಾವಿಗಳನ್ನು ಹೈಡ್ರೋಫ್ರಾಕ್ಚರ್ ಮಾಡಲಾಗಿರುವ ವಿವರಗಳು ಕೆಳಕಂಡಂತಿವೆ;

| ವರ್ಷ | ಹೈಡ್ರೋಫ್ರಾಕ್ಚರ್ ಮಾಡಿದ ಕೊಳವೆ ಬಾವಿಗಳ ಸಂಖ್ಯೆ | ಸಫಲ | ವಿಫಲ | ಶೇಕಡ ಸಫಲತೆ |
|---|---|---|---|---|
| 2007–2008 | 316 | 277 | 39 | 88.00 |
| 2008–2009 | 291 | 291 | – | 100 |
| 2009–2010 | 436 | 432 | 04 | 99.08 |
| 2010–2011 | 313 | 277 | 36 | 88.498 |
| 2011–2012 | 0 | 0 | 0 | 0 |

### 7.1.6 ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆ ಮತ್ತು ಉಸ್ತುವಾರಿ:

2005–06ನೇ ಸಾಲಿನಿಂದ 2007–08ನೇ ಸಾಲಿನವರೆಗೆ ರಾಷ್ಟ್ರೀಯ ಕುಡಿಯುವ ನೀರಿನ ಗುಣಮಟ್ಟ ನಿರ್ವಹಣೆ ಹಾಗೂ ಪರಿವೀಕ್ಷಣೆಯ ಕಾರ್ಯಕ್ರಮದಡಿಯಲ್ಲಿ ರೂ.774.34 ಲಕ್ಷಗಳು ರಾಜ್ಯಕ್ಕೆ ಬಿಡುಗಡೆಯಾಗಿದೆ. ಈ ಯೋಜನೆಯಡಿಯಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಇಲ್ಲಿಯವರೆಗೆ 2,610 ಜನರಿಗೆ ತರಬೇತಿ ನೀಡಲಾಗಿದೆ. ಈ ಸಾಲಿನಲ್ಲಿ ತಾಲ್ಲೂಕು/ಗ್ರಾ.ಪಂ. ಮಟ್ಟದಲ್ಲಿನ ತರಬೇತಿ ಕಾರ್ಯಕ್ರಮಗಳನ್ನು ಆಯ್ಕೆ ಮಾಡಲಾದ ಸರ್ಕಾರೇತರ ಸಂಸ್ಥೆಗಳ ಮೂಲಕ ನಡೆಸಲಾಗಿದೆ. ಜೊತೆಯಲ್ಲಿ ಎಲ್ಲಾ ಜಿಲ್ಲೆಗಳಿಗೆ ನೀರಿನ ಗುಣಮಟ್ಟ ಪರೀಕ್ಷಿಸುವ ಕಿಟ್‌ಗಳನ್ನು ಹಂಚಿಕೆ ಮಾಡಲಾಗಿದೆ. ಮತ್ತು ಹೆಚ್.ಆರ್.ಡಿ ಕಾರ್ಯಕ್ರಮದಡಿಯಲ್ಲಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ 5 ಜನರಂತೆ ಒಟ್ಟು 28,140 ಜನರಿಗೆ ತರಬೇತಿ ನೀಡಲು

ಯೋಜನೆ ರೂಪಿಸಲಾಗಿತ್ತು. ಅದರಂತೆ ಯೋಜನಾ ಗುರಿಗೆ ಹೆಚ್ಚುವರಿಯಾಗಿ ತರಬೇತಿ ನೀಡಲಾಗಿದ್ದು ರಾಯಚೂರು ಜಿಲ್ಲೆ ಹೊರತುಪಡಿಸಿ ಈವರೆಗೆ ರಾಜ್ಯಾದ್ಯಂತ 28,427 ಮಂದಿಗೆ ತರಬೇತಿ ನೀಡಲಾಗಿದೆ.

IEC ಕಾರ್ಯಕ್ರಮದಡಿಯಲ್ಲಿ ನೀರಿನ ಗುಣಮಟ್ಟ ನಿರ್ವಹಣೆ ಮತ್ತು ಪರಿವೀಕ್ಷಣೆ ಬಗ್ಗೆ ಗ್ರಾಮೀಣ ಸಮುದಾಯದಲ್ಲಿ ಅರಿವು ಮೂಡಿಸಲು ಹಾಗೂ ಪೂರ್ಣ ಸಮುದಾಯವು ಭಾಗವಹಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ತಾಲ್ಲೂಕು/ಗ್ರಾ.ಪಂ. ಮಟ್ಟದಲ್ಲಿನ ತರಬೇತಿಯ ಜೊತೆಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ಪೂರ್ಣಗೊಳಿಸಲಾಗಿದೆ.

ಈ ಕಾರ್ಯಕ್ರಮವನ್ನು M/s. MC & A, ಬೆಂಗಳೂರು ಹಾಗೂ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ವಹಿಸಿಕೊಡಲಾಗಿತ್ತು. ಭಾರತ ಸರ್ಕಾರವು ನೀಡಿದ ಮಾರ್ಗಸೂಚಿಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಕೈಪಿಡಿಗಳನ್ನು ಹಂಚಲಾಗಿದೆ ಹಾಗೂ ಜೊತೆಗೆ UNICEF ನಿಂದ ನೀಡಿದ ಕೈಪಿಡಿಗಳನ್ನು ಪಂ.ರಾ.ಇಂ.ವಿಭಾಗಗಳಿಗೆ ರವಾನಿಸಿ ತಾಲ್ಲೂಕು/ಗ್ರಾ.ಪಂ.ಗಳಿಗೆ ತರಬೇತಿ ನೀಡುವ ಸಂದರ್ಭದಲ್ಲಿ ಕೈಪಿಡಿಗಳನ್ನು ಸರಬರಾಜು ಮಾಡಿ ಹಂಚಲಾಗಿತ್ತು. ಪರಿವೀಕ್ಷಣೆ ಮತ್ತು ಉಸ್ತುವಾರಿ ಸಲುವಾಗಿ ಗ್ರಾಮ ಪಂಚಾಯತ್ ಮಟ್ಟದಿಂದ ರಾಜ್ಯ ಮಟ್ಟದ ಸಮಿತಿಗಳು ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಅಧಿಕಾರಿಗಳು/ಪ್ರತಿನಿಧಿಗಳನ್ನೊಳಗೊಂಡಿತ್ತು.

ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆಯನ್ನು ಸ್ಟೇಟ್ ರೆಫರಲ್ ಇನ್‌ಸ್ಟಿಟ್ಯೂಟ್ (SRI) ಆಗಿ ನೇಮಿಸಲಾಗಿದೆ. 2010-11ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ಎಲ್ಲಾ ಕುಡಿಯುವ ನೀರಿನ ಜಲಮೂಲಗಳ ಗುಣಮಟ್ಟ ಪರೀಕ್ಷಾ ಸಪ್ತಾಹದಡಿ ಜಿಲ್ಲಾ ನೀರು ಪರೀಕ್ಷಾಲಯಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಇತರೆ ಪ್ರಯೋಗಾಲಯಗಳಲ್ಲಿ ನೀರಿನ ಜಲಮೂಲಗಳ ಮಾದರಿಗಳನ್ನು ಪರೀಕ್ಷಿಸಲಾಯಿತು.

ರಾಜ್ಯದಲ್ಲಿ ಹಾಲಿ ಇರುವ ಗ್ರಾಮೀಣ ಜಲಮೂಲಗಳ ಸಂಖ್ಯೆ 2,36,892. ಅವುಗಳಲ್ಲಿ 2011-12 ನೇ ಸಾಲಿನಲ್ಲಿ ಗುಣಮಟ್ಟ ಪರೀಕ್ಷೆ ಮಾಡಿರುವ ಜಲಮೂಲಗಳ ಸಂಖ್ಯೆ: 1,30,511. ಪರೀಕ್ಷಿಸಿದ ಗುಣಾಂಶಗಳ ಮೇಲೆ ಕಲುಷಿತ ಜಲಮೂಲಗಳ ಆಧಾರದ ಮೇಲೆ ವಿವರ PH – 912, Total Hardness – 5247, Chloride – 321, Fluoride – 3169, Nitrate – 2399 ಮತ್ತು Iron – 993, ಪರೀಕ್ಷಿಸಿದ ನೀರಿನ ಮಾದರಿಗಳ ಪೈಕಿ, ಕಲ್ಮಷಭರಿತ ಜಲಮೂಲಗಳ ಜನವಸತಿಗಳ ಸಂಖ್ಯೆ:10,137.

### 7.1.7 ಸಮಗ್ರ ಮಾಹಿತಿ ನಿರ್ವಹಣಾ ಪದ್ಧತಿ INTEGRATED MANAGEMENT INFORMATION SYSTEM (IMIS)

ಸದರಿ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಲಾಗುವ ಎಲ್ಲಾ ಯೋಜನೆ / ಕಾಮಗಾರಿಗಳ ವಿವರಗಳನ್ನು ಮತ್ತು ಮಾಸಿಕ ಪ್ರಗತಿ ವರದಿಗಳನ್ನು Online IMIS Website ನಲ್ಲಿ ದಾಖಲಿಸುವುದು ಕಡ್ಡಾಯವಿರುತ್ತದೆ. ಈ Website ನಲ್ಲಿ ವಾರ್ಷಿಕ ಕ್ರಿಯಾ ಯೋಜನೆ, ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡ ಯೋಜನೆಗಳ ವಿವರ, ಜನವಸತಿಗಳ ವಸ್ತುಸ್ಥಿತಿ ಇತ್ಯಾದಿಗಳ ವಿವರಗಳನ್ನು ಸಾರ್ವಜನಿಕರು ಸಹ ವೀಕ್ಷಿಸಲು ಅವಕಾಶವಿರುತ್ತದೆ. ಈ ವ್ಯವಸ್ಥೆ ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಅನುಷ್ಠಾನದ ಮಾಹಿತಿಗೆ ಸಂಬಂಧಿಸಿದಂತೆ ಪಾರದರ್ಶಕವಾಗಿದೆ.

### 7.1.8 ಕೇಂದ್ರ ಪುರಸ್ಕೃತ ಡಗ್–ವೆಲ್ ಕಾರ್ಯಕ್ರಮ

ಕೇಂದ್ರ ಪುರಸ್ಕೃತ ಡಗ್–ವೆಲ್ ಕಾರ್ಯಕ್ರಮದಡಿ, ರಾಜ್ಯದ 20 ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ, ಅಂತರ್ಜಲದ ಮಟ್ಟವನ್ನು ಸುಧಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಖಾಸಗಿ ತೆರೆದ ಬಾವಿಗಳ ನಿರ್ಮಾಣ ಮಾಡುವ ಫಲಾನುಭವಿಗಳು ರೂ.4100/– ಪ್ರತಿ ಬಾವಿಗೆ (for small & marginal & BPL farmers) ಮತ್ತು ರೂ.2050/– ಪ್ರತಿ ಬಾವಿಗೆ (for others) ರಂತೆ ಸಹಾಯಧನ ಪಡೆಯುವರು. ಇಲ್ಲಿಯವರೆಗೆ, ಒಟ್ಟು 88,847 ಫಲಾನುಭವಿಗಳಿಗೆ ಅನುಮೋದನೆ ದೊರೆತಿದೆ. ಈ ಪೈಕಿ, 11,007 ಫಲಾನುಭವಿಗಳು Dug-Well structures ನಿರ್ಮಿಸಿದೆ. ಉಳಿದವು ಪ್ರಗತಿಯಲ್ಲಿವೆ. 2011–12ರಿಂದ ಈ ಯೋಜನೆ ಚಾಲನೆಯಲ್ಲಿರುವುದಿಲ್ಲ.

IMIS Website- **www.indiawater.gov.in/imisweb**

NRDWP ಯ ಮಾರ್ಗಸೂಚಿ ಮತ್ತು ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮಗಳಿಗೆ ಸಂಬಂಧಿಸಿದ Website – **www.ddws.nic.in**

* *

## 7.2 ವಿಶ್ವಬ್ಯಾಂಕ್ ನೆರವಿನ ಎರಡನೇ ಕರ್ನಾಟಕ ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಯೋಜನೆ – "ಜಲನಿರ್ಮಲ ಯೋಜನೆ"

ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ–1 ರ ಅನುಷ್ಠಾನವು ರಾಜ್ಯದಲ್ಲಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಲಯದಲ್ಲಿ ಪ್ರೋತ್ಸಾಹದಾಯಕ ಸುಧಾರಣೆಗಳನ್ನು ತಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೂಲಕ ಮುಂದುವರೆದ ಯೋಜನೆಗೆ ನೆರವು ಕೋರಿ ವಿಶ್ವಬ್ಯಾಂಕನ್ನು ಸಂಪರ್ಕಿಸಿತು. ಡಿಸೆಂಬರ್–2000, ಜನವರಿ–ಫೆಬ್ರವರಿ, 2001 ಹಾಗೂ ಮೇ–2001 ರಲ್ಲಿ ವಿಶ್ವಬ್ಯಾಂಕ್ ನಿಯೋಜಿಸಿದ ಯೋಜನಾ ಸಿದ್ಧತಾ ನಿಯೋಗದೊಡನೆ ಯೋಜನೆಯ ಕಾರ್ಯವ್ಯಾಪ್ತಿ ಘಟಕಾಂಶಗಳನ್ವಯ ಹಾಗೂ ಪ್ರಸ್ತಾವಿತ ಮುಂದುವರೆದ ಯೋಜನೆಯಲ್ಲಿ ಅನುಸರಿಸಬೇಕಾದ ಪ್ರಮುಖ ಕಾರ್ಯನೀತಿ ಮಾನದಂಡಗಳ

ಬಗ್ಗೆ ಚರ್ಚಿಸಿ, ಮಾತುಕತೆ ನಡೆಸಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಕಾರ್ಯತಂತ್ರ ಪತ್ರ 2000–2005 ರಲ್ಲಿ ಸೂಚಿಸಲಾದ ಕರ್ನಾಟಕದಲ್ಲಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯಲ್ಲಿ ಅನುಸರಿಸಬೇಕಾದ ಪ್ರಮುಖ ಕಾರ್ಯನೀತಿಗಳಲ್ಲಿ ಕೆಲವು ಬದಲಾವಣೆಗಳನ್ನು ಯೋಜನಾ ಸಿದ್ಧತಾ ನಿಯೋಗದೊಡನೆ ಚರ್ಚಿಸಿ ಅಂತಿಮಗೊಳಿಸಲಾಯಿತು. ಈ ಮುಂದುವರೆದ ಯೋಜನೆಗೆ ಸರ್ಕಾರದ ಆದೇಶ ಸಂ.ಗ್ರಾಅಪ/145/ಪಿಪಿಎಂ/2000, ದಿನಾಂಕ 19ನೇ ಜನವರಿ 2001 ರಂತೆ "ಜಲ ನಿರ್ಮಲ" ಯೋಜನೆಯೆಂದು ಹೆಸರಿಸಿ, ಉತ್ತರ ಕರ್ನಾಟಕದ 11 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿನ 744 ಗ್ರಾಮ ಪಂಚಾಯತಿಗಳ 3061 ಜನವಸತಿಗಳಲ್ಲಿ ಕುಡಿಯುವ ನೀರು ಯೋಜನೆ ಹಾಗೂ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ, ಜೂನ್–2010 ರ ಅಂತ್ಯಕ್ಕೆ ಯೋಜನೆಯನ್ನು ಮುಕ್ತಾಯಗೊಳಿಸಲಾಯಿತು. ಈ ಯೋಜನೆಯ ಅನುಷ್ಠಾನದಿಂದ ಈಗಾಗಲೇ ಸುಮಾರು 51 ಲಕ್ಷ ಜನ ಯೋಜನೆಯ ಪ್ರಯೋಜನವನ್ನು ಪಡೆದಿರುವರು.

ಸರ್ಕಾರವು ಯೋಜನಾ ವ್ಯವಸ್ಥಾಪನ ಮತ್ತು ಮೇಲ್ವಿಚಾರಣೆಗಾಗಿ ಸ್ವಾಯತ್ತ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ (ಕ.ಗ್ರಾ.ನೀ.ಸ.ನೈ.ಸಂ.) ಯನ್ನು ಸ್ಥಾಪಿಸಲು ಮಂಜೂರಾತಿ ನೀಡಿತು. ವಿಶ್ವಬ್ಯಾಂಕ್ ನಿಶ್ಚಿತಪಡಿಸಿದ ಕಾರ್ಯನೀತಿ ಮಾನದಂಡಗಳ ಆಧಾರದ ಮೇಲೆ ಸಂಸ್ಥೆಯ ಮೆಮೋರ್‍ಯಾಂಡಂ ಆಫ್ ಅಸೋಸಿಯೇಷನ್ ಮತ್ತು ಪ್ರಸ್ತಾವಿತ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ನಿಯಮಗಳನ್ನು ಸಿದ್ಧಪಡಿಸಲಾಯಿತು.

ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸಂಸ್ಥೆಯ ಅಧ್ಯಕ್ಷರಾಗಿರುತ್ತಾರೆ. ಸಂಸ್ಥೆಯ ಅಧ್ಯಕ್ಷರು ನಿಯತಕಾಲಿಕ ಪ್ರಗತಿ ಪರಿಶೀಲನೆ ಹಾಗೂ ಕಾರ್ಯನೀತಿಗಳ ಮೂಲಕ ಸಂಸ್ಥೆಗೆ ಸಲಹೆಗಳನ್ನು ನೀಡುವರು. ಮಾನ್ಯ ಮಂತ್ರಿಗಳು ವಾರ್ಷಿಕ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿಯು ಸಭೆ ಸೇರುವುದು. ಸದರಿ ಸಭೆಯಲ್ಲಿ ಯೋಜನಾ ಅನುಷ್ಠಾನದ ವಿಷಯಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಲಾಗುವದು ಹಾಗೂ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಲಾಗುವುದು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರು ಆಡಳಿತ ಮಂಡಳಿಯ ಉಪಾಧ್ಯಕ್ಷರಾಗಿರುತ್ತಾರೆ ಹಾಗೂ ನಿಯಮಿತವಾಗಿ ಪ್ರಗತಿ ಪರಿಶೀಲನೆ ಹಾಗೂ ಕಾರ್ಯನೀತಿಗಳ ಮೂಲಕ ಯೋಜನಾ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಸಂಸ್ಥೆಗೆ ಮಾರ್ಗದರ್ಶನ ನೀಡುವರು.

ನಿರ್ದೇಶಕರು, ಕ.ಗ್ರಾ.ನೀ.ಸ.ನೈ. ಸಂಸ್ಥೆ ಇವರು ಸಂಸ್ಥೆಯ ದೈನಂದಿನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವರು ಮತ್ತು ಈ ಹಿಂದೆ ವಹಿಸಲಾಗಿದ್ದ ವಿಶ್ವಬ್ಯಾಂಕ್ ನೆರವಿನ ಜಲ ನಿರ್ಮಲ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ, ಪ್ರಸ್ತುತ ಸಂಸ್ಥೆಗೆ ವಹಿಸಿರುವ ಇತರೆ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಳು ಅಂದರೆ ಜಲ ನಿರ್ಮಲ ಯೋಜನೆ - ಹೆಚ್ಚುವರಿ ಆರ್ಥಿಕ ನೆರವು ಹಾಗೂ ಸಂಪೂರ್ಣ ನೈರ್ಮಲ್ಯ ಆಂದೋಲನ ಕಾರ್ಯಕ್ರಮಗಳ ಅನುಷ್ಠಾನದ ಮೇಲುಸ್ತುವಾರಿಯ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**ವಿಶ್ವಬ್ಯಾಂಕ್ ನೆರವಿನ 2ನೇ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ - ಹೆಚ್ಚುವರಿ ಆರ್ಥಿಕ ನೆರವು ಯೋಜನೆ - "ಜಲ ನಿರ್ಮಲ ಹೆಚ್ಚುವರಿ ಆರ್ಥಿಕ ನೆರವು ಯೋಜನೆ"**

ಎರಡನೇ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯನ್ನು ಉತ್ತರ ಕರ್ನಾಟಕದ 11 ಜಿಲ್ಲೆಗಳಲ್ಲಿ ಅಂದರೆ ಬಾಗಲಕೋಟೆ, ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದ್ದು, ಸದರಿ ಯೋಜನೆಯು 30ನೇ ಜೂನ್ 2010 ರಂದು ಮುಕ್ತಾಯಗೊಂಡಿರುತ್ತದೆ. ಜಲ ನಿರ್ಮಲ ಯೋಜನೆಯಡಿ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಮುದಾಯದಿಂದ ಹೆಚ್ಚಿನ ಬೇಡಿಕೆ ಬಂದ ಕಾರಣ ಹಾಗೂ ನೀರಿನ ಗುಣಮಟ್ಟದ ಸಮಸ್ಯೆಯಿಂದ ಬಾಧಿತವಾಗಿರುವ ಹೆಚ್ಚಿನ ಸಂಖ್ಯೆಯ ಹಳ್ಳಿಗಳಿಗೆ ಸುರಕ್ಷಿತ ಶುದ್ಧ ಕುಡಿಯುವ ನೀರನ್ನು ಒದಗಿಸುವ ಅವಶ್ಯಕತೆಯ ಹಿನ್ನೆಲೆಯಲ್ಲಿ ಜಲ ನಿರ್ಮಲ ಯೋಜನೆಯಡಿ ಜಾರಿಯಲ್ಲಿದ್ದ ಯೋಜನಾ ಜಿಲ್ಲೆಗಳಲ್ಲಿ ಹಾಗೂ ನೀರಿನ ಗುಣಮಟ್ಟ ಬಾಧಿತವಾಗಿರುವ ಇನ್ನಿತರ ಜಿಲ್ಲೆಗಳಲ್ಲಿನ ಜನವಸತಿಗಳಲ್ಲಿ ಹೆಚ್ಚಿನ ನೀರು ಸರಬರಾಜು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು, ರೂ.1100 ಕೋಟಿಗಳ ಅಂದಾಜು ಯೋಜನಾ ವೆಚ್ಚದ ಯೋಜನೆಗೆ ಹೆಚ್ಚುವರಿ ಆರ್ಥಿಕ ನೆರವನ್ನು ಒದಗಿಸಲು, ಪ್ರಸ್ತಾವನೆಯನ್ನು ವಿಶ್ವಬ್ಯಾಂಕ್‌ಗೆ ಶಿಫಾರಸ್ಸು ಮಾಡುವಂತೆ, ಭಾರತ ಸರ್ಕಾರಕ್ಕೆ ಪತ್ರ ಸಂಖ್ಯೆ: ಗ್ರಾಅಪ/ಕನೀಸಂ/815/2009, ದಿನಾಂಕ 24-10-2009 ರಲ್ಲಿ ತಿಳಿಸಲಾಯಿತು.

ಈ ಬಗ್ಗೆ ವಿಶ್ವಬ್ಯಾಂಕ್, ಏಪ್ರಿಲ್ 2010 ರಲ್ಲಿ ಯೋಜನೆಯ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳೊಂದಿಗೆ ವಿಸ್ತೃತವಾಗಿ ಚರ್ಚಿಸಿತು.

29-04-2010 ರಿಂದ 6-05-2010 ರವರೆಗೆ ವಿಶ್ವಬ್ಯಾಂಕ್ ತಂಡವು ರಾಜ್ಯಕ್ಕೆ ಭೇಟಿ ನೀಡಿತು ಮತ್ತು ಯೋಜನಾ ಪ್ರಸ್ತಾವನೆ, ಒದಗಿಸುವ / ಸಂಗ್ರಹಣಾ (Procurement) ಬೇಡಿಕೆಗಳು, ಹಾಗೂ ಪ್ರಸ್ತಾವಿತ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯ ಹಣಕಾಸು ವ್ಯವಸ್ಥೆ ಇವುಗಳ ಬಗ್ಗೆ ಯೋಜನಾ ಅಧಿಕಾರಿಗಳು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರೊಂದಿಗೆ ವ್ಯಾಪಕ ಚರ್ಚೆಯನ್ನು ನಡೆಸಿತು. ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯಡಿ ದೊರೆಯಬಹುದಾದ 3 ವರ್ಷಗಳ ಸೀಮಿತ ಅವಧಿಯನ್ನು ಗಮನದಲ್ಲಿಟ್ಟು ಕೊಂಡು, ಯೋಜನೆಯ

ಪ್ರಸ್ತಾವನೆಯನ್ನು ವಿಶ್ವಬ್ಯಾಂಕ್ ಮರುಪರಿಶೀಲಿಸಿ, ವಿಶ್ವಬ್ಯಾಂಕ್ 99.300 M SDRs (150 Million US$, ಸರಿ ಸುಮಾರು 700 ಕೋಟಿ ರೂ.ಗಳು) ನೆರವನ್ನು ಒದಗಿಸಬಹುದೆಂದು ಸೂಚಿಸಿತು. ಅದರಂತೆ, ಯೋಜನಾ ಗಾತ್ರವನ್ನು ರಾಜ್ಯದ ಪಾಲು ಸೇರಿಸಿ ರೂ.816.18 ಕೋಟಿಗಳಿಗೆ ಮಿತಿಗೊಳಿಸಲಾಯಿತು.

17ನೇ ಮೇ, 2010 ರಂದು ನಡೆದ ವಿಶ್ವಬ್ಯಾಂಕ್ ತಂಡದೊಂದಿಗಿನ ವಿಚಾರ ವಿನಿಮಯದಲ್ಲಿ (Negotiations) ಆರ್ಥಿಕ ಮಂತ್ರಾಲಯ, ಭಾರತ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆ, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರದ ಕುಡಿಯುವ ನೀರು ಸರಬರಾಜು ಇಲಾಖೆ ಹಾಗೂ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಪ್ರತಿನಿಧಿಗಳು ಭಾಗವಹಿಸಿದ್ದರು. ಯೋಜನೆಯ ವಿವಿಧ ಅಂಶಗಳಲ್ಲಿನ ವೆಚ್ಚದ ಶೇಕಡಾ 85 ರಷ್ಟು ಭಾಗವನ್ನು ಭರಿಸಲು ವಿಶ್ವಬ್ಯಾಂಕ್ ಒಪ್ಪಿತು. ಒಮ್ಮತದ ವಿಚಾರ ವಿನಿಮಯದಲ್ಲಿ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಗೆ, ಯೋಜನಾ ಒಪ್ಪಂದ ಮತ್ತು ಸಾಲದ ಒಪ್ಪಂದಗಳು ಇತ್ಯರ್ಥಗೊಂಡಿರುತ್ತವೆ.

ದಿನಾಂಕ 15–06–2010 ರಂದು ನಡೆದ ವಿಶ್ವಬ್ಯಾಂಕ್‌ನ ಸಭೆಯಲ್ಲಿ, ಮಂಡಳಿಯ ನಿರ್ದೇಶಕರುಗಳು ಪ್ರಸ್ತಾವನೆಯನ್ನು ಪರಿಗಣಿಸಿ, ಯೋಜನೆಗೆ 150 M US$ IDA ಕ್ರೆಡಿಟ್ ನೀಡಲು ಅನುಮತಿಸಿದರು. ಇದನ್ನೇ, ವಿಶ್ವಬ್ಯಾಂಕ್ ತನ್ನ ತಿಳುವಳಿಕೆ ದಿನಾಂಕ 29–06–2010 ರಂದು ತಿಳಿಯಪಡಿಸಿರುತ್ತಾರೆ. ದಿನಾಂಕ 17–07–2010 ರಂದು ಯೋಜನಾ ಒಪ್ಪಂದ ಹಾಗೂ ಆರ್ಥಿಕ ನೆರವಿನ ಒಪ್ಪಂದಗಳಿಗೆ ಅಂಕಿತ ಹಾಕಲಾಗಿರುತ್ತದೆ.

ಯೋಜನಾ ಕರಾರು ಒಪ್ಪಂದದನ್ವಯ, ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯ ಯೋಜನಾ ಅವಧಿಯು 1ನೇ ಜುಲೈ, 2010 ರಂದು ಪ್ರಾರಂಭಗೊಂಡು 3 ವರ್ಷಗಳ ಅವಧಿಯದ್ದಾಗಿರುತ್ತದೆ. ಕರಾರು ಒಪ್ಪಂದದಂತೆ ನೆರವಿನ ಅನ್ವಯಿಸುವ ದಿನಾಂಕವು ಈ ಕುರಿತಾದ ವಿಧಿಬದ್ಧ ಪ್ರಕ್ರಿಯೆಗಳು ಪೂರ್ಣಗೊಂಡ ದಿನದಿಂದ ಯೋಜನೆಯ IDA ಕ್ರೆಡಿಟ್ ಜಾರಿಗೆ ಬಂದಿರುತ್ತದೆ.

ಈ ಬಗ್ಗೆ ಯೋಜನಾ ಮತ್ತು ಆರ್ಥಿಕ ಇಲಾಖೆಗಳು ಯೋಜನೆಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆಗೆ ತಮ್ಮ ಸಹಮತಿಯನ್ನು ನೀಡಿರುತ್ತದೆ.

**1. ಅ) ಯೋಜನೆಯ ದೂರದೃಷ್ಟಿ, ನಿರ್ದಿಷ್ಟಪಡಿಸಿದ ಗುರಿ ಮತ್ತು ಉದ್ದೇಶಗಳು**

**ಯೋಜನೆಯ ದೂರದೃಷ್ಟಿ**

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸೇವೆಯ ಗುಣಮಟ್ಟವನ್ನು ಉತ್ತಮ ಪಡಿಸುವುದು.

**ನಿರ್ದಿಷ್ಟ ಪಡಿಸಿದ ಗುರಿ**

❖ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸೇವೆಯ ಗುಣಮಟ್ಟವನ್ನು ಉತ್ತಮ ಪಡಿಸುವುದರೊಂದಿಗೆ ಈ ಕೆಳಗಿನ ಅಂಶಗಳನ್ನು ಸಾಧಿಸುವುದು

- ಸುಸ್ಥಿರ ಅಭಿವೃದ್ಧಿ
- ಬಡತನ ಕಡಿಮೆ ಮಾಡುವುದು
- ಸುಸ್ಥಿರವಾದ ಆರೋಗ್ಯ ಮತ್ತು ಶುಚಿತ್ವದ ಸೌಲಭ್ಯಗಳನ್ನು ಗ್ರಾಮೀಣ ಜನತೆಗೆ ಒದಗಿಸುವುದು
- ಸಾಮಾನ್ಯವಾಗಿ ಸಮುದಾಯವನ್ನು ಮತ್ತು ವಿಶೇಷವಾಗಿ ಗ್ರಾಮೀಣ ಬಡಜನರು ಅದರಲ್ಲೂ ಮಹಿಳೆಯರನ್ನು ಒಳಗೊಳ್ಳುವಂತೆ ಮಾಡಿ ಶಕ್ತಗೊಳಿಸುವುದು
- ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ವಿಧಾನವನ್ನು ಬಲಪಡಿಸುವುದು

❖ ಸಮರ್ಥನೀತಿ ಚೌಕಟ್ಟಿನಲ್ಲಿ ದೀರ್ಘಕಾಲಿಕ ಹಾಗೂ ಸುಸ್ಥಿರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಲಯದ ಅನುಷ್ಠಾನ ಮತ್ತು ಕಾರ್ಯತಂತ್ರದ ಸ್ವರೂಪವನ್ನು ಉತ್ತೇಜಿಸುವುದು.

**ಉದ್ದೇಶಗಳು**

ವಿದೇಶಿ ನೆರವಿನ ಯೋಜನೆಯಾದ ವಿಶ್ವಬ್ಯಾಂಕ್ ನೆರವಿನ ಜಲ ನಿರ್ಮಲ – ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯಡಿ, ಸುಧಾರಿಸಲ್ಪಟ್ಟ ಮತ್ತು ಸುಸ್ಥಿರವಾದ ಕುಡಿಯುವ ನೀರು ಮತ್ತು ನೈರ್ಮಲ್ಯ ಸೇವೆಗಳನ್ನು ಗ್ರಾಮೀಣ ಸಮುದಾಯವು ಪಡೆಯುವ ಅವಕಾಶವನ್ನು ಹೆಚ್ಚಿಸುವುದು; ಮತ್ತು ಕುಡಿಯುವ ನೀರು ಮತ್ತು ನೈರ್ಮಲ್ಯ ಸೇವೆಗಳನ್ನು ವಿಕೇಂದ್ರೀಕರಿಸಿ ಗ್ರಾಮ ಪಂಚಾಯತಿಗಳು ಮತ್ತು ಬಳಕೆದಾರರ ಗುಂಪುಗಳ ಮೂಲಕ ಪೂರೈಸುವ ವ್ಯವಸ್ಥೆಯನ್ನು ಸಾಂಸ್ಥೀಕರಿಸುವುದು.

**ಅ) ಶಾಖೆಯ ಆಡಳಿತಾತ್ಮಕ ಸ್ವರೂಪ**

1. ಯೋಜನೆಯ ಅನುಷ್ಠಾನದಲ್ಲಿ ಗ್ರಾಮ ಪಂಚಾಯತಿಗಳು ಕೇಂದ್ರ ಬಿಂದುಗಳಾಗಿರುತ್ತವೆ.
2. ಗ್ರಾಮ ಪಂಚಾಯತಿಗಳು ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ನೆರವು ಘಟಕಗಳ ತಾಂತ್ರಿಕ ನೆರವಿನೊಂದಿಗೆ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆಯ ಯೋಜನಾ ತಯಾರಿಕೆ, ಸಂಗ್ರಹಣೆ, ಖರೀದಿ, ನಿರ್ಮಾಣ, ನಿರ್ವಹಣೆಯ, ಪ್ರಾಥಮಿಕ ಜವಾಬ್ದಾರಿ ಹೊಂದಿರುತ್ತವೆ. ಜಿಲ್ಲಾ ನೆರವು ಘಟಕಗಳು ಗ್ರಾ. ಪಂ. ಗಳಿಗೆ ಸಮಗ್ರವಾದ ತಾಂತ್ರಿಕ ಸಮುದಾಯ ಅಭಿವೃದ್ಧಿ ಮತ್ತು ಆಡಳಿತ ನಿರ್ವಹಣೆಯ ನೆರವನ್ನು ನೀಡುತ್ತದೆ.
3. ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯು ರಾಜ್ಯ ಮಟ್ಟದಲ್ಲಿ ಯೋಜನೆಯ ತಯಾರಿಕೆ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿ ಹೊಂದಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/195/ಪಿಪಿಎಂ/2000, ದಿನಾಂಕ 4-8-2001 ರಲ್ಲಿ ಕ.ಗ್ರಾ.ನೀ.ಸ.ನೈ. ಸಂಸ್ಥೆಯನ್ನು ಸ್ಥಾಪಿಸಲು ಸಹಮತಿಯನ್ನು ಪಡೆಯಲಾಗಿದೆ ಹಾಗೂ ಸಂಸ್ಥೆಯನ್ನು

ದಿನಾಂಕ 27–08–2001 ರಂದು ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ರಡಿ ನೋಂದಾಯಿಸಲಾಗಿದೆ.

4. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಗಳು ಯೋಜನಾ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿರುತ್ತವೆ. ಜಿ.ಪಂ.ಗಳಿಗೆ ನೆರವಾಗಲು ಹಾಗೂ ಅನುಷ್ಠಾನವನ್ನು ಸುಗಮಗೊಳಿಸುವುದಕ್ಕಾಗಿ ಕ.ಗ್ರಾ.ನೀ.ಸ. ಮತ್ತು ನೈ. ಸಂಸ್ಥೆಯು ಯೋಜನೆಗೆ ಸೀಮಿತವಾದ ಜಿಲ್ಲಾ ನೆರವು ಘಟಕವನ್ನು ಸ್ಥಾಪಿಸಿದೆ.
5. ಜಿಲ್ಲಾ ಮಟ್ಟದಲ್ಲಿ ಯೋಜನಾ ಅನುಷ್ಠಾನದ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೊಂದಿದ್ದು, ಜಿಲ್ಲಾ ನೆರವು ಘಟಕದ ಯೋಜನಾ ವ್ಯವಸ್ಥಾಪಕರಾಗಿರುತ್ತಾರೆ. ಜಿಲ್ಲಾ ನೆರವು ಘಟಕಗಳು ಯೋಜನಾ ಚಟುವಟಿಕೆಗಳ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನದ ಜವಾಬ್ದಾರಿಗಳನ್ನು ಹೊಂದಿದ್ದು, ಜಿಲ್ಲಾ ನೆರವು ಘಟಕಗಳು ಜಿಲ್ಲಾ ಮಟ್ಟದಲ್ಲಿ ಸ್ವಾಯತ್ತ ಸಂಸ್ಥೆಗಳಾಗಿರುತ್ತವೆ.
6. ಸರ್ಕಾರಿ ಹಾಗೂ ಸರ್ಕಾರೇತರ ವಲಯದ ಮಿಶ್ರ ಯೋಜನಾ ಸಿಬ್ಬಂದಿಗಳು ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವರು.

**ಜಲ ನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯ ಗಮನಾರ್ಹ ವೈಶಿಷ್ಟ್ಯಗಳು**

| | |
|---|---|
| ಯೋಜನೆಯ ಹೆಸರು | ಜಲ ನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆ |
| ಯೋಜನೆಯ ಪ್ರದೇಶ | ಉತ್ತರ ಕರ್ನಾಟಕದ 12 ಜಿಲ್ಲೆಗಳು (ಬಾಗಲಕೋಟೆ, ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಯಾದಗಿರಿ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರ ಕನ್ನಡ) ಹಾಗೂ ನೀರಿನ ಗುಣಮಟ್ಟವು ಆತಂಕಕ್ಕೆ ಕಾರಣವಾಗಿರುವ ಇತರೆ ಕೆಲವು ಜಿಲ್ಲೆಗಳು. |
| ಪತ್ತು ಜಾರಿಯಾದ ದಿನಾಂಕ | 17ನೇ ಜುಲೈ 2010 ಕ್ರೆಡಿಟ್ ಸಂಖ್ಯೆ: ಅಡಿ 4768 IN |
| ಹಣ ಭರಿಸುವ ಸಂಸ್ಥೆ | ಐಡಿಎ – ವಿಶ್ವಬ್ಯಾಂಕ್, ಯೋಜನಾ ಗುರುತಿನ ಸಂಖ್ಯೆ: P119828 |
| ಸಂಬಂಧಿಸಿದ ಸಚಿವಾಲಯ | ಭಾರತ ಸರ್ಕಾರ (ಹಣಕಾಸು ಸಚಿವಾಲಯ, ಆರ್ಥಿಕ ವ್ಯವಹಾರಗಳ ಇಲಾಖೆ)<br>ಕರ್ನಾಟಕ ಸರ್ಕಾರ (ಗ್ರಾ. ಅ. ಮತ್ತು ಪಂ. ರಾಜ್) |
| ಅನುಷ್ಠಾನ ಪ್ರಾಧಿಕಾರ | ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ |
| ಯೋಜನೆಯ ಅವಧಿ | ಜುಲೈ–2010 ರಿಂದ ಜೂನ್–2013 |
| ಯೋಜನೆಯ ಉದ್ದೇಶಗಳು | 1. ಸುಧಾರಿಸಲ್ಪಟ್ಟ ಮತ್ತು ಸುಸ್ಥಿರವಾದ ಕುಡಿಯುವ ನೀರು ಮತ್ತು ನೈರ್ಮಲ್ಯ ಸೇವೆಗಳನ್ನು ಗ್ರಾಮೀಣ ಸಮುದಾಯವು ಪಡೆಯುವ ಅವಕಾಶವನ್ನು ಹೆಚ್ಚಿಸುವುದು; ಮತ್ತು<br>2. ಕುಡಿಯುವ ನೀರು ಮತ್ತು ನೈರ್ಮಲ್ಯ ಸೇವೆಗಳನ್ನು ವಿಕೇಂದ್ರೀಕರಿಸಿ ಗ್ರಾಮ ಪಂಚಾಯತಿಗಳು ಮತ್ತು ಬಳಕೆದಾರರ |

| | |
|---|---|
| | ಗುಂಪುಗಳ ಮೂಲಕ ಪೂರೈಸುವ ವ್ಯವಸ್ಥೆಯನ್ನು ಸಾಂಸ್ಥೀಕರಿಸುವದು. |
| ಯೋಜನೆಯ ಕಾರ್ಯನೀತಿಗಳು | 1. ವಿಕೇಂದ್ರೀಕರಣದ ಮುನ್ನಡೆ<br>2. ಸಮುದಾಯ ಆಧಾರಿತ<br>3. ಬಂಡವಾಳ ಪಾಲುಗಾರಿಕೆ<br>4. ನೀರು ಮತ್ತು ನೈರ್ಮಲ್ಯ ವ್ಯವಸ್ಥೆಯ ಕಡೆ ಗಮನ ಹರಿಸುವಿಕೆ<br>5. ಸಮುದಾಯದಿಂದ ಚಾಲನೆ ಮತ್ತು ನಿರ್ವಹಣೆ |
| ಯೋಜನೆಯ ಮುಖ್ಯ ಅಂಗಗಳು | • ಸಮುದಾಯ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯ ಒದಗಿಸುವಿಕೆ (ಗ್ರಾಮ ಮಟ್ಟದಲ್ಲಿ)<br>• ಸಾಂಸ್ಥಿಕ ಅಭಿವೃದ್ಧಿ (ಯೋಜನಾ ಮಟ್ಟ)<br>• ರಾಜ್ಯದಾದ್ಯಂತ ವಲಯಾಭಿವೃದ್ಧಿ (ರಾಜ್ಯ ಮಟ್ಟ) |

**ಯೋಜನಾ ವ್ಯಾಪ್ತಿ**

ಮೇಲಿನ ಎಲ್ಲಾ ವಿಷಯಗಳ ಹಿನ್ನೆಲೆಯಲ್ಲಿ ವಿಶ್ವಬ್ಯಾಂಕ್ ನೆರವಿನ ಜಲ ನಿರ್ಮಲ – ಹೆಚ್ಚುವರಿ ಸಹಾಯಧನ ಯೋಜನೆಯನ್ನು ಉತ್ತರ ಕರ್ನಾಟಕದ 12 ಯೋಜನಾ ಜಿಲ್ಲೆಗಳು ಅಂದರೆ ಬಾಗಲಕೋಟೆ, ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಯಾದಗಿರಿ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳು ಹಾಗೂ ನೀರಿನ ಗುಣಮಟ್ಟವು ಆತಂಕಕ್ಕೆ ಕಾರಣವಾಗಿರುವ ಇತರೆ ಕೆಲವು ಜಿಲ್ಲೆಗಳಲ್ಲಿ ನೀರು ಸರಬರಾಜು ಯೋಜನೆಗಳನ್ನು ಹಾಗೂ ಗ್ರಾಮಗಳ ಆಂತರಿಕ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

## 2. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಪಡೆದ ಅನುದಾನ, ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳು (ನಿಗಧಿತ ನಮೂನೆಯಲ್ಲಿ)

ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯು ವಿದೇಶಿ ನೆರವಿನ ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಈ ಯೋಜನೆಯಡಿ ಕೇಂದ್ರ ಸರ್ಕಾರದ ಯಾವುದೇ ಅನುದಾನವು ಇರುವುದಿಲ್ಲ. ವಿಶ್ವಬ್ಯಾಂಕ್‌ನ 99.300 ಮಿಲಿಯನ್ ಎಸ್‌ಡಿಆರ್ (150 ಮಿಲಿಯನ್ ಯುಎಸ್ ಡಾಲರ್‌ಗಳು, ಸರಿಸುಮಾರು 700 ಕೋಟಿ ರೂಗಳು) ನೆರವಿನೊಂದಿಗೆ ರಾಜ್ಯದ ಪಾಲು ಸೇರಿಸಿ ಒಟ್ಟು ಸುಮಾರು 816.18 ಕೋಟಿ ರೂಗಳಲ್ಲಿ ಮೂರು ವರ್ಷಗಳ ಕಾಲಾವಧಿಯಲ್ಲಿ ತೆಗೆದುಕೊಳ್ಳಲಾಗಿದ್ದು, ಜುಲೈ-2010ರ ಮಾಹೆಯಿಂದ ಅನುಷ್ಠಾನ ಗೊಳಿಸಲಾಗುತ್ತಿದೆ.

**ಯೋಜನೆಯಡಿ ಪಾಲುಗಾರಿಕೆ**

ವಿಶ್ವಬ್ಯಾಂಕ್ ನೆರವಿನ ಜಲ ನಿರ್ಮಲ – ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯು ವಿವಿಧ ಪಾಲುದಾರತ್ವ ಬಂಡವಾಳ ಹೂಡಿಕೆ ಯೋಜನೆಯಾಗಿರುತ್ತದೆ. ಈ ಯೋಜನೆಯಡಿ ಯೋಜನೆಯ ಒಟ್ಟು

ಮೊತ್ತದಲ್ಲಿ ವಿಶ್ವಬ್ಯಾಂಕ್ ಶೇ.85 ನೆರವನ್ನು, ಗ್ರಾಮ ಪಂಚಾಯತಿ ಹಾಗೂ ಸಮುದಾಯಗಳು ಒಟ್ಟುಗೂಡಿ ಶೇ.15 ಮೊತ್ತವನ್ನು ಭರಿಸುತ್ತವೆ.

**ಆಯವ್ಯಯ ಶೀರ್ಷಿಕೆ**

ವಿಶ್ವಬ್ಯಾಂಕ್ ನೆರವಿನ ಜಲ ನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯನ್ನು ಲೆಕ್ಕ ಶೀರ್ಷಿಕೆ **4215-01-102-9-02 - 132** ರ ಅಡಿ ತೆಗೆದುಕೊಳ್ಳಲಾಗಿರುತ್ತದೆ.

4215 -ನೀರು ಸರಬರಾಜು ಮತ್ತು ನೈರ್ಮಲ್ಯ ಮೇಲಣ ಬಂಡವಾಳ ವೆಚ್ಚ
01 -ನೀರು ಸರಬರಾಜು
102 -ಗ್ರಾಮೀಣ ನೀರು ಸರಬರಾಜು
9 -ದ್ವಿಪಕ್ಷೀಯ ಸಹಾಯದೊಂದಿಗೆ ಯೋಜನೆಗಳು
02 -ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಗಳು (ಜಲನಿರ್ಮಲ) - ಇಎಪಿ
132 -ಬಂಡವಾಳ ವೆಚ್ಚಗಳು

**ಯೋಜನೆಯಡಿ ಆರ್ಥಿಕ ಪ್ರಗತಿ (ಮಾರ್ಚ್-2012ರ ಅಂತ್ಯಕ್ಕನುಗುಣವಾಗಿ):**

**ಹಣಕಾಸು (ರೂ. ಲಕ್ಷಗಳಲ್ಲಿ)**

**ತ:ಖ್ತೆ- 7.2.2**

| **ಲೆಕ್ಕ 2009-10** | | **ಪರಿಷ್ಕೃತ ಅಂದಾಜು 2010-11** | | **ಆಯವ್ಯಯ ಅಂದಾಜು 2011-12** | |
|---|---|---|---|---|---|
| **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** |
| 1 | 2 | 3 | 4 | 5 | 6 |
| - | - | 5000 ಲಕ್ಷಗಳು | - | 21000 ಲಕ್ಷಗಳು | - |

**ವೆಚ್ಚ (ರೂ. ಲಕ್ಷಗಳಲ್ಲಿ)**

**ತ:ಖ್ತೆ- 7.2.3**

| **ಲೆಕ್ಕ 2009-10** | | **ಪರಿಷ್ಕೃತ ಅಂದಾಜು 2010-11** | | **ಆಯವ್ಯಯ ಅಂದಾಜು 2011-12** | |
|---|---|---|---|---|---|
| **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** |
| 1 | 2 | 3 | 4 | 5 | 6 |
| - | - | 1094.00 ಲಕ್ಷಗಳು | - | 20519.97 ಲಕ್ಷಗಳು | - |

ರಾಜ್ಯ ಸರ್ಕಾರದಿಂದ ಈ ಯೋಜನೆಯ ವೆಚ್ಚಕ್ಕಾಗಿ 2011-12ನೇ ಸಾಲಿಗೆ ರೂ.21000.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. 2010-11ನೇ ಸಾಲಿನ ಅಂತ್ಯ ಶಿಲ್ಕು ರೂ.6017.43 ಲಕ್ಷಗಳು, 2011-12ನೇ ಸಾಲಿನಲ್ಲಿ ಒದಗಿಸಲಾದ ಅನುದಾನ ರೂ.21000.00 ಲಕ್ಷಗಳನ್ನೊಳಗೊಂಡಂತೆ ಒಟ್ಟು ರೂ.27017.43 ಲಕ್ಷಗಳ ಆರ್ಥಿಕ ಗುರಿಯನ್ನಾಗಿರಿಸಿಕೊಳ್ಳಲಾಗಿದ್ದು, ಯೋಜನಾ ಪ್ರಾರಂಭದಿಂದ

ಮಾರ್ಚ್–2012 ರ ಅಂತ್ಯಕ್ಕೆ ಒಟ್ಟು ರೂ.21613.97 ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ಜಿಲ್ಲಾವಾರು, ವರ್ಷಾವಾರು ಯೋಜನಾ ಹಣಕಾಸಿನ ಪ್ರಗತಿ ವಿವರವನ್ನು ಈ ಕೆಳಗೆ ನೀಡಲಾಗಿದೆ. ವಿಶ್ವಬ್ಯಾಂಕ್‌ನಿಂದ ಮರುಭರ್ತಿಗಾಗಿ ಮಾರ್ಚ್–2012 ರವರೆಗೆ ಒಟ್ಟು ರೂ.11116.33 ಲಕ್ಷಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು (ಫೆಬ್ರವರಿ–2012 ಮಾಸಾಂತ್ಯದವರೆಗಿನ ವೆಚ್ಚಕ್ಕನುಗುಣವಾಗಿ), ರೂ.9520.31 ಲಕ್ಷಗಳ ಮರುಭರ್ತಿಯಾಗಿರುತ್ತದೆ.

**ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯಡಿ ಯೋಜನಾ ಪ್ರಾರಂಭದಿಂದ ವರ್ಷಾವಾರು ಹಾಗೂ ಜಿಲ್ಲಾವಾರು ಯೋಜನಾ ಹಣಕಾಸಿನ ಪ್ರಗತಿ ವಿವರ (ಮಾರ್ಚ್–2012 ರ ಅಂತ್ಯಕ್ಕೆ)** ***(ರೂ. ಲಕ್ಷಗಳಲ್ಲಿ)***

| ಕ್ರ. ಸಂ. | ಕಛೇರಿ | 2010–11 | 2011–12 | ಒಟ್ಟು |
|---|---|---|---|---|
| 1 | ಕೇಂದ್ರ ಕಛೇರಿ, ಬೆಂಗಳೂರು | 261.40 | 336.49 | 597.89 |
| 2 | ಬಾಗಲಕೋಟೆ | 68.21 | 1535.16 | 1603.37 |
| 3 | ಬೆಳಗಾಂ | 75.39 | 2650.41 | 2725.80 |
| 4 | ಬೀದರ್ | 69.84 | 3138.30 | 3208.14 |
| 5 | ಬಿಜಾಪುರ | 34.22 | 537.87 | 572.09 |
| 6 | ಧಾರವಾಡ | 87.82 | 1142.70 | 1230.52 |
| 7 | ಗದಗ್ | 69.07 | 905.66 | 974.73 |
| 8 | ಗುಲ್ಬರ್ಗಾ | 139.24 | 4446.49 | 4585.73 |
| 9 | ಹಾವೇರಿ | 89.08 | 230.21 | 319.29 |
| 10 | ಕಾರವಾರ | 75.26 | 1294.90 | 1370.16 |
| 11 | ಕೊಪ್ಪಳ | 39.92 | 672.19 | 712.11 |
| 12 | ರಾಯಚೂರು | 84.55 | 2627.95 | 2712.50 |
| 13 | ಯಾದಗಿರಿ | – | 1001.64 | 1001.64 |
| | **ಒಟ್ಟು** | **1094.00** | **20519.97** | **21613.97** |

- ***2010–11ನೇ ಸಾಲಿನ ಲೆಕ್ಕಪರಿಶೋಧಿತ ದೃಢೀಕೃತ ವೆಚ್ಚವು ರೂ.999.30 ಲಕ್ಷಗಳಾಗಿರುತ್ತದೆ. 2011–12ನೇ ಆರ್ಥಿಕ ಸಾಲಿನಲ್ಲಿ ಮಾಡಲಾದ ವೆಚ್ಚದ ಲೆಕ್ಕ ಪರಿಶೋಧನೆಗಾಗಿ ಮೆ॥ ರಮೇಶ ಎಂ.ವೈ. & ಕಂ., ಮೈಸೂರು ಇವರಿಗೆ ನೀಡಲಾಗಿದ್ದು, ಲೆಕ್ಕ ಪರಿಶೋಧನಾ ಕಾರ್ಯವು ಪ್ರಗತಿಯಲ್ಲಿರುತ್ತದೆ.***

**ಯೋಜನೆಯಡಿ ಭೌತಿಕ ಪ್ರಗತಿ (ಮಾರ್ಚ್–2012ರ ಅಂತ್ಯಕ್ಕನುಗುಣವಾಗಿ):**

**ಭೌತಿಕ ಸಾಧನೆ**

| 2009–10 | 2010–11 | | 2011–12 (ಮಾರ್ಚ್–2012 ಅಂತ್ಯದವರೆಗೆ) | | 2011–12ನೇ ಸಾಲಿಗೆ ಎರಡು ಪ್ರಮುಖ ಲೆಕ್ಕ ಪರಿಶೋಧನೆಯಲ್ಲಿನ ವೀಕ್ಷಣೆ (ಪ್ಯಾರ) / ಪರಿವೀಕ್ಷಣೆಯ ಕಂಡಿಕೆಗಳು (ಲೆಕ್ಕ ಪರಿಶೋಧನೆ / ಪರಿವೀಕ್ಷಣೆಯ ದಿನಾಂಕ ಮತ್ತು ವರದಿಯ ಉಲ್ಲೇಖ ಸಂಖ್ಯೆಯನ್ನು ನಮೂದಿಸಿ). ಲೆಕ್ಕ ಪರಿಶೋಧನೆ / ಪರಿವೀಕ್ಷಣೆಯು ಆಗದಿದ್ದಲ್ಲಿ ನಮೂದಿಸಿ |
|---|---|---|---|---|---|
| (1) | (2) | | (3) | | (4) |
| – | ನೀ.ಸ. | 109 ಕಾರ್ಯಾರಂಭ | ನೀ.ಸ. | 124 ಪೂರ್ಣ | ಸಂಸ್ಥೆಯ ವತಿಯಿಂದ ಅನುಷ್ಠಾನಗೊಳಿಸ ಲಾಗುತ್ತಿರುವ ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯನ್ನು ಜುಲೈ–2010 ರಲ್ಲಿ ಪ್ರಾರಂಭಿಸಲಾಗಿದ್ದು, ಸದರಿ ಯೋಜನೆಯಡಿ 2011–12ನೇ ಆರ್ಥಿಕ ಸಾಲಿನಲ್ಲಿ ಮಾಡಲಾದ ವೆಚ್ಚದ ಲೆಕ್ಕ ಪರಿಶೋಧನೆಗಾಗಿ ಮೆ॥ ರಮೇಶ ಎಂ.ವೈ. & ಕಂ., ಮೈಸೂರು ಇವರಿಗೆ ನೀಡಲಾಗಿದ್ದು, ಲೆಕ್ಕ ಪರಿಶೋಧನಾ ಕಾರ್ಯವು ಪ್ರಗತಿಯಲ್ಲಿರುತ್ತದೆ. |
| | ರ.&.ಚ. | 41 ಕಾರ್ಯಾರಂಭ | ರ.&.ಚ. | 454 ಪೂರ್ಣ | |

ವಿಶ್ವಬ್ಯಾಂಕ್ ನೆರವಿನ ಜಲ ನಿರ್ಮಲ – ಹೆಚ್ಚುವರಿ ಸಹಾಯಧನ ಯೋಜನೆಯಡಿ ಯೋಜನಾ ಪ್ರಾರಂಭದಿಂದ ಮಾರ್ಚ್–2012 ರವರೆಗೂ **17 ಬಹುಗ್ರಾಮ ನೀರು ಸರಬರಾಜು ಯೋಜನೆಗಳನ್ನು ಹೊರತುಪಡಿಸಿ** 506 ನೀರು ಸರಬರಾಜು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, 499 ನೀರು ಸರಬರಾಜು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿರುತ್ತದೆ. 488 ಕಾಮಗಾರಿಗಳಿಗೆ ಕಾರ್ಯಾರಂಭಿಸಲು ಕಾರ್ಯಾದೇಶ ನೀಡಲಾಗಿದ್ದು, 124 ನೀರು ಸರಬರಾಜು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, 382 ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ. ರಸ್ತೆ ಮತ್ತು ಚರಂಡಿ ಕಾಮಗಾರಿಗಳಡಿ 483 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಕರೆಯಲಾಗಿದ್ದ ಎಲ್ಲಾ ಕಾಮಗಾರಿಗಳಿಗೂ ಕಾರ್ಯಾರಂಭಿಸಲು ಕಾರ್ಯಾದೇಶ ನೀಡಲಾಗಿದ್ದು, 454 ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, 29 ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿದ್ದು, ಪ್ರಗತಿಯಲ್ಲಿರುವ ಎಲ್ಲಾ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಆದಷ್ಟು ಶೀಘ್ರ ಪೂರ್ಣಗೊಳಿಸಲು ಕ್ರಮ

ತೆಗೆದುಕೊಳ್ಳಲಾಗಿದೆ. ಮಾರ್ಚ್-2012ರ ಅಂತ್ಯಕ್ಕನುಗುಣವಾಗಿ ಭೌತಿಕ ಪ್ರಗತಿಯ ಒಂದು ಪೂರ್ಣ ನೋಟವನ್ನು ಈ ಕೆಳಗೆ ನೀಡಲಾಗಿದೆ.

**ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯಡಿ ಯೋಜನಾ ಪ್ರಾರಂಭದಿಂದ ಜಿಲ್ಲಾವಾರು ಭೌತಿಕ ಪ್ರಗತಿ ವಿವರ (ಮಾರ್ಚ್-2012 ರ ಅಂತ್ಯಕ್ಕೆ)**

| ಕ್ರ. ಸಂ. | ಕಛೇರಿ | ನೀರು ಸರಬರಾಜು ಕಾಮಗಾರಿಗಳು | | ರಸ್ತೆ ಮತ್ತು ಚರಂಡಿ ಕಾಮಗಾರಿಗಳು | |
|---|---|---|---|---|---|
| | | ಸಂಖ್ಯೆ | ಸಾಧನೆ | ಸಂಖ್ಯೆ | ಸಾಧನೆ |
| 1 | ಬಾಗಲಕೋಟೆ | 23 | 02 | 33 | 33 |
| 2 | ಬೆಳಗಾಂ | 20 | 05 | 51 | 43 |
| 3 | ಬೀದರ್ | 23 | 03 | 86 | 85 |
| 4 | ಬಿಜಾಪುರ | 43 | 13 | 00 | 00 |
| 5 | ಧಾರವಾಡ | 11 | 01 | 13 | 12 |
| 6 | ಗದಗ್ | 05 | 00 | 35 | 31 |
| 7 | ಗುಲ್ಬರ್ಗಾ | 101 | 28 | 125 | 114 |
| 8 | ಹಾವೇರಿ | 08 | 06 | 03 | 03 |
| 9 | ಕಾರವಾರ | 178 | 52 | 52 | 51 |
| 10 | ಕೊಪ್ಪಳ | 03 | 00 | 27 | 27 |
| 11 | ರಾಯಚೂರು | 60 | 05 | 43 | 41 |
| 12 | ಯಾದಗಿರಿ | 31 | 09 | 15 | 14 |
| | **ಒಟ್ಟು** | **506** | **124** | **483** | **454** |

* ಯೋಜನೆಯಡಿ ದೀರ್ಘಕಾಲೀನ 17 ಬಹುಗ್ರಾಮ ನೀರು ಸರಬರಾಜು ಯೋಜನೆಗಳನ್ನು ಹೊರತುಪಡಿಸಿ ತೆಗೆದುಕೊಳ್ಳಲಾಗಿರುವ ಒಟ್ಟು 506 ನೀರು ಸರಬರಾಜು ಕಾಮಗಾರಿಗಳಿಗೆದುರಾಗಿ 124 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ವಿಶ್ವಬ್ಯಾಂಕ್ ನೆರವಿನ ಜಲ ನಿರ್ಮಲ – ಹೆಚ್ಚುವರಿ ಸಹಾಯಧನ ಯೋಜನೆಯಡಿ ಒಟ್ಟು 17 ದೀರ್ಘಕಾಲೀನ ಬಹು ಗ್ರಾಮ ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಳ್ಳಲಾಗಿದ್ದು, 7 ಬಹುಗ್ರಾಮ ನೀರು ಸರಬರಾಜು ಕಾಮಗಾರಿಗಳನ್ನು ಕಾರ್ಯಾರಂಭಿಸಲು ಕಾರ್ಯಾದೇಶ ನೀಡಲಾಗಿದ್ದು, ಸದರಿ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಉಳಿದ ಯೋಜನೆಗಳ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಆದಷ್ಟು ಶೀಘ್ರ ಕಾರ್ಯಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

### 3. ವರದಿ ಸಾಲಿನಲ್ಲಿ ಪ್ರಶಸ್ತಿ/ ಪ್ರಶಂಸೆ ವಿವರಗಳು

ವಿಶ್ವಬ್ಯಾಂಕ್ ಯೋಜನಾ ಅನುಷ್ಠಾನ ನೆರವು ಪರಿಶೀಲನಾ ನಿಯೋಗವು ಡಿಸೆಂಬರ್-2011 – ಜನವರಿ-2012 ರ ಅವಧಿಯಲ್ಲಿ ರಾಜ್ಯಕ್ಕೆ ಭೇಟಿ ನೀಡಿದ್ದ ಸಮಯದಲ್ಲಿ, ಈ ಸಂಸ್ಥೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಜಲನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನಾ ಜಿಲ್ಲೆಗಳಿಗೆ ಭೇಟಿ ನೀಡಿ ಅನುಷ್ಠಾನಗೊಳ್ಳುತ್ತಿರುವ ನೀರು ಸರಬರಾಜು ಹಾಗೂ ರಸ್ತೆ ಮತ್ತು ಚರಂಡಿ

ಕಾಮಗಾರಿಗಳ ಪರಿಶೀಲನೆ ನಡೆಸಿದ್ದು, ತನ್ನ ಏಡ್ ಮೆಮೋಯರ್‌ನಲ್ಲಿ ಈ ಕೆಳಗಿನ ಅಂಶಗಳನ್ನೊಳಗೊಂಡಂತೆ ತನ್ನ ಅಭಿಪ್ರಾಯ / ಪ್ರಶಂಸೆಯನ್ನು ತಿಳಿಸಿರುತ್ತದೆ.

- ಕಳೆದ ಆರು (6) ತಿಂಗಳುಗಳಲ್ಲಿ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ ಹಾಗೂ ಕರ್ನಾಟಕ ಸರ್ಕಾರವು ಮಾಡಲಾದ ಗಣನೀಯ ಪ್ರಯತ್ನ / ಪರಿಶ್ರಮಗಳು ಪ್ರಸ್ತುತ ತನ್ನ ಫಲಿತಾಂಶವನ್ನು ನೀಡಲು ಪ್ರಾರಂಭಿಸಿವೆ.
- ಪ್ರಸ್ತುತ ಈ ಸಂಸ್ಥೆಯ ವತಿಯಿಂದ ರಾಜ್ಯ ಮಟ್ಟದ ಉಸ್ತುವಾರಿಕೆಯು ಉತ್ತಮ ಪ್ರಯತ್ನವಾಗಿದೆ ಎಂದು ನಿಯೋಗವು ಗುರುತಿಸಿದೆ.

## 4. ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳು ಮತ್ತು ಮೌಲ್ಯಮಾಪನ ಅಧ್ಯಯನ, ವರದಿ ಹಾಗೂ ತೆಗೆದುಕೊಂಡ ಕ್ರಮಗಳು:

ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯು ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಿಯತ ಕಾಲಿಕ ಜಿಲ್ಲಾ ನೆರವು ಘಟಕಗಳ ಪ್ರಗತಿ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತಿದೆ. ಪರಿಶೀಲನಾ ಸಭೆಯಲ್ಲಿ ಯೋಜನಾ ಕಾಮಗಾರಿಗಳ ಅನುಷ್ಠಾನಗಳಲ್ಲಿ ಯಾವುದಾದರೂ ತೊಂದರೆ ಇದ್ದಲ್ಲಿ ಅಥವಾ ಕಂಡು ಬಂದಲ್ಲಿ ಅವುಗಳನ್ನು ಕೂಡಲೇ ಸಂಬಂಧಪಟ್ಟವರಿಂದ ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅಗತ್ಯ ಬಿದ್ದಲ್ಲಿ ಯೋಜನಾ ಕಾಮಗಾರಿಗಳ ಸ್ಥಳಕ್ಕೆ ಸ್ವತ: ನಿರ್ದೇಶಕರೆ ಸಂಬಂಧಪಟ್ಟ ಜಿಲ್ಲಾ ನೋಡಲ್ ಅಧಿಕಾರಿಗಳು, ಸಂಬಂಧಿಸಿದ ತಾಂತ್ರಿಕ ಹಾಗೂ ಆರ್ಥಿಕ ಅಧಿಕಾರಿಗಳೊಂದಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿ ಸೂಚನೆಗಳನ್ನು ನೀಡುತ್ತಾರೆ ಇಲ್ಲವಾದಲ್ಲಿ ಸಂಬಂಧಿಸಿದ ಜಿಲ್ಲಾ ನೋಡಲ್ ಅಧಿಕಾರಿಗಳು, ತಾಂತ್ರಿಕ ಹಾಗೂ ಆರ್ಥಿಕ ಅಧಿಕಾರಿಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿ ವರದಿ ಸಲ್ಲಿಸಲು ಸೂಚಿಸುತ್ತಾರೆ. ಸಲ್ಲಿಸಲಾದ ವರದಿಗಳನ್ನು ಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಅಗತ್ಯ ಬಿದ್ದಲ್ಲಿ ವಿಷಯ ತಜ್ಞರ ಸಲಹೆಗಳನ್ನು ಪಡೆದು ಮಾರ್ಗದರ್ಶನ ನೀಡುತ್ತಾರೆ. ಸಂಸ್ಥೆಯ ವ್ಯಾಪ್ತಿಗೆ ಮೀರಿದ ಕಾಮಗಾರಿಗಳ ವಿಷಯಗಳಿದ್ದಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಉಪಾಧ್ಯಕ್ಷರಾಗಿರುವ ಗ್ರಾ. ಅ. &. ಪಂ. ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿರುವ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಮತ್ತು ಅಭಿವೃದ್ಧಿ ಆಯುಕ್ತರ ಮಾರ್ಗದರ್ಶನಗಳನ್ನು ಪಡೆದು ಸೂಚನೆಗಳನ್ನು ನೀಡುತ್ತಾರೆ, ಅಗತ್ಯ ಬಿದ್ದಲ್ಲಿ ಕ.ಗ್ರಾ.ನೀ.ಸ.ನೈ. ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ವಿಷಯಗಳನ್ನು ಮಂಡಿಸಿ, ಕಾಮಗಾರಿಗಳ ಅನುಷ್ಠಾನಕ್ಕಾಗಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಪಡೆದು, ಯೋಜನೆಯ ಪ್ರಗತಿಯು ಕುಂಠಿತಗೊಳ್ಳದಂತೆ ಅಥವಾ ಸ್ಥಗಿತಗೊಳ್ಳದಂತೆ ಹಾಗೂ ಯೋಜನೆಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮುಂದುವರೆದು, ಜಿಲ್ಲಾ ಮಟ್ಟಗಳಲ್ಲಿ ಜಿಲ್ಲಾ ನೆರವು ಘಟಕಗಳ ಅಧಿಕಾರಿಗಳು ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸುವಂತೆ ಕ್ರಮ ತೆಗೆದುಕೊಳ್ಳಲಾಗಿರುತ್ತದೆ. ಜಿಲ್ಲಾ ಮಟ್ಟಗಳಲ್ಲಿಯೂ ನಿಯತ ಕಾಲಿಕ ಪ್ರಗತಿ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತಿದೆ.

## ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಗಳ ಪ್ರಕ್ರಿಯೆ

ಯೋಜನೆಯ ಗುರಿ, ಉದ್ದೇಶಗಳು, ನಿಯಮಗಳು ಹಾಗೂ ಯೋಜನೆಯಡಿ ನಿರ್ಮಾಣವಾಗಿರುವ ಆಸ್ತಿಗಳನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಹೋಗಲು ವಿವಿಧ ಭಾಗೀದಾರರ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳ ಪ್ರಮುಖವಾದ ಧ್ಯೇಯ. ಗ್ರಾಮೀಣ ನೀರು ಸರಬರಾಜು ಯೋಜನೆಗಳ ನಿರ್ವಹಣೆಯು ನಿರಂತರವಾಗಿ ನಡೆಯಬೇಕಾದರೆ ವಿವಿಧ ಭಾಗೀದಾರರ ಮನೋಭಾವ ಮತ್ತು ದೃಷ್ಟಿಕೋನಗಳಲ್ಲಿ ಬದಲಾವಣೆ ನಿರಂತರವಾದ ಪ್ರಕ್ರಿಯೆ, ಈ ನಿಟ್ಟಿನಲ್ಲಿ ಯೋಜನೆಯ ಅನುಷ್ಠಾನದ ನಂತರದಲ್ಲಿ ವಿವಿಧ ಭಾಗೀದಾರರ ಸಮುದಾಯದ ಅಗತ್ಯಗಳಿಗನುಸಾರವಾಗಿ ಈ ಬಾರಿ ಎಸ್.ಎಸ್.ಐ., ಎಸ್.ಎಸ್.ಆರ್., ಎಂ.ವಿ.ಎಸ್. ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿ ಸುಸ್ಥಿರತೆ, ಕಾರ್ಯಾಚರಣೆ ಮತ್ತು ನಿರ್ವಹಣೆಯ ವಾಸ್ತವ ಬಜೆಟ್ ತಯಾರಿ, ಸಮರ್ಪಕ ನೀರು ಸರಬರಾಜು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ, ಜಂಟಿ ಸಮಿತಿ ಮತ್ತು ಗ್ರಾಮ ಪಂಚಾಯತಿಗಳ ಸಾಂಸ್ಥಿಕ ಬಲವರ್ಧನೆ, ಸಮಿತಿಗಳು ದೈನಂದಿನ ನಿರ್ವಹಿಸಬೇಕಾದ ನೀರಿನ ಗುಣಮಟ್ಟ ಮತ್ತು ಸಿಬ್ಬಂದಿಗಳ ಮೇಲ್ವಿಚಾರಣೆಗಳಿಗೆ ಸಂಬಂಧಿಸಿದಂತೆ ಕಾರ್ಯತಂತ್ರ ರೂಪಿಸುವಿಕೆ, ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ಬಿಲ್ಲುಗಳ ಮರುಹೊಂದಾಣಿಕೆ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಯೋಜನೆಗಳಿಗೆ ಅಧ್ಯಯನ ಪ್ರವಾಸ ಕೈಗೊಳ್ಳುವಿಕೆ, ಮುಂತಾದ ಯೋಜನೆಯ ಪ್ರಮುಖ ಚಟುವಟಿಕೆಗಳಿಗೆ ಆದ್ಯತೆ ನೀಡಿ ತರಬೇತಿ ವಿನ್ಯಾಸವನ್ನು ಜಿಲ್ಲಾ ನೆರವು ಘಟಕಗಳೊಂದಿಗೆ ಚರ್ಚಿಸಿ ಅಂತಿಮಗೊಳಿಸಲಾಗಿರುತ್ತದೆ. ಜೊತೆಗೆ ಸಾಂಸ್ಥಿಕ ರಚನೆಯನ್ನು ಬಲಗೊಳಿಸುವುದಕ್ಕೂ ಸಹ ಈ ಯೋಜನೆಯಲ್ಲಿ ಒತ್ತು ಕೊಡಲಾಗಿದೆ.

### ನೀರಿನ ಗುಣಮಟ್ಟ :

ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯಡಿಯಲ್ಲಿಯೂ ಈ ಹಿಂದೆ ಜಲ ನಿರ್ಮಲ ಯೋಜನೆಯಡಿ ಅನುಸರಿಸಲಾಗುತ್ತಿದ್ದ ಮೂರು ಹಂತಗಳ ಗುಣಮಟ್ಟ ಮೇಲ್ವಿಚಾರಣೆ ಕಾರ್ಯ ವಿಧಾನವೊಂದನ್ನು ಅಳವಡಿಸಿ ಕೊಳ್ಳಲಾಗಿದೆ. ಪ್ರತಿದಿನ ಉಳಿಕೆ ಕ್ಲೋರಿನ್ ಪರೀಕ್ಷಿಸಲು ಕ್ಲೋರೋಸ್ಕೋಪ್‌ಗಳು, ಫ್ಲೋರೈಡ್ ಪರೀಕ್ಷೆಗಾಗಿ ಫ್ಲೋರೋಸ್ಕೋಪ್ ಮತ್ತು ಬ್ಯಾಕ್ಟೀರಿಯಲ್ ಕಂಟ್ಯಾಮಿನೇಷನ್ ಪರೀಕ್ಷಿಸಲು $H_2S$ ಕಿಟ್‌ಗಳನ್ನು ಯೋಜನಾ ಜಿಲ್ಲೆಗಳ ಜನವಸತಿಗಳಲ್ಲಿ ನೀರಿನ ಗುಣಮಟ್ಟ ಮೇಲ್ವಿಚಾರಣೆಗೆ ಈ ಹಿಂದಿನ ಯೋಜನಾ ಅನುಷ್ಠಾನದ ಸಮಯದಲ್ಲಿಯೇ ಒದಗಿಸಲಾಗಿದೆ. ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಯಡಿಯಲ್ಲಿ ಯೋಜನೆಯ ವಿವಿಧ ಪಾಲುದಾರರಿಗೆ ನೀರಿನ ಗುಣಮಟ್ಟ ಪರೀಕ್ಷೆ ಮಾಡುವ ಕುರಿತು ತರಬೇತಿಯನ್ನೂ ನೀಡಲಾಗಿದೆ. ಉಳಿಕೆ ಕ್ಲೋರೀನ್, ಫ್ಲೋರೈಡ್, ಬ್ಯಾಕ್ಟೀರಿಯಲ್ ಕಂಟ್ಯಾಮಿನೇಷನ್ ಪರೀಕ್ಷಿಸುವುದು ಗ್ರಾಮ ಪಂಚಾಯತಿ/ ಗ್ರಾಮ ನೀರು ಸರಬರಾಜು ನೈರ್ಮಲ್ಯ ಸಮಿತಿಗಳ ನಿಯಮಿತ ಚಟುವಟಿಕೆಯಾಗಿದ್ದು, ಪರೀಕ್ಷೆ ಮಾಡಿದ ಬಳಿಕ ಫಲಿತಾಂಶಗಳನ್ನು ರಿಜಿಸ್ಟರ್‌ನಲ್ಲಿ ನಮೂದಿಸಲಾಗುತ್ತಿದೆ. ಯೋಜನಾ ಜಿಲ್ಲೆಗಳಲ್ಲಿ, ಫ್ಲೋರೈಡ್, ನೈಟ್ರೇಟ್ ಮತ್ತು ಒಟ್ಟಾರೆ ಕರಗಿರುವ ಲವಣಗಳು ಮತ್ತು ಒಟ್ಟು ಕಠಿಣತೆಯಂತಹ ಗುಣ ಮಾಪಕಗಳ ಪ್ರಮಾಣ ಹೆಚ್ಚಾಗಿ ಅಂತರ್ಜಲ ಮೂಲಗಳು ಬಾಧಿತವಾದ ಜನವಸತಿಗಳನ್ನು ನೀರಿನ ಗುಣಮಟ್ಟ ಪೀಡಿತ ಜನವಸತಿಗಳೆಂದು ಪರಿಗಣಿಸಲಾಗಿದೆ.

ಗುಣಮಟ್ಟ ಬಾಧಿತ ಜನವಸತಿಗಳಿಗಾಗಿ, ಕುಡಿಯುವ ನೀರಿನ ಗುಣಮಟ್ಟವನ್ನು ಸುಧಾರಿಸಲು ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದ್ದು, ಇವುಗಳಲ್ಲಿ ದೂರದ ಅಂತರ್ಜಲ ಮೂಲ, ನೀರನ್ನು ಬೆರೆಸುವುದು, ಎರಡು ರೀತಿಯ ನೀರನ್ನು ಒದಗಿಸುವುದು ಹಾಗೂ ಡಿಫ್ಲೋರಿಡೇಷನ್ / ರಿವರ್ಸ್ ಒಸ್ಮೋಸಿಸ್ ಪ್ಲಾಂಟ್‌ಗಳು ಸೇರಿವೆ.

**ಕಾಮಗಾರಿಗಳ ಗುಣಮಟ್ಟ ಪರಿಶೀಲನೆ:**

ಯೋಜನೆಯಡಿಯಲ್ಲಿ ಕೈಗೊಂಡ ಸಿವಿಲ್ ಕಾಮಗಾರಿಗಳ ಗುಣಮಟ್ಟ ಭರವಸೆಗಾಗಿ ಹಾಗೂ ಗುಣಮಟ್ಟ ನಿರ್ಮಾಣ ವಿಷಯಗಳಿಗಾಗಿ ನೆರವು ಸಂಸ್ಥೆಗಳ ಇಂಜಿನಿಯರ್‌ಗಳ, ಜಿಲ್ಲಾ ನೆರವು ಘಟಕಗಳ ತಾಂತ್ರಿಕ ತಂಡ ಹಾಗೂ ಕ.ಗ್ರಾ.ನೀ.ಸ.ನೈ. ಸಂಸ್ಥೆಯ ತಾಂತ್ರಿಕ ತಂಡಗಳ ನಿಯತ ಕಾಲಿಕ ಮೇಲ್ವಿಚಾರಣೆಯನ್ನು ಹೊರತುಪಡಿಸಿ ಹೊರಗಿನ ಸ್ವತಂತ್ರ ಗುಣಮಟ್ಟ ಪರಿವೀಕ್ಷಣ ಸಮಾಲೋಚಕರ ಸೇವೆಯನ್ನು ತೆಗೆದುಕೊಳ್ಳಲಾಗಿದ್ದು, ಸದರಿ ಸಮಾಲೋಚಕರು ಯೋಜನಾ ಗ್ರಾಮಗಳಿಗೆ ಭೇಟಿ ನೀಡಿ ಕೈಗೊಂಡ ಕಾಮಗಾರಿಗಳನ್ನು ಪರಿವೀಕ್ಷಿಸಿ, ಕ.ಗ್ರಾ.ನೀ.ಸ.ನೈ. ಸಂಸ್ಥೆಗೆ ಪರಿವೀಕ್ಷಣಾ ವರದಿಗಳನ್ನು ಮುಂದಿನ ಸೂಕ್ತ ಕ್ರಮಗಳಿಗಾಗಿ ಸಲ್ಲಿಸಿರುತ್ತಾರೆ. ಇದರ ಮುಖ್ಯ ಉದ್ದೇಶಗಳು ಯಾವುವೆಂದರೆ –

- ಮುಕ್ತಾಯಗೊಂಡ ಕಾಮಗಾರಿಗಳ ಕಾರ್ಯ ನಿರ್ವಹಣೆ ಹಾಗೂ ಅನುಷ್ಠಾನಗೊಂಡಿರುವ ಕಾಮಗಾರಿಗಳ ಗುಣಮಟ್ಟ ಪರಿಶೀಲನೆ
- ಕಾರ್ಯಕ್ಷೇತ್ರ ಮಟ್ಟದಲ್ಲಿ ಗುಣಮಟ್ಟ ಮೇಲ್ವಿಚಾರಣ ಪರಿಶೀಲನೆ
- ನೆರವು ಸಂಸ್ಥೆ / ಜಿಲ್ಲಾ ನೆರವು ಘಟಕಗಳ ನಿರ್ಮಾಣ ಕಾರ್ಯ ನಿರ್ವಹಣಾ ಆಚರಣೆ
- ಕೈಗೊಳ್ಳಲಾದ ಕಾಮಗಾರಿಗಳ ಗುಣಮಟ್ಟ ಹಾಗೂ ಬಳಸಿದ ಸಾಮಗ್ರಿಗಳ ಗುಣಮಟ್ಟ ಪರಿಶೀಲನೆ

**ಮೇಲೆ ಸೂಚಿಸಲಾದ ಉದ್ದೇಶಗಳನ್ನು ಸಾಧಿಸಲು ಅಳವಡಿಸಿಕೊಳ್ಳಲಾದ ಕೌಶಲ್ಯತೆಗಳು ಈ ಕೆಳಗಿನಂತಿವೆ**

- ಸ್ವತಂತ್ರ ಗುಣಮಟ್ಟ ಪರಿವೀಕ್ಷಣ ಸಮಾಲೋಚಕರ ನಿಯೋಜನೆ ಹಾಗೂ ಇವರಿಂದ ಯೋಜನಾ ಕಾಮಗಾರಿಗಳ ಮಾಸಿಕ ಪರಿವೀಕ್ಷಣೆ
- ಕಾಮಗಾರಿಗಳಿಗೆ ಬಳಸಿದ ಸಾಮಗ್ರಿಗಳ ಕಡ್ಡಾಯ ಗುಣಮಟ್ಟ ಪರೀಕ್ಷೆ ಮತ್ತು ಸಾಮಗ್ರಿ ಗುಣಮಟ್ಟ ಕುರಿತು ವರದಿಗಳ ಪರಿಶೀಲನೆ
- ಸಾಮಗ್ರಿಗಳ ರವಾನೆ ಪೂರ್ವ / ರವಾನೆಯ ನಂತರ / ಮೂರನೇ ವ್ಯಕ್ತಿಯಿಂದ ಪರಿವೀಕ್ಷಣೆ ಮಾಡಲಾಗುತ್ತಿದೆ.
- ಗುಣಮಟ್ಟ ದೃಢಪಡಿಸುವಿಕೆಯ ತಾಂತ್ರಿಕ ಕೈಪಿಡಿಯನ್ನು ಈ ಹಿಂದೆಯೇ ಕನ್ನಡದಲ್ಲಿ ತಯಾರಿಸಿ ಯೋಜನಾ ಗ್ರಾಮಗಳಿಗೆ ಹಂಚಲಾಗಿದೆ.
- ಸ್ವತಂತ್ರ ಗುಣಮಟ್ಟ ಪರಿವೀಕ್ಷಣ ಸಮಾಲೋಚಕರು ಕ್ಷೇತ್ರ ಭೇಟಿಯ ಸಮಯದಲ್ಲಿ ಗಮನಿಸಿದ ಅಂಶಗಳ ಕುರಿತು ಕ್ರಮಕ್ಕಾಗಿ ಅನುಷ್ಠಾನ ಅಧಿಕಾರಿಗಳ ಜೊತೆಗೆ ಸಮನ್ವಯ.

- ಗ್ರಾ.ನೀ.ಸ.ನೈ. ಸಮಿತಿಗಳಿಗೆ ಗುಣಮಟ್ಟ ದೃಢಪಡಿಸುವ ತರಬೇತಿಯನ್ನು ನೀಡಲಾಗಿದೆ.
- ಕಾಮಗಾರಿಗಳನ್ನು ಅನುಷ್ಠಾನಗೊಳಿಸಲ್ಪಡುವ ಇಂಜಿನಿಯರುಗಳಿಗೆ ಗುಣಮಟ್ಟ ದೃಢಪಡಿಸುವ ತರಬೇತಿಯನ್ನು ನೀಡಲಾಗಿದೆ.
- ಮುಕ್ತಾಯಗೊಂಡ ಕಾಮಗಾರಿಗಳಿಗೆ ಗುಣಮಟ್ಟ ದೃಢಪಡಿಸುವಿಕೆ.

**ಕಾರ್ಯಾಚರಣೆ ಮತ್ತು ನಿರ್ವಹಣೆ :**

ಗ್ರಾಮೀಣ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯು ಗ್ರಾಮ ಪಂಚಾಯತಿಗಳ ನಿಯಮಬದ್ಧ ಜವಾಬ್ದಾರಿಯೆಂದು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರನ್ವಯ ನಿಗದಿಮಾಡಲಾಗಿದೆ. ಸರ್ಕಾರವು ತನ್ನ ದಿನಾಂಕ 17–12–1999 ರ ಆದೇಶದಲ್ಲಿ ಕಿರು ನೀರು ಸರಬರಾಜು ಮತ್ತು ಕೊಳವೆ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಹಾಗೂ ದಿನಾಂಕ 26–02–2004 ರ ಆದೇಶದನ್ವಯ ಕೈಪಂಪು ಕೊಳವೆ ಬಾವಿಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಗ್ರಾಮ ಪಂಚಾಯತಿಗಳಿಗೆ ವಹಿಸಿಕೊಟ್ಟಿರುತ್ತದೆ. ಸರ್ಕಾರವು, ಗ್ರಾಮ ನೀರು ಸರಬರಾಜು ನೈರ್ಮಲ್ಯ ಸಮಿತಿಗಳ (ಗ್ರಾ.ನೀ.ಸ.ನೈ.ಸ.) ರಚನೆ ಕುರಿತು ದಿನಾಂಕ 03–05–2005ರ ಸುತ್ತೋಲೆ ಮೂಲಕ ಮಾರ್ಗಸೂಚಿಗಳನ್ನೂ ಕೂಡ ಹೊರಡಿಸಿರುತ್ತದೆ. ಅದರಂತೆ ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡ ಬಳಿಕ ಅವುಗಳನ್ನು ಗ್ರಾ.ನೀ.ಸ.ನೈ.ಸ. ಗಳಿಗೆ ಸ್ಥಳೀಯವಾಗಿ ಸಂಗ್ರಹಿಸಲಾಗುವ ಬಳಕೆದಾರರ ವೆಚ್ಚದಿಂದ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸಮರ್ಪಿಸಲಾಗುತ್ತದೆ.

**ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ:**

ಯೋಜನೆಯಡಿ ಆಂತರಿಕವಾಗಿ ಸಾಮರ್ಥ್ಯ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಮಹತ್ವದ ಕಾರ್ಯವನ್ನು ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ ಆಂತರೀಕರಿಸಲಾಗಿದೆ. ಜಿಲ್ಲಾ ಪಂಚಾಯತ್ – ಜಿಲ್ಲಾ ನೆರವು ಘಟಕಗಳಲ್ಲಿ ಇರುವ ಮೇಲ್ವಿಚಾರಣ ಮತ್ತು ಮೌಲ್ಯಮಾಪನ ಸಿಬ್ಬಂದಿಗಳನ್ನು ವೈಯಕ್ತಿಕ ಸಮಾಲೋಚನ ಆಧಾರದ ಮೇಲೆ ಸಮಾಲೋಚಕರನ್ನಾಗಿ ತೆಗೆದುಕೊಳ್ಳಲಾಗಿದೆ. ಜಿಲ್ಲೆಯಲ್ಲಿರುವ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಸಿಬ್ಬಂದಿಗಳು ಜಿಲ್ಲಾ ನೆರವು ಘಟಕಗಳು ಹಾಗೂ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಗೆ ನೇರವಾಗಿ ವರದಿ ಮಾಡುತ್ತಾರೆ.

**ಸುಸ್ಥಿರತೆ ಉಸ್ತುವಾರಿ ಅಭ್ಯಾಸ**

ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯು ಈ ಹಿಂದೆ ಅನುಷ್ಠಾನಗೊಳಿಸಲಾಗಿದ್ದ ಎರಡನೇ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ – ಜಲ ನಿರ್ಮಲ ಯೋಜನೆಯ ಅನುಷ್ಠಾನದಲ್ಲಿ ಅಳವಡಿಸಿಕೊಳ್ಳಲಾಗಿರುವಂತೆ ಸಾಂಪ್ರದಾಯಿಕ ಸೇವೆಯ ನೀತಿಯಿಂದ ಬೇಡಿಕೆ ಆಧಾರಿತ ಪಾಲುಗಾರಿಕೆ ನೀತಿಯತ್ತ ಗಣನೀಯ ಮಾರ್ಪಾಡು ತರುವ ನೆಲೆಗಟ್ಟಿನ ಮೇಲೆ ಇದ್ದು, ನೀರು ಮತ್ತು ನೈರ್ಮಲ್ಯ ವಲಯದಲ್ಲಿ ಬಂಡವಾಳ

ಹೂಡಿಕೆಗಳಿಂದ ಅನುಕೂಲ ಲಭ್ಯತೆ, ವಿಶ್ವಾಸಾರ್ಹತೆ ನ್ಯಾಯೋಚಿತತೆ ಹಾಗೂ ಹೆಚ್ಚಿನ ಸುಸ್ಥಿರತೆಯ ಗುರಿಯನ್ನು ಹೊಂದಿದೆ. ಯೋಜನೆಯು ಈ ಸಾಧನೆಗಳೊಂದಿಗೆ ಉದ್ದೇಶಿತ ಪರಿಣಾಮ ಹಾಗೂ ಅನುಷ್ಠಾನದ ಪರಿಣಾಮಗಳನ್ನು ಅಳೆಯಲು ಸುಸ್ಥಿರತೆ ಉಸ್ತುವಾರಿ ಅಭ್ಯಾಸವನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದ್ದು, ಕ್ರಮ ವಹಿಸಲಾಗಿದೆ. ಸುಸ್ಥಿರತೆ ಉಸ್ತುವಾರಿ ಅಭ್ಯಾಸವನ್ನು ಗ್ರಾಮಗಳಲ್ಲಿ ಅನುಷ್ಠಾನ ಮಾಡಲಾದ ಯೋಜನೆಗಳ ಭೌತಿಕ, ಆರ್ಥಿಕ ಹಾಗೂ ಸಾಂಸ್ಥಿಕ ಸುಸ್ಥಿರತೆಯನ್ನು ಖಚಿತಪಡಿಸುವ ಉದ್ದೇಶ ಹೊಂದಿರುವ ಹೊರಬರುವ ನೀತಿ (Exit Policy) ಯ ಭಾಗವಾಗಿ ಕೂಡ ಪರಿಗಣಿಸಲಾಗಿದೆ.

ಈ ಹಿಂದಿನ ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಯೋಜನೆಯಂತೆಯೇ ಈ ಯೋಜನೆಯಲ್ಲೂ ಪೂರ್ಣಗೊಂಡ ನೀರು ಮತ್ತು ನೈರ್ಮಲ್ಯ ಯೋಜನೆಗಳ ಸುಸ್ಥಿರತೆ ಉಸ್ತುವಾರಿ ಅಭ್ಯಾಸ (ಸುಮಾರು ಆರು ತಿಂಗಳುಗಳ ಬಳಿಕ) ವನ್ನು ಇಂಜಿನಿಯರ್/ ಸರ್ಕಾರೇತರ ಸಂಸ್ಥೆಗಳ ಸಾಮಾಜಿಕ ತಜ್ಞರು/ ಸಮಾಲೋಚಕರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳ ಪ್ರತಿನಿಧಿಗಳು, ಸಮುದಾಯದ ಪುರುಷರು ಮತ್ತು ಮಹಿಳೆಯರು, ಜಿಲ್ಲಾ ನೆರವು ಘಟಕದ/ ಪಂಚಾಯತ್ ರಾಜ್ ಸಂಸ್ಥೆಗಳ ಪ್ರತಿನಿಧಿಗಳಿಂದ ಕೂಡಿದ ಬಹು ಮುಖ ಪರಿಣಿತರ ತಂಡದಿಂದ ನಡೆಸಲು ಕ್ರಮ ವಹಿಸಲಾಗುತ್ತಿದೆ. ಈ ತಂಡವು ಗ್ರಾಮಗಳಿಗೆ ಭೇಟಿ ನೀಡಿ, ವರ್ಗೀಕರಿಸಿ ನಂತರ ಭಾಗವಹಿಸುವಿಕೆ ವಿಧಾನದಲ್ಲಿ ಸುಸ್ಥಿರತೆ ಉಸ್ತುವಾರಿ ಅಭ್ಯಾಸವನ್ನು ನಡೆಸಲು ಉದ್ದೇಶಿಸಿದ್ದು, ಪ್ರತಿ ಸುಸ್ಥಿರತೆ ಉಸ್ತುವಾರಿ ಅಭ್ಯಾಸವು ಬೆಳಗಿನ ಮತ್ತು ಸಾಯಂಕಾಲಕ ನೀರು ಪೂರೈಕೆ ಸೇರಿದಂತೆ 24 ಗಂಟೆಗಳ ಅವಧಿಯದಾಗಿರುತ್ತದೆ.

ಪೂರ್ಣಗೊಂಡ ಯೋಜನೆಗಳ ಸುಸ್ಥಿರತೆ ನಿರ್ಧರಣೆಯ ಪರಿಣಾಮಗಳನ್ನು ಸುಸ್ಥಿರ, ಬಹುತೇಕ ಸುಸ್ಥಿರ, ಅನಿಶ್ಚಿತ, ಸುಸ್ಥಿರವಲ್ಲದ ಎಂದು ನಿರ್ಧರಿಸಲು ಈ ಅಭ್ಯಾಸವು ಸಿದ್ಧ ಪ್ರಶ್ನಾವಳಿಗಳನ್ನು ಬಳಸಿ ಮಾಹಿತಿ ಸಂಗ್ರಹಿಸುವುದಲ್ಲದೆ 1) ಯೋಜನೆಯ ಕಾರ್ಯ ನಿರ್ವಹಣೆ 2) ಬಳಕೆದಾರರ ಗ್ರಹಿಕೆ 3) ಕಾರ್ಯಾಚರಣೆ, ನಿರ್ವಹಣೆ ಹಾಗೂ ಉಸ್ತುವಾರಿ 4) ರಚನೆ ಹಾಗೂ ಆಡಳಿತ ನಿರ್ವಹಣೆ ಇತ್ಯಾದಿಗಳ ಉಸ್ತುವಾರಿ, ವಿಶ್ಲೇಷಣೆ ಮೇಲೂ ಗಮನ ಕೇಂದ್ರೀಕರಿಸಲು ಕ್ರಮ ವಹಿಸಲಾಗಿದೆ.

ಮುಂದುವರೆದು ನೀರು ಸರಬರಾಜು ಯೋಜನೆಯ ಪೂರೈಕೆ ವ್ಯವಸ್ಥೆಯನ್ನು ಬಹುಕಾಲ ಸುಸ್ಥಿರವಾಗಿಸುವುದನ್ನು ಖಚಿತ ಪಡಿಸಲು ಮತ್ತು ಸಾಮರ್ಥ್ಯವನ್ನು ಇನ್ನೂ ಹೆಚ್ಚಿಸಲು ಯೋಜನಾ ಗ್ರಾಮಗಳಲ್ಲಿ ಪೂರ್ಣಗೊಂಡ ಯೋಜನೆಗಳ ಮೊದಲ ಸುತ್ತಿನ ಸುಸ್ಥಿರತೆ ಉಸ್ತುವಾರಿ ಅಭ್ಯಾಸಗಳಿಗೆ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಆಂತರಿಕ ಸಂಪನ್ಮೂಲಗಳನ್ನು ಬಳಸಿಕೊಂಡಿದ್ದು, ಮೊದಲ ಸುತ್ತಿನ ಸುಸ್ಥಿರತೆ ಉಸ್ತುವಾರಿ ಅಭ್ಯಾಸಗಳು ಪ್ರಾರಂಭಗೊಂಡಿದ್ದು, ಕಾರ್ಯವು ಪ್ರಗತಿಯಲ್ಲಿರುತ್ತದೆ. ಎರಡನೇ ಸುತ್ತಿನ ಹಾಗೂ ಮೂರನೇ ಸುತ್ತಿನ ಸುಸ್ಥಿರತೆ ಉಸ್ತುವಾರಿ ಅಭ್ಯಾಸವನ್ನು ಬಾಹ್ಯ ಸಂಸ್ಥೆಗಳಿಗೆ ನೀಡಲು ಉದ್ದೇಶಿಸಲಾಗಿದ್ದು, ಬಾಹ್ಯ ಸಂಸ್ಥೆಗಳನ್ನು ತೆಗೆದುಕೊಳ್ಳುವ ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಈ ಅಭ್ಯಾಸಗಳಿಂದ ಯೋಜನೆಗಳ ಸುಸ್ಥಿರತೆಯ ಕುರಿತು ಗಮನಕ್ಕೆ ಬಂದ ನ್ಯೂನ್ಯತೆಗಳನ್ನು ಸರಿಪಡಿಸಲು ಗ್ರಾಮ ಪಂಚಾಯತಿಗಳಿಗೆ ಮಾರ್ಗದರ್ಶನ ನೀಡಲು ಕ್ರಮ ವಹಿಸಲಾಗುವುದು.

**ಅಧ್ಯಾಯ - 4**

**2) ಭಾಗ-2:**

**ಅ) ಇಲಾಖೆಯು ಜಾರಿ ಮಾಡಿರುವ ಹೊಸ ಕಾನೂನು**

ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ನೀತಿ ನಿಯಮಗಳನ್ನು ರೂಪಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದ್ದು, ಸದರಿ ಜವಾಬ್ದಾರಿಯನ್ನು ಕ.ಗ್ರಾ.ನೀ.ಸ.&.ನೈ. ಸಂಸ್ಥೆಗೆ ವಹಿಸಲಾಗಿದೆ. ಸದರಿ ವಿಷಯವಾಗಿ ಈಗಾಗಲೇ ಈ ಕೆಳಗಿನ ಅಂಶಗಳನ್ನೊಳಗೊಂಡ ಕರಡು ಟಿಪ್ಪಣಿಯನ್ನು ತಯಾರಿಸಲಾಗಿದ್ದು, ಈ ಹಿಂದಿನ ಸಾಲಿನಲ್ಲಿಯೇ ಸಚಿವ ಸಂಪುಟದ ಅನುಮೋದನೆಗೆ ಇಟ್ಟಿದ್ದು, ಸಚಿವ ಸಂಪುಟದಲ್ಲಿ ಸದರಿ ಕರಡು ಟಿಪ್ಪಣಿಯಲ್ಲಿ ಕೆಲವು ಬದಲಾವಣೆ ಮಾಡಿ ಪುನ: ವಿಷಯವನ್ನು ಮರು ಮಂಡಿಸಲು ಸೂಚನೆ ನೀಡಲಾಗಿರುತ್ತದೆ.

- ಎಲ್ಲಾ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ರಾಜ್ಯದ ನೀತಿಯನ್ನು ಅನುಸರಿಸುವುದು.
- ರಾಜ್ಯ ಮತ್ತು ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಆವೃತ್ತ ನಿಧಿಯನ್ನು ಸ್ಥಾಪಿಸಿ ಅದರಡಿಯಲ್ಲಿ ಲಭ್ಯವಾಗುವ ಮೊತ್ತದಿಂದ ಸಂಬಂಧಪಟ್ಟ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚ ಹಾಗೂ ಸಂಗ್ರಹಿಸಲಾದ ದರದಲ್ಲಿ ಕೊರತೆಯನ್ನು ಭರಿಸುವುದು ಹಾಗೂ
- ಒಟ್ಟಾರೆ ನೀರು ಸರಬರಾಜು ವಿಧಾನದಿಂದ ಪ್ರಮಾಣ ಆಧಾರಿತ ವ್ಯವಸ್ಥೆಗೆ ಸಾಗುವುದು.

**5. ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ**

**5.1 2011-12ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ / ಸಿಬ್ಬಂದಿಗಳ ವಿವರ (ಮಾರ್ಚ್-2012 ರ ಅಂತ್ಯಕ್ಕೆ)**

| ಕ್ರ. ಸಂ. | ವರ್ಗ | ಒಟ್ಟು ಅಧಿಕಾರಿ / ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾ. | ಪ.ಪಂ. |
|---|---|---|---|---|---|---|
| 1 | ಎ | 10 | 7 | 3 | - | - |
| 2 | ಬಿ | 4 | 3 | 1 | - | - |
| 3 | ಸಿ | 10 | 4 | 6 | - | - |
| 4 | ಡಿ | 1 | 1 | - | - | - |

**5.2 2011-12ನೇ ಸಾಲಿನಲ್ಲಿ ಖಾಲಿ ಇರುವ, ನಿವೃತ್ತಿಯಾದ / ನಿವೃತ್ತಿಯಾಗಲಿರುವ ವಿವರ**

| ಕ್ರ.ಸಂ. | ವರ್ಗ | ಖಾಲಿ ಹುದ್ದೆಗಳು | ನಿವೃತ್ತಿಯಾದವರು | ನಿವೃತ್ತಿಯಾಗಲಿರುವವರು |
|---|---|---|---|---|
| 1 | ಎ | - | - | - |
| 2 | ಬಿ | 4 | 1 | - |
| 3 | ಸಿ | 5 | - | - |
| 4 | ಡಿ | - | - | - |
| **ಒಟ್ಟು** | | **9** | **1** | **-** |

### 5.3 2011-12ನೇ ಸಾಲಿನಲ್ಲಿ ತರಬೇತಿ ಪಡೆದ ಅಧಿಕಾರಿ / ಸಿಬ್ಬಂದಿಗಳ ವಿವರ

| ಕ್ರ. ಸಂ. | ವರ್ಗ | ರಾಜ್ಯದ ತರಬೇತಿ ಕಾರ್ಯಕ್ರಮಗಳು | ಹೊರ ರಾಜ್ಯದ ತರಬೇತಿ ಕಾರ್ಯಕ್ರಮಗಳು | ವಿದೇಶ ತರಬೇತಿ ಕಾರ್ಯಕ್ರಮಗಳು |
|---|---|---|---|---|
| 1 | ಎ | – | 1 | 2 |
| 2 | ಬಿ | 1 | 1 | – |
| 3 | ಸಿ | – | – | – |
| 4 | ಡಿ | – | – | – |
| ಒಟ್ಟು | | **1** | **1** | **2** |

### ವಿಧಾನಸಭಾ/ ವಿಧಾನಪರಿಷತ್/ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ವಿವರ

| ವಿಧಾನಸಭಾ ಪ್ರಶ್ನೆಗಳು | | ವಿಧಾನಪರಿಷತ್ ಪ್ರಶ್ನೆಗಳು | | ಗಮನ ಸೆಳೆಯುವ ಸೂಚನೆಗೆ ಉತ್ತರಗಳು | | ಮುಂದಿನ ಅಧಿವೇಶನದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು | |
|---|---|---|---|---|---|---|---|
| ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ವಿಧಾನಸಭಾ | ವಿಧಾನ ಪರಿಷತ್ |
| **2** | **2** | **6** | **6** | **1** | **1** | – | – |

### 5.5 ಮಾಹಿತಿ ಹಕ್ಕು ಅಧಿನಿಯಮ 2005

| ಸ್ವೀಕರಿಸಿದ ಒಟ್ಟು ಅರ್ಜಿಗಳು | ನಿಗದಿತ ಕಾಲಾವಧಿಯಲ್ಲಿ ಉತ್ತರಿಸಿದ ಅರ್ಜಿಗಳು | ಸ್ವೀಕರಿಸಿದ ಅರ್ಜಿ ಶುಲ್ಕ + ದಾಖಲೆ ಪ್ರತಿಗಳನ್ನು ನೀಡಲು ಸ್ವೀಕರಿಸಿದ ಮೊತ್ತ (ರೂ.ಗಳಲ್ಲಿ) | ಮೇಲ್ಮನವಿ ನಂತರ ಇತ್ಯರ್ಥಗೊಳಿಸಿದ ಅರ್ಜಿಗಳು | | ವಿಧಿಸಿದ ದಂಡ (ರೂ. ಗಳಲ್ಲಿ) |
|---|---|---|---|---|---|
| | | | ಮೇಲ್ಮನವಿ ಪ್ರಾಧಿಕಾರ ಇತ್ಯರ್ಥಗೊಳಿಸಿದ ಸಂಖ್ಯೆ | ಮಾಹಿತಿ ಹಕ್ಕು ಆಯೋಗದಿಂದ ಇತ್ಯರ್ಥಗೊಳಿಸಿದ ಸಂಖ್ಯೆ | |
| 13 | 13 | 160+100 | – | – | – |

### 6) ಲೆಕ್ಕ ಪರಿಶೋಧನಾ ವರದಿ

ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಹೆಚ್ಚುವರಿ ಆರ್ಥಿಕ ನೆರವಿನ ಯೋಜನೆಯಡಿ 2010-11ನೇ ಸಾಲಿನಲ್ಲಿ ಒಟ್ಟು ರೂ.1094.00 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಸದರಿ ಸಾಲಿನ ಯೋಜನಾ ವೆಚ್ಚದ ಲೆಕ್ಕ ಪರಿಶೋಧನಾ ಕಾರ್ಯವನ್ನು ಮೆ॥ ಸೋಂಡೆ ಶ್ರೀನಿವಾಸ್ ಅಂಡ್ ಕಂಪನಿ, ಬೆಂಗಳೂರು ಲೆಕ್ಕ ಪರಿಶೋಧಕರು ಕೈಗೊಂಡಿದ್ದು, ಲೆಕ್ಕಪರಿಶೋಧಿತ ದೃಢೀಕೃತ ವೆಚ್ಚವು ರೂ.999.30 ಲಕ್ಷಗಳಾಗಿರುತ್ತದೆ. 2011-12ನೇ ಆರ್ಥಿಕ ಸಾಲಿನಲ್ಲಿ ಮಾಡಲಾದ ವೆಚ್ಚದ ಲೆಕ್ಕ ಪರಿಶೋಧನೆಗಾಗಿ ಮೆ॥ ರಮೇಶ ಎಂ.ವೈ. & ಕಂ., ಮೈಸೂರು ಇವರಿಗೆ ನೀಡಲಾಗಿದ್ದು, ಲೆಕ್ಕ ಪರಿಶೋಧನಾ ಕಾರ್ಯವು ಪ್ರಗತಿಯಲ್ಲಿರುತ್ತದೆ.

* *

### 7.3 ಸಂಪೂರ್ಣ ಸ್ವಚ್ಛತಾ ಆಂದೋಲನದ ಗುರಿ:

ಗ್ರಾಮೀಣ ಪ್ರದೇಶಗಳಲ್ಲಿನ ಕೊಳಕು, ಗಲೀಜು, ವಾಸನೆ ಮುಂತಾದ ಅನೈರ್ಮಲ್ಯಗಳನ್ನು ತೊಡೆದು ಹಾಕಿ, ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮವೇ ಸಂಪೂರ್ಣ ಸ್ವಚ್ಛತಾ ಆಂದೋಲನ. ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ 2005 ರ ಅಕ್ಟೋಬರ್ 2 ರ ಗಾಂಧೀ ಜಯಂತಿಯ ದಿನದಿಂದ ಜಾರಿಯಲ್ಲಿದೆ. ಇದು ನಿರ್ಧಿಷ್ಟ ಕಾಲಾವಧಿಯ ಯೊಜನೆಯಾಗಿದ್ದು, 2017ರ ಅಂತ್ಯದ ವೇಳೆಗೆ ಸಂಪೂರ್ಣ ಪ್ರಗತಿಯನ್ನು ಸಾಧಿಸುವ ಗುರಿ ಹೊಂದಲಾಗಿದೆ.

ಗ್ರಾಮೀಣ ಪ್ರದೇಶಗಳ ಎಲ್ಲ ಕುಟುಂಬಗಳಲ್ಲಿ, ಶಾಲೆಗಳಲ್ಲಿ, ಅಂಗವಾಡಿಗಳಲ್ಲಿ ಶೌಚಾಲಯಗಳಿರಬೇಕು, ಮಲ–ಮೂತ್ರ ವಿಸರ್ಜನೆಗಳಿಗೆ ಶೌಚಾಲಯಗಳನ್ನೆ ಬಳಸಬೇಕು. ಉತ್ತಮ ನಿರ್ವಹಣೆ ಇರಬೇಕು. ಗ್ರಾಮದ ಬೀದಿಗಳು, ಓಣಿಗಳು ಶುಚಿಯಾಗಿರಬೇಕು. ಇದರ ಜೊತೆಗೆ ಮನೆಗಳ ಹಾಗೂ ಗ್ರಾಮದ ಕಸ, ಬಳಸಿದ ನೀರು ಮುಂತಾದವುಗಳನ್ನು ಉತ್ತಮವಾಗಿ ನಿರ್ವಹಿಸಬೇಕು. ಒಟ್ಟಾರೆ ರಾಜ್ಯದ ಎಲ್ಲ ಗ್ರಾಮಗಳ ಸಂಪೂರ್ಣ ಸ್ವಚ್ಛತೆಗೆ ಪೂರಕವಾದ ಚಟುವಟಿಕೆಗಳನ್ನು ಆಂದೋಲನದ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ.

1) **ಯೋಜನ ಅವಧಿ: 2005 ರಿಂದ 2017**
2) **ಯೋಜನ ಗಾತ್ರ : ರೂ. 1084.75 ಕೋಟಿಗಳು**

**ಆಂದೋಲನದ ಉದ್ದೇಶಗಳು:** ಗ್ರಾಮೀಣ ಜನರಿಗೆ ಶುಚಿತ್ವದ ಬಗ್ಗೆ ಅರಿವು ಹಾಗೂ ಆರೋಗ್ಯ ಶಿಕ್ಷಣ ನೀಡುವ ಮೂಲಕ ನೈರ್ಮಲ್ಯದ ಅಗತ್ಯವನ್ನು ಮನವರಿಕೆ ಮಾಡಿಕೊಳ್ಳುವುದು. ಸ್ವಚ್ಚ ಪರಿಸರಕ್ಕಾಗಿ ಜನರಿಂದಲೇ ಬೇಡಿಕೆ ಸೃಷ್ಟಿಸುವುದು. ಗ್ರಾಮೀಣ ಪ್ರದೇಶಗಳ ಎಲ್ಲಾ ಕುಟುಂಬಗಳೂ ಶೌಚಾಲಯಗಳನ್ನು ಹೊಂದುವಂತೆ ಹಾಗೂ ಬಳಸುವಂತೆ ಉತ್ತೇಜಿಸುವುದು. ವೈಯಕ್ತಿಕ ಸ್ವಚ್ಚತೆ, ಕುಟುಂಬದ ಸ್ವಚ್ಚತೆ ಹಾಗೂ ಸಮುದಾಯ ಸ್ವಚ್ಛತೆಯನ್ನು ಉತ್ತೇಜಿಸುವುದು ಮತ್ತು ಈ ಮೂಲಕ ಗ್ರಾಮೀಣ ಜನರ ಜೀವನ ಮಟ್ಟದಲ್ಲಿ ಸುಧಾರಣೆ ತರುವುದು. ಹಳ್ಳಿಗಳ ಎಲ್ಲಾ ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ನೈರ್ಮಲ್ಯದ ಸೌಲಭ್ಯಗಳನ್ನು ನಿರ್ಮಿಸುವುದು ಹಾಗೂ ಮಕ್ಕಳಲ್ಲಿ ನೈರ್ಮಲ್ಯದ ಅಭ್ಯಾಸಗಳನ್ನು ರೂಢಿಸುವುದು. ಗ್ರಾಮ ಹಾಗೂ ಸಮುದಾಯ ಮಟ್ಟದಲ್ಲಿಯೇ ತ್ಯಾಜ್ಯಗಳ ಸೂಕ್ತ ವಿಲೇವಾರಿ ಹಾಗೂ ಸಮರ್ಪಕ ನಿರ್ವಹಣೆಯನ್ನು ಅಭಿವೃದ್ಧಿಪಡಿಸುವ ಮೂಲಕ ಇಡೀ ಗ್ರಾಮೀಣ ಪರಿಸರದಲ್ಲಿ ಸಂಪೂರ್ಣ ನೈರ್ಮಲ್ಯವನ್ನು ಸಾಧಿಸುವುದು ಸಂಪೂರ್ಣ ಸ್ವಚ್ಚತಾ ಆಂದೋಲನದ ಪ್ರಮುಖ ಉದ್ದೇಶವಾಗಿರುತ್ತದೆ.

**ಆಂದೋಲನದ ಪ್ರಮುಖ ಘಟಕಾಂಶಗಳು: ಗೃಹ ಶೌಚಾಲಯಗಳು:** ಗ್ರಾಮೀಣ ಪ್ರದೇಶದ ಎಲ್ಲ ಕುಟುಂಬಗಳು ಶೌಚಾಲಯವನ್ನು ಹೊಂದುವಂತೆ ಹಾಗೂ ಬಳಕೆ ಮಾಡುವಂತೆ ಮಾಡುವುದು ಆಂದೋಲನದ ಪ್ರಮುಖ ಉದ್ಧೇಶಗಳಲ್ಲಿ ಒಂದಾಗಿದೆ. ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳು

ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಕೆ ಮಾಡಿದರೆ ಅಂತಹ ಕುಟುಂಬಗಳಿಗೆ ಆಂದೋಲನದ ಅಡಿಯಲ್ಲಿ ರೂ.3700/–ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

**ಶಾಲಾ ಮತ್ತು ಅಂಗನವಾಡಿ ಶೌಚಾಲಯ:** ಗ್ರಾಮೀಣ ಪ್ರದೇಶಗಳ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಹಾಗೂ ಅಂಗನವಾಡಿಗಳಲ್ಲಿ ಸ್ವಚ್ಛತೆಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಮಕ್ಕಳಲ್ಲಿ ಚಿಕ್ಕ ವಯಸ್ಸಿನಿಂದಲೇ ಸ್ವಚ್ಛತೆಯ ಅಭ್ಯಾಸಗಳನ್ನು ಉತ್ತೇಜಿಸಲಾಗುತ್ತಿದೆ. ಶಾಲೆ ಮತ್ತು ಅಂಗನವಾಡಿಗಳಲ್ಲಿ ಸ್ವಚ್ಛತೆಯ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಹಾಗೂ ರಾಜ್ಯಸರ್ಕಾರಗಳು 70:30 ಅನುಪಾತದಲ್ಲಿ ಅನುಧಾನವನ್ನು ಒದಗಿಸುತ್ತವೆ. ಪರಿಷ್ಕೃತ ಮಾರ್ಗದರ್ಶಿ ಸೂತ್ರಗಳ ಅನ್ವಯ ಶಾಲಾ ಶೌಚಾಲಯದ ಘಟಕವೆಚ್ಚ ರೂ.35000/–ಗಳಾಗಿದ್ದು, ಅಂಗನವಾಡಿ ಶೌಚಾಲಯದ ಘಟಕ ವೆಚ್ಚ ರೂ.8000/–ಗಳಾಗಿರುತ್ತವೆ.

**ಘನ ಮತ್ತು ದ್ರವ ತ್ಯಾಜ್ಯಗಳ ನಿರ್ವಹಣೆ:** ಗ್ರಾಮೀಣ ಪ್ರದೇಶಗಳಲ್ಲಿನ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸುವ ಉದ್ದೇಶದೊಂದಿಗೆ ಘನ ಹಾಗೂ ದ್ರವ ತ್ಯಾಜ್ಯಗಳ ನಿರ್ವಹಣೆಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು ಆಯಾ ಜಿಲ್ಲೆಗಳ ಒಟ್ಟು ಯೋಜನಾಗಾತ್ರದಲ್ಲಿ ಶೇ.10 ರಷ್ಟು ಅನುದಾನವನ್ನು ಒದಗಿಸಲಾಗಿದೆ. 60:20:20 ರ ಅನುಪಾತದಲ್ಲಿ ಕೇಂದ್ರ, ರಾಜ್ಯ ಹಾಗೂ ಸಮುದಾಯದ ವಂತಿಗೆಯನ್ನು ಒಳಗೊಂಡಿರುತ್ತದೆ.

**ಅನುಷ್ಠಾನ ವಿಧಾನ:** ಸಂಪೂರ್ಣ ಸ್ವಚ್ಚತಾ ಆಂದೋಲನವನ್ನು ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಕ್ಷೇತ್ರ ಮಟ್ಟದಲ್ಲಿ ಆಂದೋಲನವನ್ನು ಅನುಷ್ಠಾನಗೊಳಿಸುವ ಹೊಣೆ ಸಂಪೂರ್ಣವಾಗಿ ಗ್ರಾಮ ಪಂಚಾಯಿತಿಯದ್ದಾಗಿರುತ್ತದೆ.

**ಆ) ಶಾಖೆಯ ಆಡಳಿತಾತ್ಮಕ ಸ್ವರೂಪ:**

ಮಿಷನ್ ನಿರ್ದೇಶಕರು

↓

ಅಪರ ನಿರ್ದೇಶಕರು (ನೀರು ಮತ್ತು ನೈರ್ಮಲ್ಯ)

↓ ↓

ಲೆಕ್ಕ ಸಹಾಯಕರು — ಸಮಾಲೋಚಕರು (4)

ಡಾಟಾ ಎಂಟ್ರಿ ಆಪರೇಟರ್

ಗ್ರೂಫ್ 'ಡಿ'

**ಅಧ್ಯಾಯ –2: ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಪಡೆದ ಅನುದಾನ, ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳು:**

ಜಿಲ್ಲಾವಾರು ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರವನ್ನು ಅನುಬಂಧ –7.3(ಅ) ಮತ್ತು 7.3(ಆ) ರಲ್ಲಿ ನೀಡಲಾಗಿದೆ.

## ಅಧ್ಯಾಯ -3 ಅ) ವರದಿ ಸಾಲಿನಲ್ಲಿ ಪ್ರಶಸ್ತಿ / ಪ್ರಶಂಸೆ ವಿವರಗಳು

**ನಿರ್ಮಲ ಗ್ರಾಮ ಪುರಸ್ಕಾರ:** ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಸಾಧಿಸಲು, ಪಂಚಾಯತ್ ರಾಜ್ ಸಂಸ್ಥೆಗಳನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರವು ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿದ ಗ್ರಾಮ, ತಾಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ 'ನಿರ್ಮಲ ಗ್ರಾಮ ಪುರಸ್ಕಾರ' ನೀಡುತ್ತದೆ. ಪಂಚಾಯತ್ ವ್ಯಾಪ್ತಿಯ ಎಲ್ಲ ಕುಟುಂಬಗಳು ಶೌಚಾಲಯಗಳನ್ನು ಹೊಂದಿ ಬಳಸುತ್ತಿರಬೇಕು. ಶಾಲೆಗಳು ಮತ್ತು ಅಂಗನವಾಡಿಗಳಲ್ಲೂ ಶೌಚಾಲಯಳಿದ್ದು ಮಕ್ಕಳು ಮಲ-ಮೂತ್ರ ವಿಸರ್ಜನೆಗೆ ಶೌಚಾಲಯಗಳನ್ನೇ ಬಳಸುತ್ತಿರಬೇಕು. ಗ್ರಾಮಗಳ ತ್ಯಾಜ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರಬೇಕು ಅಂತಹ ಗ್ರಾಮ ಪಂಚಾಯಿತಿ,/ತಾಲೂಕು ಪಂಚಾಯಿತಿ/ಜಿಲ್ಲಾ ಪಂಚಾಯಿತಿಗಳಿಗೆ ಕೇಂದ್ರ ಸರ್ಕಾರ ನೀಡುವ ಅತ್ಯುನ್ನತ ಗೌರವ ನಿರ್ಮಲ ಗ್ರಾಮ ಪುರಸ್ಕಾರ. ಜನಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಗಳಿಗೆ ಐವತ್ತು ಸಾವಿರ ರೂಪಾಯಿಗಳಿಂದ 5 ಲಕ್ಷಗಳು, ತಾಲೂಕು ಪಂಚಾಯಿತಿಗಳಿಗೆ 10 ಲಕ್ಷಗಳಿಂದ 20 ಲಕ್ಷಗಳು ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ರೂ. 30 ಲಕ್ಷಗಳಿಂದ 50 ಲಕ್ಷಗಳವರೆಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕ ನೀಡಲಾಗುತ್ತದೆ.

**ರಾಜ್ಯದ ಎನ್.ಜಿ.ಪಿ ಸಾಧನೆ:** ರಾಜ್ಯದಲ್ಲಿ 2007 ರಿಂದ ಈವರೆಗೆ 1069 ಗ್ರಾಮ ಪಂಚಾಯಿತಿಗಳು, ಆರು ತಾಲೂಕು ಪಂಚಾಯಿತಿಗಳು ಹಾಗೂ ಒಂದು ಜಿಲ್ಲಾ ಪಂಚಾಯತಿ ತಮ್ಮ ವ್ಯಾಪ್ತಿಯಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸುವ ಮೂಲಕ ಕೇಂದ್ರ ಸರ್ಕಾರ ನೀಡುವ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಿವೆ.

**ನೈರ್ಮಲ್ಯ ರಾಜ್ಯ ಪ್ರಶಸ್ತಿ:** ಗ್ರಾಮೀಣ ಪ್ರದೇಶಗಳ ನೈರ್ಮಲ್ಯ ಸುಧಾರಣೆಗಾಗಿ ರಾಜ್ಯವು ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರೂ ಸಹ ಹಲವಾರು ಅಡೆತಡೆಗಳಿಂದಾಗಿ ಹೆಚ್ಚಿನ ಪ್ರಗತಿ ಸಾಧ್ಯವಾಗಿಲ್ಲ. ಕರಾವಳಿ ಹಾಗೂ ಮಲೆನಾಡಿನ ಭಾಗಗಳಾದ ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಉತ್ತರ ಕನ್ನಡ, ಮತ್ತು ಚಿಕ್ಕಮಗಳೂರು ಮುಂತಾದ ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಸ್ಫೂರ್ತಿದಾಯಕ ಪ್ರಗತಿ ಸಾಧಿಸಲಾಗಿದೆ. ಆದರೆ ರಾಜ್ಯದ ಹೆಚ್ಚಿನ ಜಿಲ್ಲೆಗಳಲ್ಲಿನ ಸಾಧನೆ ತೃಪ್ತಿದಾಯಕವಾಗಿಲ್ಲ. ಗ್ರಾಮೀಣ ಜನರನ್ನು ನೈರ್ಮಲ್ಯ ಸೌಲಭ್ಯಗಳಿಗಾಗಿ ಉತ್ತೇಜಿಸುವುದು ಹಾಗೂ ಈ ನಿಟ್ಟಿನಲ್ಲಿ ಸಮುದಾಯವನ್ನು ಸಂಘಟಿಸುವುದು ಕಷ್ಟಕರ ಸಂಗತಿಯಾಗಿರುವುದೇ ಇದಕ್ಕೆ ಪ್ರಮುಖ ಕಾರಣ. ಶೌಚಾಲಯಗಳನ್ನು ನಿರ್ಮಿಸಿಕೊಂಡರೂ ಸಹ ಬಳಸುವ ಆಸಕ್ತಿ ಜನರಲ್ಲಿ ಇಲ್ಲದಿದ್ದಲ್ಲಿ ಶೌಚಾಲಯಗಳ ನಿರ್ಮಾಣದಿಂದ ನಿರೀಕ್ಷಿತ ಫಲಿತಾಂಶ ಸಾಧಿಸಿದಂತಾಗುವುದಿಲ್ಲ. ಶಿಕ್ಷಣ, ಸಮುದಾಯ ಸಂಘಟನೆ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರೋತ್ಸಾಹಧನ ಮುಂತಾದ ಅಂಶಗಳ ಮೂಲಕ ಗ್ರಾಮೀಣ ಜನತೆ ನೈರ್ಮಲ್ಯದ ಅಭ್ಯಾಸಗಳನ್ನು ಹೊಂದುವಂತೆ ಪ್ರೇರೇಪಿಸಬಹುದಾಗಿದ್ದು, ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ನೈರ್ಮಲ್ಯವನ್ನು ಆಧ್ಯತೆಯ ಮೇಲೆ ಕೈಗೆತ್ತಿಕೊಂಡು ಉತ್ತಮ ಫಲಿತಾಂಶ ಪಡೆಯಲು ಪಂಚಾಯತ್ ರಾಜ್ ಸಂಸ್ಥೆಗಳನ್ನು ಉತ್ತೇಜಿಸುವ ಸಲುವಾಗಿ ರಾಜ್ಯ ಸರ್ಕಾರವು 2009 ರ ಅಕ್ಟೋಬರ್ 2 ಗಾಂಧೀಜಯಂತಿಯಂದು 'ರಾಜ್ಯ ಪ್ರಶಸ್ತಿ' ಯೋಜನೆಗೆ ಚಾಲನೆ ನೀಡಿರುತ್ತದೆ.

ಗ್ರಾಮೀಣ ಸ್ವಚ್ಛತೆಯನ್ನು ತ್ವರಿತಗೊಳಿಸಲು ತೀವ್ರಗತಿಗಾಗಿ (Acceleration) ಪ್ರಶಸ್ತಿ ಹಾಗೂ ಈಗಾಗಲೇ ಸ್ವಚ್ಛತೆಯನ್ನು ಸಾಧಿಸಿರುವ ಪಂಚಾಯತ್‌ಗಳಲ್ಲಿ ಸುಸ್ಥಿರತೆಯನ್ನು ಕಾಪಾಡಲು ಸುಸ್ಥಿರತೆ (Sustainability) ಪ್ರಶಸ್ತಿ ನೀಡಲಾಗುತ್ತಿದೆ.

ವಿವಿಧ ಹಂತಗಳಲ್ಲಿ ನೀಡಲಾಗುವ ಪ್ರಶಸ್ತಿಯನ್ನು ತಾಲೂಕು ಮಟ್ಟದಲ್ಲಿ ನೈರ್ಮಲ್ಯ, ಜಿಲ್ಲಾ ಮಟ್ಟದಲ್ಲಿ **"ರಜತ ನೈರ್ಮಲ್ಯ"** ವಿಭಾಗೀಯ ಮಟ್ಟದಲ್ಲಿ **"ಸ್ವರ್ಣ ನೈರ್ಮಲ್ಯ"** ಹಾಗೂ ರಾಜ್ಯ ಮಟ್ಟದಲ್ಲಿ **"ನೈರ್ಮಲ್ಯ ರತ್ನ"** ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಪ್ರಶಸ್ತಿಯ ಮೊತ್ತ ಗ್ರಾಮ ಪಂಚಾಯಿತಿಗೆ ರೂ.1 ಲಕ್ಷದಿಂದ 19 ಲಕ್ಷಗಳು, ತಾಲೂಕು ಪಂಚಾಯಿತಿಗೆ ರೂ.20 ಲಕ್ಷ ಹಾಗೂ ಜಿಲ್ಲಾ ಪಂಚಾಯಿತಿಗೆ ರೂ.30 ಲಕ್ಷಗಳವರೆಗೆ ನೀಡಲಾಗುತ್ತದೆ.

**ನೈರ್ಮಲ್ಯ ರಾಜ್ಯ ಪ್ರಶಸ್ತಿಯ ಪ್ರಗತಿ:** ಸಂಪೂರ್ಣ ಸ್ವಚ್ಛತೆ ಹಾಗೂ ನೈರ್ಮಲ್ಯ ಸುಸ್ಥಿರತೆಗಾಗಿ ರಾಜ್ಯ ಸರ್ಕಾರ ನೀಡುವ ರಾಜ್ಯ ನೈರ್ಮಲ್ಯ ಪ್ರಶಸ್ತಿಯನ್ನು 2010-11ನೇ ಸಾಲಿನಲ್ಲಿ 2 ಜಿಲ್ಲಾ ಪಂಚಾಯತಿ, 3 ತಾಲ್ಲೂಕು ಪಂಚಾಯತಿ, 129 ಗ್ರಾಮ ಪಂಚಾಯಿತಿಗಳು, 88 ಶಾಲೆಗಳು ಹಾಗೂ 82 ಅಂಗನವಾಡಿಗಳು ಪಡೆದುಕೊಂಡಿದ್ದು, ಪ್ರಶಸ್ತಿ ವಿಜೇತ ಸಂಸ್ಥೆಗಳಿಗೆ ನಗದು ಬಹುಮಾನವಾಗಿ ಒಟ್ಟು ರೂ.491 ಲಕ್ಷಗಳನ್ನು ನೀಡಲಾಗಿದೆ.

### ಆ) ಯೋಜನೆಯ ಪರಿಣಾಮಾಕಾರಿ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳು ಮತ್ತು ಮೌಲ್ಯಮಾಪನ ಅಧ್ಯಯನ, ವರದಿ ಹಾಗೂ ತೆಗೆದುಕೊಂಡ ಕ್ರಮಗಳು

ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮ ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಇದನ್ನು ರಾಜ್ಯಾದ್ಯಂತ ಅಕ್ಟೋಬರ್-2, 2005ರಂದು ಅನುಷ್ಠಾನ ಮಾಡಲಾಯಿತು. ಮಾರ್ಚ್ 2017ರೊಳಗೆ ಕರ್ನಾಟಕ ರಾಜ್ಯ ಸರ್ಕಾರ ಸಂಪೂರ್ಣ ಬಯಲು ವಿಸರ್ಜನೆ ಮುಕ್ತ ರಾಜ್ಯವಾಗಬೇಕೆಂಬುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಗ್ರಾಮೀಣ ಸಮುದಾಯವು ನೈರ್ಮಲ್ಯ ಸೌಲಭ್ಯಗಳನ್ನು ಹೊಂದುವಂತೆ ಹಾಗೆಯೇ ಸಂಪೂರ್ಣ ನೈರ್ಮಲ್ಯವನ್ನು ಸಾಧಿಸುವಂತೆ ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯನ್ನು ರೂಪಿಸಿ ರೂ.50 ಸಾವಿರದಿಂದ ರೂ.50 ಲಕ್ಷಗಳವರೆಗೆ ಬಹುಮಾನದ ಮೊತ್ತ ನಿಗಧಿಗೊಳಿಸಲಾಗಿದೆ. ಅದೇ ರೀತಿ ರಾಜ್ಯ ಸರ್ಕಾರವು ಕೂಡ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವನ್ನು ಇನ್ನಷ್ಟು ತೀವ್ರಗೊಳಿಸುವ ಸಲುವಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ, ಶಾಲೆ ಮತ್ತು ಅಂಗನವಾಡಿಗಳಿಗೆ ನೈರ್ಮಲ್ಯ ಪ್ರಶಸ್ತಿಯನ್ನು 2010, ಅಕ್ಟೋಬರ್ 2 ರಂದು ಅನುಷ್ಠಾನಗೊಳಿಸಲಾಗಿತ್ತು.

ರಾಜ್ಯದ ಪ್ರತಿಯೊಂದು ಮನೆಯು ಶೌಚಾಲಯವನ್ನು ಹೊಂದಬೇಕೆನ್ನುವ ಗುರಿ ಇಟ್ಟುಕೊಂಡು ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವನ್ನು ತೀವ್ರಗತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರ ವಾರ್ಡ್/ ಗ್ರಾಮ ಪಂಚಾಯತಿ/ ತಾಲ್ಲೂಕು ಪಂಚಾಯತಿ/ ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಹೊಸ ಕಾರ್ಯತಂತ್ರವನ್ನು ಮಾಡಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಕಾರ್ಯಗಾರವನ್ನು ಮಾಡಲಾಯಿತು. ಮೊದಲನೇ ಹಂತದಲ್ಲಿ ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಕಾರ್ಯಗಾರ ಮಾಡಿ 2017ರೊಳಗೆ ಬಯಲು ಮಲ ವಿಸರ್ಜನೆಯ ಮುಕ್ತ ಮಾಡುವುದು. ಎರಡನೇ ಹಂತದಲ್ಲಿ ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕ ಜಿಲ್ಲೆಗಳಲ್ಲಿ ಕಾರ್ಯಗಾರ ಮಾಡಿ 2015ರೊಳಗೆ ಬಯಲು ಮಲ ವಿಸರ್ಜನೆ ಮುಕ್ತ ಮಾಡುವಂತೆ ಕ್ರಿಯಾ ಯೋಜನೆ ರೂಪಿಸಲಾಗಿದೆ. ಅದೇ ರೀತಿ ಕರಾವಳಿ ಕರ್ನಾಟಕ ಜಿಲ್ಲೆಗಳನ್ನು 2012ರೊಳಗೆ ಬಯಲು ಮಲ ವಿಸರ್ಜನೆ ಮುಕ್ತ ಮಾಡುವಂತೆ ಹೊಸ ಕಾರ್ಯತಂತ್ರ ರೂಪಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ. ಮತ್ತು ಸಾಧಿಸಲಾಗಿರುವ ಪ್ರಗತಿಯ ವಿವರವನ್ನು ಆನ್‌ಲೈನ್‌ನಲ್ಲಿ ದಾಖಲಿಸಲು ಕ್ರಮ ವಹಿಸಲಾಗುತ್ತಿದೆ.

**ಮೌಲ್ಯಮಾಪನ:-** ಸಂಪೂರ್ಣ ಸ್ವಚ್ಛತಾ ಆಂದೋಲನದ ಕಾರ್ಯಕ್ರಮದಡಿಯಲ್ಲಿ ಸಾಧಿಸಿರುವ ಪ್ರಗತಿಯ ಬಗ್ಗೆ ಪರಿಶೀಲಿಸಲು ಮೌಲ್ಯಮಾಪನಕ್ಕಾಗಿ ಮಾ|| ಪ್ರಜ್ಞಾ ರಿಸರ್ಚ್ ಅಂಡ್ ಕನ್ಸಲ್‌ಟೆಂಟ್ ಸಂಸ್ಥೆಯವರಿಗೆ ವಹಿಸಿದ್ದು ಜುಲೈ 2012ರ ಅಂತ್ಯಕ್ಕೆ ಸಂಪೂರ್ಣ ವರದಿ ನೀಡುವಂತೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.

**ಅಧ್ಯಾಯ -5**

**ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ**

**5.1 : 2011-12ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ / ಸಿಬ್ಬಂದಿಗಳ ವಿವರ (ಮಾರ್ಚ್-2012ರ ಅಂತ್ಯಕ್ಕೆ)**

| ಕ್ರ.ಸಂ. | ವರ್ಗ | ಒಟ್ಟು ಅಧಿಕಾರಿ / ಸಿಬ್ಬಂದಿಗಳ ಸಂಖ್ಯೆ | ಪುರುಷರ ಸಂಖ್ಯೆ | ಮಹಿಳೆಯರ ಸಂಖ್ಯೆ | ಪ.ಜಾ | ಪ.ಪಂ. |
|---|---|---|---|---|---|---|
| 1 | ಅ | 1 | 1 | - | - | - |
| 2 | ಆ | - | -- | - | - | - |
| 3 | ಇ | 1 | 1 | - | - | - |
| 4 | ಈ | - | - | - | - | - |

**5.2 2011-12ನೇ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರ**

| **ಕ್ರ.ಸಂ** | **ಹುದ್ದೆ** | **ಸಂಖ್ಯೆ** |
|---|---|---|
| 1 | ಆಪ್ತ ಸಹಾಯಕರು | - |
| 2 | ಗ್ರೂಪ್ ಡಿ | 1 |
| 3 | ವಾಹನ ಚಾಲಕರು | 0 |
| 4 | ಸಲಹೆಗಾರರು | 7 |
| 5 | ಇತರೆ (ಡಾಟಾ ಎಂಟ್ರಿ ಆಪರೇಟರ್) | 2 |

## 2011-12ನೇ ಸಾಲಿನಲ್ಲಿ ಪಡೆದ ಪ್ರಶಸ್ತಿಗಳ ವಿವರ:

| ಕ್ರ.ಸಂ | ಪ್ರಶಸ್ತಿ ವಿವರ | ವೈಯಕ್ತಿಕವಾಗಿದ್ದಲ್ಲಿ ಅಧಿಕಾರಿ/ಸಿಬ್ಬಂದಿ ಹೆಸರು | ಷರಾ |
|---|---|---|---|
| 1 | ರಾಷ್ಟ್ರ ಪ್ರಶಸ್ತಿ | ನಿರ್ಮಲ ಗ್ರಾಮ ಪುರಸ್ಕಾರ 2011 | 103 ಗ್ರಾ.ಪಂ.ಗೆ |
| 2 | ರಾಜ್ಯ ಪ್ರಶಸ್ತಿ | ರಾಜ್ಯ ನೈರ್ಮಲ್ಯ ಪ್ರಶಸ್ತಿ 2010 | 127 ಗ್ರಾ.ಪಂ.ಗೆ |

## ವಿಧಾನಸಭಾ / ವಿಧಾನಪರಿಷತ್ / ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ವಿವರ:

| ವಿಧಾನಸಭಾ ಪ್ರಶ್ನೆಗಳು | | ವಿಧಾನ ಪರಿಷತ್ ಪ್ರಶ್ನೆಗಳು | | ಗಮನ ಸೆಳೆಯುವ ಸೂಚನೆಗೆ ಉತ್ತರಗಳು | | ಮುಂದಿನ ಅಧಿವೇಶನದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು | |
|---|---|---|---|---|---|---|---|
| ಒಟ್ಟು ಸ್ವೀಕೃತ ಸಂಖ್ಯೆ. | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ. | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ. | ಉತ್ತರಿಸಿದ ಸಂಖ್ಯೆ | ವಿಧಾನಸಭಾ | ವಿಧಾನ ಪರಿಷತ್ |
| 7 | 7 | 8 | 8 | 1 | 1 | - | - |

## ಮಾಹಿತಿ ಹಕ್ಕು ಅದಿನಿಯಮ 2005

| ಸ್ವೀಕರಿಸಿದ ಒಟ್ಟು ಅರ್ಜಿಗಳು | ನಿಗಧಿತ ಕಾಲಾವಧಿ ಯಲ್ಲಿ ಉತ್ತರಿಸಿದ ಅರ್ಜಿಗಳು | ಸ್ವೀಕರಿಸಿದ ಅರ್ಜಿ ಶುಲ್ಕ + ದಾಖಲೆ ಪ್ರತಿಗಳನ್ನು ನೀಡಲು ಸ್ವೀಕರಿಸಿದ ಮೊತ್ತ (ರೂ.ಗಳಲ್ಲಿ) | ಮೇಲ್ಮನವಿ ನಂತರ ಇತ್ಯರ್ಥಗೊಳಿಸಿದ ಅರ್ಜಿಗಳು | | ವಿಧಿಸಿದ ದಂಡ (ರೂ.ಗಳಲ್ಲಿ) |
|---|---|---|---|---|---|
| | | | ಮೇಲ್ಮನವಿ ಪ್ರಾಧಿಕಾರ ಇತ್ಯರ್ಥ ಗೊಳಿಸಿದ ಸಂಖ್ಯೆ | ಮಾಹಿತಿ ಹಕ್ಕು ಆಯೋಗದಿಂದ ಇತ್ಯರ್ಥ ಗೊಳಿಸಿದ ಸಂಖ್ಯೆ | |
| 3 | 3 | - | - | - | - |

* *

## ಅನುಬಂಧ–6.1(ಅ)

## ಸುವರ್ಣ ಗ್ರಾಮೋದಯ ಯೋಜನೆಯ ಆರ್ಥಿಕ (ದಿ:1.4.2011 ರಿಂದ 31.3.2012ರವರೆಗೆ) ಮತ್ತು ಭೌತಿಕ (ಸಂಚಿತ) ಪ್ರಗತಿ

| ಕ್ರ. ಸಂ | ಜಿಲ್ಲೆ | ಆರ್ಥಿಕ(ರೂ.ಲಕ್ಷಗಳಲ್ಲಿ) | | | | | | | ಭೌತಿಕ-ಸಂಚಿತ (ಗ್ರಾಮಗಳ ಸಂಖ್ಯೆ) - 1ನೇ ಹಂತ | | | | | | | | | |
|---|---|---|---|---|---|---|---|---|---|---|---|---|---|---|---|---|---|---|
| | | ಆಯವ್ಯಯ ಹಂಚಿಕೆ | ಪ್ರಾರಂಭಿಕ ಶಿಲ್ಕು | ಅನುದಾನ ಬಿಡುಗಡೆ | ಲಭ್ಯವಿರುವ ಅನುದಾನ | ಸಾಧನೆ | ಉಳಿಕೆ | ಲಭ್ಯವಿರುವ ಅನುದಾನಕ್ಕೆ ಶೇ. | ಆಯ್ಕೆಯಾದ ಗ್ರಾಮಗಳ ಸಂಖ್ಯೆ | KLACಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | PREDಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | Nirmiti Kendraಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |
| | ಬೆಂಗಳೂರು ವಿಭಾಗ | | | | | | | | | | | | | | | | | |
| 1 | ಬೆಂಗಳೂರು(ನ) | 1118.50 | 35.49 | 1118.50 | 1153.99 | 869.10 | 284.89 | 75.31 | 24 | 4 | 4 | 4 | 20 | 20 | 14 | | | |
| 2 | ಬೆಂಗಳೂರು(ಗ್ರಾ) | 792.81 | 18.18 | 792.81 | 811.00 | 461.26 | 349.74 | 56.88 | 31 | | | | 31 | 22 | 22 | | | |
| 3 | ಚಿಕ್ಕಬಳ್ಳಾಪುರ | 1478.29 | 134.62 | 1478.29 | 1612.91 | 929.51 | 683.40 | 57.63 | 34 | | | | 34 | 32 | 32 | | | |
| 4 | ಚಿತ್ರದುರ್ಗ | 1921.27 | 156.70 | 1921.27 | 2077.97 | 999.68 | 1078.29 | 48.11 | 32 | 5 | 5 | 5 | 27 | 22 | 22 | | | |
| 5 | ದಾವಣಗೆರೆ | 2439.01 | 43.35 | 2039.01 | 2082.36 | 1515.77 | 566.59 | 72.79 | 35 | 31 | 31 | 31 | 3 | 3 | 3 | 1 | 1 | 1 |
| 6 | ಕೋಲಾರ | 1167.04 | 193.17 | 1013.04 | 1206.21 | 633.58 | 572.63 | 52.53 | 46 | | | | 46 | 46 | 46 | | | |
| 7 | ರಾಮನಗರ | 1104.57 | 0.16 | 1104.57 | 1104.73 | 817.97 | 286.76 | 74.04 | 34 | 1 | 1 | 1 | 33 | 32 | 32 | | | |
| 8 | ಶಿವಮೊಗ್ಗ | 1070.63 | 0.00 | 814.63 | 814.64 | 602.75 | 211.89 | 73.99 | 45 | 5 | 5 | 5 | 34 | 30 | 30 | 6 | 6 | 4 |
| 9 | ತುಮಕೂರು | 3975.53 | 294.17 | 2801.53 | 3095.70 | 2268.66 | 827.04 | 73.28 | 67 | 6 | 6 | 6 | 61 | 47 | 47 | | | |
| | ಒಟ್ಟು | 15067.65 | 875.84 | 13083.65 | 13959.49 | 9098.28 | 4861.21 | 65.18 | 348 | 52 | 52 | 52 | 289 | 254 | 248 | 7 | 7 | 5 |
| | ಗುಲ್ಬರ್ಗಾ ವಿಭಾಗ | | | | | | | | | | | | | | | | | |
| 10 | ಬಳ್ಳಾರಿ | 2281.36 | 908.54 | 2060.36 | 2968.90 | 1515.84 | 1453.06 | 51.06 | 32 | 11 | 11 | 11 | 21 | 21 | 20 | | | |
| 11 | ಬೀದರ್ | 4479.40 | 542.97 | 4479.40 | 5022.37 | 3119.95 | 1902.42 | 62.12 | 49 | 33 | 33 | 33 | 16 | 16 | 16 | | | |
| 12 | ಗುಲ್ಬರ್ಗಾ | 6831.82 | 990.78 | 3981.82 | 4972.60 | 2962.27 | 2010.33 | 59.57 | 43 | 27 | 27 | 26 | 16 | 15 | 14 | | | |
| 13 | ಯಾದಗಿರಿ | 3063.32 | 221.79 | 1349.32 | 1571.11 | 1211.45 | 359.66 | 77.11 | 24 | 19 | 19 | 19 | 5 | 5 | 5 | | | |
| 14 | ಕೊಪ್ಪಳ | 4516.29 | 193.14 | 3748.29 | 3941.43 | 2889.03 | 1052.40 | 73.30 | 31 | 11 | 11 | 11 | 20 | 20 | 20 | | | |
| 15 | ರಾಯಚೂರು | 4038.35 | 935.00 | 2116.35 | 3051.35 | 2478.32 | 573.03 | 81.22 | 47 | 26 | 26 | 26 | 21 | 21 | 21 | | | |
| | ಒಟ್ಟು | 25210.54 | 3792.22 | 17735.54 | 21527.76 | 14176.86 | 7350.90 | 65.85 | 226 | 127 | 127 | 126 | 99 | 98 | 96 | | | |

## ಸುವರ್ಣ ಗ್ರಾಮೋದಯ ಯೋಜನೆಯ ಆರ್ಥಿಕ (ದಿ:1.4.2011 ರಿಂದ 31.3.2012ರವರೆಗೆ) ಮತ್ತು ಭೌತಿಕ (ಸಂಚಿತ) ಪ್ರಗತಿ

| ಕ್ರ. ಸಂ | ಜಿಲ್ಲೆ | ಆರ್ಥಿಕ(ರೂ.ಲಕ್ಷಗಳಲ್ಲಿ) | | | | | | | ಭೌತಿಕ-ಸಂಚಿತ (ಗ್ರಾಮಗಳ ಸಂಖ್ಯೆ) - 1ನೇ ಹಂತ | | | | | | | | | |
|---|---|---|---|---|---|---|---|---|---|---|---|---|---|---|---|---|---|---|
| | | ಆಯವ್ಯಯ ಹಂಚಿಕೆ | ಪ್ರಾರಂಭಿಕ ಶಿಲ್ಕು | ಅನುದಾನ ಬಿಡುಗಡೆ | ಲಭ್ಯವಿರುವ ಅನುದಾನ | ಸಾಧನೆ | ಉಳಿಕೆ | ಲಭ್ಯವಿರುವ ಅನುದಾನಕ್ಕೆ ಶೇ. | ಆಯ್ಕೆಯಾದ ಗ್ರಾಮಗಳ ಸಂಖ್ಯೆ | KLACಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | PREDಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | Nirmiti Kendraಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |
| | ಬೆಳಗಾವಿ ವಿಭಾಗ | | | | | | | | | | | | | | | | | |
| 16 | ಬಾಗಲಕೋಟೆ | 1803.55 | 431.23 | 1803.55 | 2234.78 | 1386.62 | 848.16 | 62.05 | 45 | 22 | 22 | 22 | 23 | 23 | 19 | | | |
| 17 | ಬೆಳಗಾವಿ | 5460.10 | 494.03 | 4788.10 | 5282.14 | 4203.11 | 1079.03 | 79.57 | 97 | 85 | 85 | 83 | 12 | 12 | 12 | | | |
| 18 | ಬಿಜಾಪುರ | 2761.27 | 520.23 | 2301.27 | 2821.50 | 2181.11 | 640.39 | 77.30 | 34 | 20 | 20 | 20 | 14 | 14 | 13 | | | |
| 19 | ಧಾರವಾಡ | 1079.00 | 260.17 | 1079.00 | 1339.17 | 1339.17 | 0.00 | 100.00 | 16 | 3 | 3 | 3 | 13 | 12 | 12 | | | |
| 20 | ಗದಗ | 963.40 | 0.59 | 963.40 | 963.99 | 572.31 | 391.68 | 59.37 | 19 | | | | 19 | 18 | 16 | | | |
| 21 | ಹಾವೇರಿ | 1828.14 | 244.85 | 1728.14 | 1972.99 | 1831.97 | 141.02 | 92.85 | 29 | | | | 29 | 28 | 28 | | | |
| 22 | ಉತ್ತರ ಕನ್ನಡ | 1487.81 | 33.67 | 1487.81 | 1521.48 | 1080.66 | 440.82 | 71.03 | 48 | 2 | 2 | 2 | 46 | 43 | 43 | | | |
| | ಒಟ್ಟು | 15383.27 | 1984.77 | 14151.27 | 16136.04 | 12594.95 | 3541.10 | 78.05 | 288 | 132 | 132 | 130 | 156 | 150 | 143 | | | |
| | ಮೈಸೂರು ವಿಭಾಗ | | | | | | | | | | | | | | | | | |
| 23 | ಚಾಮರಾಜನಗರ | 1043.67 | 476.01 | 674.67 | 1150.68 | 848.00 | 302.68 | 73.70 | 24 | 18 | 18 | 18 | 6 | 5 | 5 | | | |
| 24 | ಚಿಕ್ಕಮಗಳೂರು | 2029.31 | 283.52 | 1920.31 | 2203.83 | 1146.15 | 1057.68 | 52.01 | 30 | 22 | 22 | 22 | 8 | 8 | 8 | | | |
| 25 | ದಕ್ಷಿಣ ಕನ್ನಡ | 1937.05 | 1.31 | 1659.05 | 1660.37 | 1571.04 | 89.32 | 94.62 | 32 | | | | 32 | 26 | 26 | | | |
| 26 | ಹಾಸನ | 1952.80 | 41.73 | 1467.80 | 1509.53 | 947.80 | 561.73 | 62.79 | 102 | | | | 102 | 102 | 99 | | | |
| 27 | ಕೊಡಗು | 796.98 | 73.54 | 668.98 | 742.52 | 500.32 | 242.20 | 67.38 | 21 | 1 | 1 | 1 | 20 | 13 | 13 | | | |
| 28 | ಮಂಡ್ಯ | 2281.23 | 42.44 | 1866.23 | 1908.67 | 804.40 | 1104.27 | 42.14 | 61 | 9 | 9 | 9 | 52 | 47 | 47 | | | |
| 29 | ಮೈಸೂರು | 2826.71 | 565.07 | 2106.71 | 2671.78 | 1878.23 | 793.55 | 70.30 | 46 | 24 | 24 | 24 | 22 | 18 | 16 | | | |
| 30 | ಉಡುಪಿ | 1470.79 | 48.62 | 1289.79 | 1338.41 | 965.21 | 373.20 | 72.12 | 26 | | | | 26 | 26 | 25 | | | |
| | ಒಟ್ಟು | 14338.54 | 1532.24 | 11653.54 | 13185.78 | 8661.15 | 4524.63 | 65.69 | 342 | 74 | 74 | 74 | 268 | 245 | 239 | | | |
| 31 | ಕೆಆರ್ಐಡಿಎಲ್ | | | 13376.00 | 13376.00 | | 13376.00 | | | | | | | | | | | |
| | ರಾಜ್ಯದ ಒಟ್ಟು | 70000.00 | 8185.06 | 70000.00 | 78185.06 | 44531.24 | 33653.83 | 56.96 | 1204 | 385 | 385 | 382 | 812 | 747 | 726 | 7 | 7 | 5 |

ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು 1139

ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು 1113

ಅನುಬಂಧ-6.1(ಅ)

## ಸುವರ್ಣ ಗ್ರಾಮೋದಯ ಯೋಜನೆಯ ಆರ್ಥಿಕ (ದಿ:1.4.2011 ರಿಂದ 31.3.2012ರವರೆಗೆ) ಮತ್ತು ಭೌತಿಕ (ಸಂಚಿತ) ಪ್ರಗತಿ

| ಕ್ರ. ಸಂ | ಜಿಲ್ಲೆ | ಭೌತಿಕ-ಸಂಚಿತ (ಗ್ರಾಮಗಳ ಸಂಖ್ಯೆ) - 2ನೇ ಹಂತ | | | | | | | | | | ಭೌತಿಕ-ಸಂಚಿತ (ಗ್ರಾಮಗಳ ಸಂಖ್ಯೆ) - 3ನೇ ಹಂತ | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಆಯ್ಕೆಯಾದ ಗ್ರಾಮಗಳ ಸಂಖ್ಯೆ | KLACಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | PREDಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | Nirmiti Kendraಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ಆಯ್ಕೆಯಾದ ಗ್ರಾಮಗಳ ಸಂಖ್ಯೆ | KLACಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | PREDಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | Nirmiti Kendraಗೆ ವಹಿಸಿರುವ ಗ್ರಾಮಗಳು | ರಸ್ತೆ ಚರಂಡಿ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು | ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಗ್ರಾಮಗಳು |
| 1 | 2 | 20 | 21 | 22 | 23 | 24 | 25 | 26 | 27 | 28 | 29 | 30 | 31 | 32 | 33 | 34 | 35 | 36 | 37 | 38 | 39 |
| | ಬೆಂಗಳೂರು | | | | | | | | | | | | | | | | | | | | |
| 1 | ಬೆಂಗಳೂರು(ನ) | | | | | | | | | | | 32 | | | | 32 | | | | | |
| 2 | ಬೆಂಗಳೂರು(ಗ್ರಾ) | | | | | | | | | | | 40 | | | | 40 | | | | | |
| 3 | ಚಿಕ್ಕಬಳ್ಳಾಪುರ | | | | | | | | | | | 56 | 20 | 5 | 3 | 23 | | | 12 | | |
| 4 | ಚಿತ್ರದುರ್ಗ | | | | | | | | | | | 52 | 28 | 25 | | 24 | | | | | |
| 5 | ದಾವಣಗೆರೆ | | | | | | | | | | | 48 | 35 | 22 | 3 | 7 | | | 6 | | |
| 6 | ಕೋಲಾರ | | | | | | | | | | | 85 | 14 | 14 | 14 | 71 | | | | | |
| 7 | ರಾಮನಗರ | | | | | | | | | | | 54 | | | | 54 | | | | | |
